# ನಂಬಿಕೆಯ ವೀರರ

ಸಂಡೇ ಸ್ಕೂಲ್




## ಶಿಕ್ಷಕರ ಪುಸ್ತಕ

ಎಲ್ಲಾ ವಯಸ್ಸಿನವರಿಗೆ

# ನಂಬಿಕೆಯ ವೀರರು

"ಮಕ್ಕಳೇ ಪ್ರಮುಖರು" ಸಂಡೇ ಸ್ಕೂಲ್ ಪಠ್ಯಕ್ರಮ

ಶಿಕ್ಷಕರ ಪುಸ್ತಕ

ಎಲ್ಲಾ ವಯಸ್ಸಿನವರಿಗೆ

ಹಂತ 2: ಪಾಠಗಳು 1-13 (14-26)

ವೆಬ್: [www.ChildrenAreImportant.com/heroes/](http://www.ChildrenAreImportant.com/heroes/)

"ಮಕ್ಕಳೇ ಪ್ರಮುಖರು" ಇಡೀ ತಂಡಕ್ಕೆ ಧನ್ಯವಾದಗಳು!

ಸಂಪಾದಕರು: ಕ್ರಿಸ್ಟಿನಾ ಕ್ರಾಸ್
ಕ್ರಿಯಾತ್ಮಕ ತಂಡ: ಅಬ್ರಿಲ್ ಪಲಾಸಿಯೋಸ್ ಕಮಾಚೊ, ಅರೇಲಿ ಜುರಿಯಲ್ ಸಲಿನಾಸ್ ಸಾನ್ ಚೆಜ಼, ಡ್ವೈಟ್ ಕ್ರಾಸ್, ಜೆನ್ನಿಫರ್ ಸಾನ್ ಚೆಜ಼ ನೀಟೋ, ಜೂಲಿಯೋ ಸಾನ್ ಚೆಜ಼ ನೀಟೋ, ಮೈಕ್ ಕಂಗಾಸ್, ಮಾನ್ ಸರೇಟ್ ಡೂರನ್ ಡಯಾಜ್, ಸುಕಿ ಕಂಗಾಸ್, ವೆರೋನಿಕ ತೋಜ್, ಮತ್ತು ವಿಕ್ಕಿ ಕಂಗಾಸ್.
ಈ ಕಾರ್ಯಕ್ರಮದಲ್ಲಿ ಉತ್ತಮ ಸಂಗೀತ ನೀಡಿರುವ ರೂಬೇನ್ ಡಾರಿಯೊರವರಿಗೆ ಧನ್ಯವಾದಗಳು.
ಭಾಷಾಂತರ ತಂಡ: ಅಲಿನಿಯವೆರ, ಅನುಪಮ ವಾಂಖೆಡೆ, ಆಂಟನ್ ಕ್ಲಿಮಕ್, ಅರಾಜ್ ಮಮ್ಮದ್ ಜದೆಹ್, ಅರೋಮ ಪಬ್ಲಿಕೇಷನ್ ಮತ್ತು ಮೀಡಿಯಾ, ಆರ್ಟುರೊ ಜೂನಿಯರ್ ಬೊರೊನ್, ಬ್ಲೆಸ್ಸಿ ಜೇಕಬ್, ಕಾರ್ಮೇಲಾ ಡಾನ್ ಫ್ಲೋರ್ಸ್, ಕ್ರಿಸ್ ಬ್ರೆಸ್ ನಾನ್, ಡೇವಿಡ್ ರಾಜು, ಎಫ್ರಾಯಿಮ್ ನುಗುಣ ಮಿರೋಬಿ, ಫೆನ್ನಿ ಜೇಕಬ್, ಗೀನವ್, ಹಮೀದ್ ರೀಜ ಅಜ್ಮಿ (ಹಮೀದ್.ಅಜ್ಮಿ***1364*** ಅಟ್ ಜೀಮೇಲ್.ಕಾಮ್), ಹೆಯುಡ್ರೆ, ಐ-ಕ್ಲವರ್.ಕಾಮ್, ಇಕ್ಬಾಲ್ ಮನ್, ಜೇಕಬ್ ಕುರುವಿಲ್ಲಾ, ಕಾಮಿಲ್ ತುರ್ಕ್, ಕರುಂಗುರು ಮ್ವಾಂಗಿ, ಕಿರಣ್, ಮಿತ್ರಾಯ್ ಮೊಂಡಲ್, ಮಾರ್ಕೊ ಚು, ಮಾರ್ಕೊಸ್ ರೋಚ, ಮಾಥೀವ್ ದಾಸ್, ಮಿತೇಶ್ ಮಂಡಾಲಿಯಾ, ಮ್ರಾಮ್ಲಾಮ, ಶ್ರೀಮತಿ. ಗೀತ ಶ್ರೀ ನವನೀತ ಕ್ರಿಷ್ಣನ್, ನಾಸಿಮ್ ಬೌತಿಯಾ, ನಿಕ್ ಬೆಂಕ್, ಪೌಲ್ ಮ್ವಾಂಗಿ, ಪೌಲ್ ಸ್ಟೀಫನ್, ರಾನಾ***922***, ರೂಬಿನಾ ರಾಜ್, ಸಫ್ದಾರ್ ಖಾನ್, ಶಾರೋಷನ್***15***, ತಲೆಂತೊ-ಉನಿಡೊ, ಊರಿಯೊಟಮ್, ವರ್ದಿಯಾ ಜೂಲಿಯನ್ ಶಾ ಕಾನ್ ಕರೆಕಾ, ಯೋ ಜಂಗ್ ಚೆನ್, ಜೀನಾ ಮಿರೆಲ್ಲಾ ಬಾರ್ ಜಗಾ ಅಕ್ರೆನ್ ಬಿಯಾ

# ಪರಿಚಯ

"ನಂಬಿಕೆಯ ವೀರರು" ಸಂಡೇ ಸ್ಕೂಲ್ ಎರಡನೇ ಹಂತಕ್ಕೆ ಸ್ವಾಗತ!

ನಾವು ಹಳೆಯ ಒಡಂಬಡಿಕೆಯ ವಿವಿಧ "ವೀರರ" ಮೂಲಕ ನಮ್ಮ ನಂಬಿಕೆಯ ಬಗ್ಗೆ ಕಲಿತುಕೊಳ್ಳುವಾಗ, ನಮ್ಮ ನಂಬಿಕೆಗೆ ಮೂಲ ಏನು ಮತ್ತು 2ನೇ ಹಂತದಲ್ಲಿ ಅದು ನಮ್ಮ ಮುಖ್ಯ ವಿಷಯವಾಗಿದೆಯೇ ಎಂಬದನ್ನು ತಿಳಿದುಕೊಳ್ಳುವದು ಮುಖ್ಯವಾಗಿದೆ. ನಾವು ಖುರ್ಚಿಯ ಮೇಲೆ ಕುಳಿತುಕೊಳ್ಳುವಾಗ, ಕುರ್ಚಿ ನಮ್ಮನ್ನು ಹಿಡಿದುಕೊಳ್ಳುತ್ತದೆ, ಅದು ಮುರಿಯುವದಿಲ್ಲ ಅಥವಾ ನಮ್ಮನ್ನು ನೆಲಕ್ಕೆ ಬೀಳಿಸುವದಿಲ್ಲ ಎಂದು ನಂಬುತ್ತೇವೆ. ನಮ್ಮ ನಂಬಿಕೆ ಕುರ್ಚಿಯ ಮೇಲೆ, ಅದರ ಬಲದ ಮೇಲಿರುತ್ತದೆ ಯಾಕಂದರೆ ಅದರಿಂದ ಯಾವುದೇ ತೊಂದರೆಯಾಗುವದಿಲ್ಲ ಎಂಬ ಭರವಸೆ ನಮಗಿರುತ್ತದೆ. ದೇವರ ವಿಷಯದಲ್ಲಿಯೂ ಹೀಗೆಯೇ ಆಗುತ್ತದೆ. ದೇವರು ಯಾರು ಎಂದು ನಮಗೆ ಗೊತ್ತಿರುವಾಗ ನಮ್ಮ ನಂಬಿಕೆ ಸ್ಪಷ್ಟ ಮತ್ತು ಸರಳವಾಗಿರುತ್ತದೆ. ದೇವರು ಯಾರು ಎಂದು ನಾವು ತಿಳಿದುಕೊಳ್ಳಬೇಕು, ಆಗ ಆತನಲ್ಲಿ ವಿಶ್ರಮಿಸಿಕೊಳ್ಳಲು ಸಾಧ್ಯವಾಗುತ್ತದೆ. ಕುರ್ಚಿ ನಮ್ಮನ್ನು ಕಾಪಾಡುತ್ತದೆ ಎಂದು ನಮಗೆ ಗೊತ್ತಿರುವ ಹಾಗೆಯೇ ದೇವರು ಯಾರೆಂದು ಮತ್ತು ಆತನು ನಮ್ಮನ್ನು ಕಾಪಾಡುತ್ತಾನೆ ಎಂದು ನಾವು ತಿಳಿದುಕೊಳ್ಳಬೇಕು. ಈ ಹಂತದ ವಾಕ್ಯ ಹೇಳುವದೇನೆಂದರೆ ದೇವರು ಇದ್ದಾನೆ ಎಂದು ನಾವು ಮೊದಲು ನಂಬಬೇಕು. ದೇವರು ಇದ್ದಾನೆ! ಈ ಗ್ರಹದಲ್ಲಿ ನಾವು ಒಂಟಿಗರಲ್ಲ, ದೇವರು ಲೋಕವನ್ನು ಮತ್ತು ನಮ್ಮನ್ನು ಉಂಟುಮಾಡಿದನು. ಎರಡನೆಯದಾಗಿ, ಆತನಿಗಾಗಿ ತವಕಪಡುವವರಿಗೆ ಆತನು ಬಹುಮಾನ ಕೊಡುತ್ತಾನೆ ಎಂದು ನಾವು ನಂಬಬೇಕು. ದೇವರ ಬಗ್ಗೆ ಸತ್ಯವೇದ ಏನು ಹೇಳುತ್ತದೆ ಎಂಬದನ್ನು ನಾವು ನಂಬಬೇಕು. ನಾವು ಹಳೆಯ ಒಡಂಬಡಿಕೆಯ ಕಥೆಗಳನ್ನು ನೋಡುವವರಾಗಿದ್ದೇವೆ ಆದರೆ ಈಗ ದೇವರ ಬಗ್ಗೆ ನೋಡುವವರಾಗಿರೋಣ. ನಾವು ದೇವರ ಸ್ವಭಾವದಿಂದ ಏನು ಕಲಿಯುತ್ತೇವೆ, ಆತನು ಯಾರು ಮತ್ತು ಆತನು ವಿವಿಧ ಪರಿಸ್ಥಿತಿಗಳಲ್ಲಿ ಯಾವ ರೀತಿ ನಡೆದುಕೊಳ್ಳುತ್ತಾನೆ? ನಾವು ದೇವರ ಬಗ್ಗೆ ಹೆಚ್ಚಾಗಿ ತಿಳಿದುಕೊಳ್ಳುವಾಗ, ಎಲ್ಲವನ್ನೂ ನಂಬುವಾಗ, ಅವು ನಮ್ಮ ನಂಬಿಕೆಯನ್ನು ಹೆಚ್ಚಿಸುತ್ತವೆ. ದೇವರಿಗೆ ಕೃತಜ್ಞತೆ ಸಲ್ಲಿಸುವದು ಉತ್ತಮವಾದ ಕಾರ್ಯವಾಗಿದೆ ಯಾಕಂದರೆ ಮುಖ್ಯ ವಾಕ್ಯವು ಹೇಳುವದೇನೆಂದರೆ . . .

"ಆದರೆ ನಂಬಿಕೆಯಿಲ್ಲದೆ ದೇವರನ್ನು ಮೆಚ್ಚಿಸುವದು ಅಸಾಧ್ಯ; ದೇವರ ಬಳಿಗೆ ಬರುವವನು ದೇವರು ಇದ್ದಾನೆ, ಮತ್ತು ತನ್ನನ್ನು ಹುಡುಕುವವರಿಗೆ ಪ್ರತಿಫಲವನ್ನು ಕೊಡುತ್ತಾನೆ ಎಂದು ನಂಬುವದು ಅವಶ್ಯ." ಇಬ್ರಿಯ 11:6

"ವೀರರ ಆಟ" ಆಡಲು ಸಹಾಯವಾಗುವಂಥ ಪ್ರಶ್ನೆಗಳನ್ನು ಈ ಹಂತದಲ್ಲಿ ಮೂರು ಸಲ ಸೇರಿಸಿದ್ದೇವೆ. ನೀವು 4, 8 ಮತ್ತು 18 ಪಾಠಗಳಲ್ಲಿ ಈ ಆಟಗಳನ್ನು ಆಡಬೇಕೆಂದು ನಮ್ಮ ಬಯಕೆಯಾಗಿದೆ. ಉದಾಹರಣೆಗೆ, ಸಹಜವಾದ ತರಗತಿಯ ನಂತರ ಒಂದು ತಾಸು ಬೇರ್ಪಡಿಸಿಕೊಳ್ಳಿರಿ ಅಥವಾ ವಾರದ ಯಾವುದಾದರೊಂದು ದಿವಸದಲ್ಲಿ ಆಟವಾಡಿರಿ. ಶಿಕ್ಷಕರಾಗಿ, ಮಕ್ಕಳಿಗೆ ಕಲಿಸಲು ಈ ಆಟವನ್ನು ನೀವು ಮತ್ತೊಂದು ಸಾಧನವನ್ನಾಗಿ ಉಪಯೋಗಿಸಿಕೊಳ್ಳಬಹುದು.

ನಿಮ್ಮ ಬೆಂಬಲಕ್ಕಾಗಿ ಈ ಸಾಮಗ್ರಿಯನ್ನು ವಿವಿಧ ಭಾಗಗಳಲ್ಲಿ ಹೇಗೆ ಉಪಯೋಗಿಸಬೇಕು ಎಂಬದನ್ನು ತಿಳಿಸಲು 1ನೇ ಹಂತದ ದರ್ಶನ ಹಾಗೂ ಸೂಚನೆಗಳನ್ನು ಇಲ್ಲಿ ಮತ್ತೆ ಕೊಟ್ಟಿದ್ದೇವೆ. ಮಕ್ಕಳ ಜೀವಿತವನ್ನು ಮಾರ್ಪಡಿಸಲು ನಿಮ್ಮ ತರಗತಿಯಲ್ಲಿ ಈ ಕಾರ್ಯಕ್ರಮವನ್ನು ಮತ್ತೆ ಉಪಯೋಗಿಸುವಾಗ ನಿಮಗೆ ಸಹಾಯವಾಗಲಿ ಎಂಬದು ನಮ್ಮ ನಿರೀಕ್ಷೆಯಾಗಿದೆ.

ಈ ಹಂತದಲ್ಲಿ ಸರ್ವಲೋಕವನ್ನು ಉಂಟುಮಾಡಿ, ಹಳೆಯ ಒಡಂಬಡಿಕೆಯಲ್ಲಿ ಜೀವಿಸಿ ಕಾರ್ಯಮಾಡಿದ ಮತ್ತು ಇಂದು ನಮ್ಮ ಮಧ್ಯದಲ್ಲಿ ಜೀವಿಸುತ್ತ ಕಾರ್ಯಮಾಡುತ್ತಿರುವ ಸರ್ವಶಕ್ತನಾದ ದೇವರಿಗೆ ಸಮೀಪವಾಗುವಂತೆ ನಾವು ನಿಮಗೆ ಸವಾಲು ಕೊಡುತ್ತಿದ್ದೇವೆ. ನಿಮ್ಮ ಸುತ್ತಮುತ್ತಲಿನಲ್ಲಿರುವ ಮಕ್ಕಳು "ನಂಬಿಕೆಯ ವೀರರ" ಜೀವವನ್ನು ನೋಡುವಂತೆ ಮಾಡುವ ಮೂಲಕ ದೇವರು ನಿಮ್ಮ ಜೀವಿತವನ್ನು ಆಶೀರ್ವದಿಸಲಿ!

ಪ್ರೀತಿಯಿಂದ,

ಮಕ್ಕಳೇ ಪ್ರಮುಖರು ತಂಡ



# ಈ ಪಠ್ಯವನ್ನು ಉಪಯೋಗಿಸುವದು ಹೇಗೆ

## ಕಥೆಯ ಅವಶ್ಯಕತೆ/ವಿಶ್ಲೇಷಣ

"ಒಳ್ಳೆಯ ಅಧ್ಯಾಪಕನು ತನ್ನ ವಿದ್ಯಾರ್ಥಿಗಳಲ್ಲಿ ಜ್ಞಾನವನ್ನು ತುಂಬಿಸುವದಿಲ್ಲ, ಬದಲಾಗಿ ಅದರಲ್ಲಿ ಅವರ ಆಸಕ್ತಿಯನ್ನು ಹೆಚ್ಚಿಸುತ್ತಾನೆ ಮತ್ತು ತಾವಾಗಿಯೇ ಅದನ್ನು ಸಂಪಾದಿಸಿಕೊಳ್ಳಲು ಮುಂದಾಗುವಂತೆ ಮಾಡುತ್ತಾನೆ." – ಎಂ. ಜೆ. ಬೆರ್ರಿಲ್.

ನಿಮ್ಮ ವಿದ್ಯಾರ್ಥಿಗಳು ತರಗತಿಯಲ್ಲಿ ಗಮನ ಕೊಡುವದು ಮಾತ್ರವಲ್ಲ ಬದಲಾಗಿ ತಮಗೆ ಕಲಿಸಲಾಗಿರುವದನ್ನು ಜೀವಿತಗಳಲ್ಲಿಗೆ ಅಳವಡಿಸಿಕೊಳ್ಳಬೇಕಾದರೆ ಅವರಿಗೆ ಪ್ರೇರಣೆ ಬಹಳ ಅವಶ್ಯ. ಅನೇಕರು ತಮ್ಮ ವಿದ್ಯಾರ್ಥಿಗಳಿಗೆ ಬಹುಮಾನ ಮತ್ತು ಸಿಹಿ ಕೊಟ್ಟು ಅವರ ಗಮನ ತಮ್ಮೆಡೆಗೆ ತರಲು ಪ್ರಯತ್ನಿಸುತ್ತಾರೆ ಅಥವಾ ಅವರ ಗಮನ ಕೊಡದಿದ್ದರೆ ಅವರನ್ನು ಶಿಕ್ಷಿಸುತ್ತಾರೆ. ಈ ಎರಡೂ ವಿಧಾಗಳು ನಿಮ್ಮ ತರಗತಿಯಲ್ಲಿ ಅವರು ಒಳ್ಳೆಯ ನಡವಳಿಕೆಯುಳ್ಳವರಾಗಿರಲು ಸಹಾಯ ಮಾಡುತ್ತವೆ, ಆದರೆ ಮನೆಗೆ ಹೋದ ನಂತರ ಕಲಿತುಕೊಂಡ ತತ್ವಗಳಿಗನುಸಾರ ಜೀವಿಸಲು ಇವುಗಳಿಂದ ಅವರಿಗೆ ಯಾವುದೇ ಪ್ರೇರಣೆ ಸಿಗುವದಿಲ್ಲ. ಕ್ರೈಸ್ತೀಯ ಸಭೆಗಳಲ್ಲಿ ಮಕ್ಕಳ ಅಧ್ಯಾಪಕರಾಗಿ, ಅವರು ವಯಸ್ಕರ ಕೂಟಗಳಿಗೆ ತೊಂದರೆ ಕೊಡಬಾರದೆಂಬ ಕಾರಣಕ್ಕೆ ನಾವು ಅವರನ್ನು ರಂಜಿಸುವದಿಲ್ಲ. ಬದಲಾಗಿ ದೇವರನ್ನು ಹಿಂಬಾಲಿಸುವ, ಆತನನ್ನು ತಿಳಿದುಕೊಳ್ಳುವ ಮತ್ತು ಆತನ ಸೇವೆ ಮಾಡುವ ಹೊಸ ತಲೆಮಾರಿನ ವಿಶ್ವಾಸಿಗಳನ್ನು ರೂಪಿಸಲು ನಾವು ಪ್ರಯತ್ನಿಸುವವರಾಗಿದ್ದೇವೆ. ಇದು ನಮ್ಮಲ್ಲಿ ಯಾರಿಗೇ ಆದರೂ ಕಷ್ಟದ ಕೆಲಸವಾಗಿದ್ದರೂ, ನಮ್ಮೆಲ್ಲರಿಗಿಂತ ಹೆಚ್ಚಾಗಿ ದೇವರು ತಾನೇ ಪ್ರತಿಯೊಬ್ಬ ಮಗುವಿನ ವಿಷಯದಲ್ಲಿ ಚಿಂತಿಸುತ್ತಾನೆ ಮತ್ತು ಮುಂದುವರೆಯಲು ಶಕ್ತಿ ಮತ್ತು ಪ್ರತಿಯೊಬ್ಬ ಮಗುವಿನ ಜೀವಿತದಲ್ಲಿ ಸೇವೆ ಮಾಡಲು ಹಾಗೂ ಪ್ರೋತ್ಸಾಹ ನೀಡಲು ಜ್ಞಾನವನ್ನು ಕೊಡುತ್ತಾನೆ.

**ವೇಳಾಪಟ್ಟಿ**

ತೆರೆಯಿರಿ:
- ಸ್ವಾಗತ
- ಇತಿಹಾಸ ಅಗತ್ಯ
- ಹಾಡು

ಮುಖ್ಯ ಪಾಠ
ಚಟುವಟಿಕೆ (ಐಚ್ಛಿಕ)
ಅವಶ್ಯಕತೆಯ ಇತಿಹಾಸದ ನಿರ್ಣಯ

ಸ್ಟಡಿ ಪುಸ್ತಕಗಳು
- ಟೈಮ್ಲೈನ್
- ಚಟುವಟಿಕೆಗಳು

ಪ್ರಶ್ನೆಗಳು ಮತ್ತು ಉತ್ತರಗಳು (ಹಳೆಯ ವಿದ್ಯಾರ್ಥಿಗಳು)
ಗೇಮ್ (ಐಚ್ಛಿಕ)
ಸಹಾಯ
ನಿಯೋಜನೆ

ಮಕ್ಕಳನ್ನು ಪ್ರೋತ್ಸಾಹಪಡಿಸಲು ನಿಮಗೆ ಸಹಾಯವಾಗುವ ಸಲುವಾಗಿ, ಮಕ್ಕಳು ತಮಗೆ ದೇವರ ಅವಶ್ಯವಿದೆ ಎಂದು ತಿಳಿಯಲು ಮತ್ತು ತಾವು ಕಲಿತುಕೊಳ್ಳುತ್ತಿರುವ ಪಾಠಗಳನ್ನು ಮನೆಯಲ್ಲಿ ತಮ್ಮ ಜೀವಿತಗಳಿಗೆ ಅಳವಡಿಸಿಕೊಳ್ಳಲು ಸಹಾಯವಾಗಲೆಂದು ಪ್ರತಿಯೊಂದು ಪಾಠದ ಪ್ರಾರಂಭದಲ್ಲಿ ನಾವು "ಕಥೆಯ ಅವಶ್ಯಕತೆಯನ್ನು" ಕೊಟ್ಟಿದ್ದೇವೆ. ಪ್ರತಿಯೊಂದು ಕಥೆ ನಾವು ಸೃಷ್ಟಿಸಿರುವ ೫ ಕಾಲ್ಪನಿಕ ಪಾತ್ರಗಳನ್ನು ಹೊಂದಿರುತ್ತದೆ. ನೀವು ಪಾತ್ರಗಳ ಹೆಸರುಗಳನ್ನು ಬದಲಾಯಿಸಬಹುದು. ಬರವಣಿಗೆಯಲ್ಲಿರುವ ಕಥೆಯನ್ನು ನಾಟಕ ರೂಪದಲ್ಲಿ ಪ್ರತಿ ವಾರ ಮಾಡುವಂತೆ ನೀವು ನಿಮ್ಮ ಸಹಾಯಕರಿಗೆ ಹೇಳಬಹುದು. ಒಂದುವೇಳೆ ಅದು ಸಾಧ್ಯವಿಲ್ಲವೆಂದರೆ ನೀವು ಮಕ್ಕಳ ಎದುರು ಕಥೆಯನ್ನು ಜೋರಾಗಿ ಓದಬಹುದು. ಸಮಸ್ಯೆಯನ್ನು ಬಗೆಹರಿಸಲು ಪರಿಹಾರ ಸೂಚಿಸುವಂತೆ ನೀವು ಮಕ್ಕಳನ್ನು ಕೇಳಬಹುದು. ಅವರ ಆಲೋಚನೆಗಳು, ಒಳ್ಳೆಯವುಗಳು, ಕೆಟ್ಟವುಗಳು, ಸರಿಯಾದವುಗಳು, ತಪ್ಪಾದವುಗಳು ಎಂಬದಾಗಿ ಹೇಳಬೇಡಿರಿ ಮತ್ತು ಯಾವುದೇ ಪರಿಹಾರವನ್ನು ಹೇಳಬೇಡಿರಿ. ಪರಿಹಾರವಾಗದ ಒತ್ತಡವು ಮಕ್ಕಳು ಪಾಠದ ಕಡೆಗೆ ಗಮನಹರಿಸುವಂತೆ ಮಾಡುವದರಿಂದ ಅದನ್ನು ಉಪಯೋಗ ಮಾಡಿಕೊಳ್ಳಿರಿ.

ಪಾಠ ಮುಗಿದ ನಂತರ ಪರಿಹಾರದ ಭಾಗ ಬರುತ್ತದೆ. ಒಂದುವೇಳೆ ಮಕ್ಕಳು ಬಹಳ ಸಮಯದಿಂದ ಕುಳಿತುಕೊಂಡಿರುವದಾದರೆ, ಪರಿಹಾರದ ಭಾಗಕ್ಕೆ ಹೋಗುವ ಮೊದಲು ಏನಾದರೂ ಚಟುವಟಿಕೆ ಮಾಡಿಸಿರಿ. ಎಲ್ಲವೂ ಸಿದ್ಧವಾದ ನಂತರ, ಮಕ್ಕಳಿಗೆ ಕಥೆಯ ಅವಶ್ಯಕತೆಯನ್ನು ಜ್ಞಾಪಕಪಡಿಸಿರಿ ನಂತರ ಪರಿಹಾರಕ್ಕಾಗಿ ಪಾತ್ರಧಾರಿಗಳನ್ನು ಕರೆಯಿರಿ ಅಥವಾ ಅದನ್ನು ಹಾಗೇ ವಿವರಿಸಿರಿ. ಇದು ಕಥೆಯ ಅವಶ್ಯಕತೆಯ ಬಹುತೇಕ ಒತ್ತಡವನ್ನು ಬಗೆಹರಿಸುತ್ತದೆ ಮತ್ತು ಮಕ್ಕಳು ಶಾಲೆಯಲ್ಲಿ ಹಾಗೂ ಮನೆಯಲ್ಲಿ ತಮಗೆದುರಾಗುತ್ತಿರುವ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ಸಹಾಯ ಮಾಡುತ್ತದೆ. ಈ ರೀತಿಯಾಗಿ ಮಕ್ಕಳು ತಮ್ಮ ಅನುದಿನದ ಜೀವಿತಕ್ಕೆ ಪಾಠಗಳನ್ನು ಅಳವಡಿಸಿಕೊಳ್ಳಲು ನೀವು ಸಹಾಯ ಮಾಡಬಹುದು!





## ಮುಖ್ಯ ಪಾಠ

ಈ ಪಠ್ಯವು ಹಳೆಯ ಒಡಂಬಡಿಕೆಯ ಹೊರ ನೋಟ ಅಧ್ಯಯನವಾಗಿದೆ. ಬಹುತೇಕ ಪಾಠಗಳಲ್ಲಿ ನಾವು ಸತ್ಯವೇದದಲ್ಲಿರುವ ಒಬ್ಬ ವ್ಯಕ್ತಿಯ ಅಥವಾ ವೀರನ ಇಡೀ ಜೀವಿತವನ್ನು ನೋಡುವವರಾಗಿದ್ದೇವೆ. ಅಧ್ಯಾಪಕರಾಗಿ ನೀವು ಇದನ್ನು ಅಧ್ಯಯನ ಮಾಡಬಹುದು ಮತ್ತು ವಚನಭಾಗಗಳನ್ನು ಓದಿ ಸೂಕ್ತವಾದ ಒಳನೋಟಗಳನ್ನು ತಿಳಿದುಕೊಳ್ಳಬಹುದು. ಪ್ರತಿಯೊಬ್ಬ ವೀರನ ಜೀವಿತದ ಸಾರಾಂಶವನ್ನು ಪ್ರಮುಖ ಪಾಠದಲ್ಲಿ ಸೇರಿಸಲಾಗಿದೆ. ಮಕ್ಕಳ ಆಸಕ್ತಿಯನ್ನು ಕಾಪಾಡಿಕೊಳ್ಳುವ ಸಲುವಾಗಿ ವೀರನ ಜೀವಿತದ ಮಾಹಿತಿಗಳೇನಾದರೂ ನೆನಪಿದೆಯೇ ಎಂದು ಮಕ್ಕಳನ್ನು ಕೇಳಿರಿ. ಕಥೆಯ ಭಾಗ ಆದಷ್ಟು ಕ್ಲುಪ್ತವಾಗಿರಲಿ, ಆಗ ಮುಖ್ಯ ಅಂಶವಾಗಿರುವ, ಅಳವಡಿಸುವಿಕೆಯ ಅಂಶವನ್ನು ಹೇಳಲು ನಿಮಗೆ ಸಮಯ ಸಿಗುತ್ತದೆ. ಪ್ರತಿಯೊಂದು ಪಾಠದ ಕೊನೆಯಲ್ಲಿ ಮಕ್ಕಳು ತೀರ್ಮಾನ ಮಾಡಬೇಕಿರುತ್ತದೆ. ಫುಟ್ ಬಾಲ್ ಆಟದಲ್ಲಿ ಗೋಲ್ ಗಳಿಸುವದು ಪ್ರಾಮುಖ್ಯವಾಗಿರುವ ಹಾಗೆ, ಆ ತೀರ್ಮಾನವೇ ಇಡೀ ಪಾಠದ ಮುಖ್ಯ ಅಂಶವಾಗಿರುತ್ತದೆ. ಒಂದುವೇಳೆ ನೀವು ಚೆನ್ನಾಗಿ ಆಟವಾಡುತ್ತಾ, ಉಳಿದ ಆಟಗಾರರಿಗೆ ಚೆಂಡನ್ನು ಪಾಸ್ ಮಾಡುತ್ತಾ, ಎದುರಾಳಿಗಳಿಗೆ ಚೆಂಡನ್ನು ಕಸಿಯುವ ಅವಕಾಶವನ್ನೇ ಕೊಡದಿದ್ದರೂ ಗೋಲ್ ಬಾರಿಸದೆ ಹೋದರೆ, ಗೆಲ್ಲಲು ಅಗುವದಿಲ್ಲ. ಮಕ್ಕಳು ತಮ್ಮ ಜೀವಿತದಲ್ಲಿ ಅಳವಡಿಸಿಕೊಳ್ಳಲು ಸಹಾಯವಾಗುವ ಸಲುವಾಗಿ ಅವಳವಡಿಸುವಿಕೆಯ ಭಾಗ ತಲುಪುವದನ್ನು ದೃಢಪಡಿಸಿಕೊಳ್ಳಿರಿ. ಯಾಕೋಬ ೧:೨೨-೨೪ರಲ್ಲಿ ನಾವು ಓದುವದೇನೆಂದರೆ, "ವಾಕ್ಯದ ಪ್ರಕಾರ ನಡೆಯುವವರಾಗಿರಿ; ಅದನ್ನು ಕೇಳುವವರು ಮಾತ್ರವೇ ಆಗಿದ್ದು ನಿಮ್ಮನ್ನು ನೀವೇ ಮೋಸಗೊಳಿಸಬೇಡಿರಿ. ಯಾವನಾದರೂ ವಾಕ್ಯವನ್ನು ಕೇಳುವವನಾದರೂ ಅದರ ಪ್ರಕಾರ ನಡೆಯದಿದ್ದರೆ ಅವನು ಕನ್ನಡಿಯಲ್ಲಿ ತನ್ನ ಹುಟ್ಟು ಮುಖವನ್ನು ನೋಡಿದ ಮನುಷ್ಯನಂತಿರುವನು; ಇವನು ತನ್ನನ್ನು ನೋಡಿಕೊಂಡು ಹೋಗಿ ತಾನು ಹೀಗಿದ್ದೇನೆಂಬದನ್ನು ಆ ಕ್ಷಣವೇ ಮರೆತುಬಿಡುವನು." ೧ ಕೊರಿಂಥ ೧೦ರಲ್ಲಿ ನಾವು ಓದುವದೇನೆಂದರೆ, ಹಳೆಯ ಒಡಂಬಡಿಕೆಯಲ್ಲಿರುವ ಕಥೆಗಳು ನಾವು ಏನು ಮಾಡಬೇಕು ಮತ್ತು ಏನು ಮಾಡಬಾರದು ಎಂಬದಕ್ಕೆ ಮಾದರಿಗಳಾಗಿವೆ. ಹಳೆಯ ಒಡಂಬಡಿಕೆಯ ವೀರರನ್ನು ನೋಡುವದೆಂದರೆ ಕನ್ನಡಿಯಲ್ಲಿ ನಮ್ಮನ್ನೇ ನೋಡಿಕೊಂಡು ಅವರ ಜೀವಿತಗಳಿಂದ ಕಲಿತುಕೊಳ್ಳಲು ದೊರೆಯುವ ಅವಕಾಶವನ್ನು ಉಪಯೋಗಿಸಿಕೊಳ್ಳುವದಾಗಿದೆ. ಅವರ ಮಾದರಿಗಳನ್ನು ಅನುಸರಿಸುವಂತೆ ಮತ್ತು ಅವರ ತಪ್ಪುಗಳಿಂದ ಕಲಿತುಕೊಳ್ಳುವಂತೆ ಹಾಗೂ ದೇವರಿಗಾಗಿ ಜೀವಿಸುವಂತೆ ನಮ್ಮ ಮಕ್ಕಳಿಗೆ ಕಲಿಸೋಣ.

## ಟೈಮ್ ಲೈನ್

ಪ್ರತಿ ವಾರ ಮಕ್ಕಳು ಸತ್ಯವೇದ ಕಥೆಯ ವೀರನ ಜೀವವನ್ನು ಪ್ರತಿನಿಧಿಸಲು ತಮ್ಮ ಪುಸ್ತಕದಲ್ಲಿರುವ ಟೈಮ್ ಲೈನ್ ಮೇಲೆ ಗೆರೆಯನ್ನು ಎಳೆಯಬೇಕು. ಉದಾಹರಣೆಗೆ, ಪಾಠ 1 ರಲ್ಲಿ, ಏಹೂದನ ಜೀವನವನ್ನು ಪಾಠ 1ರ ಅಂಕಣದಲ್ಲಿ ಕೊಡಲಾಗಿರುವ ಸ್ಥಳದಲ್ಲಿ ಗೆರೆಯನ್ನು ಎಳೆಯಬೇಕು. ಪಾಠದಲ್ಲಿ ಕೊಡಲಾಗಿರುವ ಸಂಖ್ಯೆಗಳ ಉಪಯೋಗದಿಂದ, ನಮ್ಮ ಆಲೋಚನೆ ಏನೆಂದರೆ ಗೆರೆ ಎಲ್ಲಿಂದ ಪ್ರಾರಂಭವಾಗಬೇಕು ಮತ್ತು ಎಷ್ಟು ಉದ್ದ ಇರಬೇಕು ಎಂಬದನ್ನು ಲೆಕ್ಕ ಹಾಕಬೇಕು. ಪ್ರತಿಯೊಂದು ಚದರ 100 ವರ್ಷಗಳನ್ನು ಪ್ರತಿನಿಧಿಸುತ್ತದೆ. ಉದಾಹರಣೆಗೆ, ಏಹೂದನ ಜೀವಿತ ಕ್ರಿ.ಪೂ 1300 ರ ನಂತರ ಪ್ರಾರಂಭವಾಗಿ ಕ್ರಿ.ಪೂ 1200 ರ 4/5ರಲ್ಲಿ ಕೊನೆಗೊಳ್ಳುತ್ತದೆ. ಪ್ರತಿಯೊಬ್ಬ ವೀರನ ಜೀವಿತ ಮತ್ತು

ಆಶ್ಚರ್ಯಕರವಾದ ಮಾಹಿತಿಗಳಾದ, ನ್ಯಾಯಸ್ಥಾಪಕರಾದ ದೆಬೋರ ಮತ್ತು ಗಿದ್ಯೋನನು, ನಂತರ ಯಫ್ತಾನನು, ಸಂಸೋನನು ಮತ್ತು ಸಮುವೇಲನು ಹೆಚ್ಚು ಕಡಿಮೆ ಒಂದೇ ಸಮಯದಲ್ಲಿ ಜೀವಿಸಿದರು ಎಂಬದನ್ನು ತಿಳಿದುಕೊಳ್ಳುವಾಗ ಬಹಳ ಸಂತೋಷವಾಗುತ್ತದೆ.




## ಅಸೈನ್ಮೆಂಟ್

ಮಕ್ಕಳು ಕಲಿತ ಪಾಠಗಳನ್ನು ಅಭ್ಯಾಸ ಮಾಡಲು ಅವರಿಗೆ ಸಹಾಯ ಮಾಡುವ ಮತ್ತೊಂದು ಸಾಧನ ಪ್ರತಿ ವಾರ ಕೊಡಲಾಗುವ ಹೋಮ್ ವರ್ಕ್ ಅಸೈನ್ಮೆಂಟ್. ಮಕ್ಕಳು ವಾರದ ದಿನಗಳಲ್ಲಿ ಮಾಡಬಹುದಾದ ಚಟುವಟಿಕೆಗಳನ್ನು ಪ್ರತಿಯೊಂದು ಪಾಠದಲ್ಲಿಯೂ ನೋಡಬಹುದು.

ಯೋಹಾನ ೧೪:೨೩ರಲ್ಲಿ ಯೇಸು ಕ್ರಿಸ್ತನು ಹೇಳಿರುವದೇನೆಂದರೆ, “ಯಾರಾದರೂ ನನ್ನನ್ನು ಪ್ರೀತಿಸುವವನಾದರೆ ನನ್ನ ಮಾತನ್ನು ಕೈಕೊಂಡು ನಡೆಯುವನು; ಅವನನ್ನು ನನ್ನ ತಂದೆಯು ಪ್ರೀತಿಸುವನು, ಮತ್ತು ನಾವಿಬ್ಬರೂ ಅವನ ಬಳಿಗೆ ಬಂದು ಅವನ ಬಳಿಯಲ್ಲಿ ಬಿಡಾರವನ್ನು ಮಾಡಿಕೊಳ್ಳುವೆವು.”

ಈ ಅಸೈನ್ಮೆಂಟ್ಸ್ ಗಳ ಮೂಲಕ ಮಕ್ಕಳು ಸಭೆಗೆ ಬರುವಾಗ ಮಾತ್ರವಲ್ಲ ಬದಲಾಗಿ ವಾರದ ದಿನಗಳಲ್ಲಿಯೂ ದೇವರನ್ನು ತಮ್ಮ ಜೀವಿತಗಳಿಗೆ ಬರಮಾಡಿಕೊಳ್ಳಬಹುದು. ದೊಡ್ಡ ಮಕ್ಕಳಿಗೆ ಸತ್ಯವೇದದಿಂದ ಓದುವ ಅಸೈನ್ಮೆಂಟ್ ಸಹ ಇರುತ್ತದೆ. ಹೊಮ್ ವರ್ಕ್ ಅಸೈನ್ಮೆಂಟ್ ಬಗ್ಗೆ ಕೆಲ ಕಾಲ ಸಭೆಯಲ್ಲಿ ಚರ್ಚಿಸಿರಿ ಮತ್ತು ತರಗತಿಯಲ್ಲಿ ಅಭ್ಯಾಸ ಮಾಡಲು ಅವರಿಗೆ ಅವಕಾಶ ಕೊಡಿರಿ. ಕಳೆದ ವಾರದ ಅಸೈನ್ಮೆಂಟ್ ಪೂರ್ತಿಗೊಳಿಸಿದವರಿಗೆ ಕ್ಯಾಂಡಿ ಅಥವಾ ಬಹುಮಾನ ಕೊಟ್ಟು ಸನ್ಮಾನಿಸಿರಿ.

## ಹಾಜರಾತಿ/ವೀರರ ಆಟ







ಪ್ರತಿ ವಾರ ತಪ್ಪದೇ ಬರುವ ಮಕ್ಕಳಿಗೆ ಬಹುಮಾನ ಕೊಡುವ ಕಾರ್ಡ್ ಅನ್ನು ಈ ಪುಸ್ತಕದೊಂದಿಗೆ ಕೊಡಲಾಗುವದು. ಇವುಗಳನ್ನು ಹಾಜರಾತಿ ಕಾರ್ಡ್ ಅಥವಾ ಸ್ಟಿಕರ್ಸ್ ಎಂದು ಕರೆಯಬಹುದು. ಹಾಗೆಯೇ ಇವುಗಳು ಆಟ ಸಹ ಆಗಿರುತ್ತವೆ! ಹಂತದ ಕೊನೆಯಲ್ಲಿ (೧೩ ಪಾಠಗಳು ಅಥವಾ ೩ ತಿಂಗಳು) ಈ ಕಾರ್ಡ್ ಗಳ ಮೂಲಕ ಮಕ್ಕಳು ಆಟ ಆಡಬಹುದು. ಹೆಚ್ಚಿನ ಮಾಹಿತಿಗಾಗಿ ಆಟದ ಸೂಚನೆಗಳನ್ನು ಓದಿರಿ.

### ಪರ್ಯಾಯ ಆಟ:

ಮಕ್ಕಳಿಗೆ ೧-೧೦ ಅಂಕಗಳನ್ನು ಹಾಳೆಯ ಮೇಲೆ ಬರೆಯಲು ಹೇಳಿರಿ. ನಂತರ ಅಧ್ಯಾಪಕನು ಆಟದ ಸೂಚನೆಯಲ್ಲಿ ಕೊಡಲಾಗಿರುವ ಯಾವುದಾದರು ೧೦ ಪ್ರಶ್ನೆಗಳನ್ನು ಕೇಳಬೇಕು. ಗುಣಲಕ್ಷಣವನ್ನು ಆವರಣದೊಳಗೆ ಹೇಳಬೇಡಿರಿ. ಪ್ರತಿಯೊಂದು ಪ್ರಶ್ನೆಗೆ, ವಿದ್ಯಾರ್ಥಿಗಳು ಆ ಪರಿಸ್ಥಿತಿಗೆ ಯಾವ ಗುಣಮಟ್ಟ ಅಥವಾ ಗುಣಲಕ್ಷಣ ಅವಶ್ಯವಾಗಿದೆ ಎಂಬದನ್ನು ಬರೆಯಬೇಕು: ಬಲ, ಯಥಾರ್ಥತೆ, ವಿಧೇಯತೆ, ದೀನತೆ, ನಂಬಿಕೆಯ ಹೃದಯ. ಯಾರು ಹೆಚ್ಚಾಗಿ ಸರಿಯಾದ ಉತ್ತರ ಕೊಡುತ್ತಾರೋ ಅವರು ಗೆಲ್ಲುತ್ತಾರೆ ಮತ್ತು ಅವರಿಗೆ ಸಣ್ಣ ಕ್ಯಾಂಡಿ ಅಥವಾ ಬಹುಮಾನ ಕೊಡಲಾಗುವದು.

# ೧. ದೇವರು ಪ್ರಾರ್ಥನೆಗೆ ಉತ್ತರಿಸುತ್ತಾನೆ



**ಸತ್ಯವೇದ ಕಥೆ: ಏಹೂದನು**

**ನ್ಯಾಯಸ್ಥಾಪಕರು**

### ಕಂಠಪಾಠ ವಚನ ೧

**"ಯಾವ ವಿಷಯದಲ್ಲೂ ಚಿಂತಿಸದೆ, ನಿಮ್ಮ ಅಗತ್ಯಗಳಿಗಾಗಿ ದೇವರಲ್ಲಿ ಪ್ರಾರ್ಥಿಸಿರಿ. ಪ್ರಾರ್ಥಿಸುವಾಗಲೆಲ್ಲಾ ನಿಮ್ಮಲ್ಲಿ ಕೃತಜ್ಞತಾಭಾವ ಇರಲಿ." ಫಿಲಿಪ್ಪಿಯರಿಗೆ 4:6**

### ಕಥೆಯ ಅವಶ್ಯಕತೆ ೧



ಮತ್ತಾಯ ಸುಮಾರು ಒಂದು ವರ್ಷದಿಂದ ತುಂಬಾ ದುಃಖದಲ್ಲಿದ್ದಾನೆ, ಯಾಕಂದರೆ ಅವನು ತನ್ನೊಂದಿಗೆ ಬಹಳವಾಗಿ ಹೋರಾಡುತ್ತಿದ್ದಾನಾದರೂ, ತಾನು ಕೆಲವು ವಿಷಯಗಳನ್ನು ನೋಡಬಾರದೆಂದು ಅವನಿಗೆ ಗೊತ್ತಿದ್ದರೂ ಟಿವಿಯಲ್ಲಿ ಬರುವಾಗ ಅವುಗಳನ್ನೇ ನೋಡುತ್ತಿದ್ದನು. "ಇನ್ನು ಮೇಲೆ ನಾನು ಅದನ್ನು ನೋಡುವದಿಲ್ಲ ಯಾಕಂದರೆ ಅದು ಒಳ್ಳೆಯದಲ್ಲ. ಅದು ದೇವರಿಗೆ ಇಷ್ಟವಿಲ್ಲ" ಎಂದು ಅವನು ಯಾವಾಗಲೂ ಹೇಳುತ್ತಿದ್ದನು, ಆದರೆ ಪ್ರತಿದಿನ ತನಗೇ ಗೊತ್ತಿಲ್ಲದಂತೆ ದಾಸನ ಹಾಗೆ ಟಿವಿಯ ಮುಂದೆ ಕೂರುತ್ತಿದ್ದನು, ಆದರೆ ಒಂದುದಿನ ತಾನು ಒಂಟಿಯಾಗಿ ಈ ಸ್ವಭಾವವನ್ನು ಜಯಿಸಲು ಆಗುವದಿಲ್ಲ ಎಂಬದು ಅವನಿಗೆ ಅರ್ಥವಾಯಿತು. ಅವನು ಎಡಬಿಡದೆ ಪ್ರಾರ್ಥನೆ ಮಾಡಲು ಪ್ರಾರಂಭಿಸಿದನು.

### ಮುಖ್ಯ ಪಾಠ ೧

ಸಂಡೇ ಸ್ಕೂಲ್ ನ ನಂಬಿಕೆಯ ವೀರರಿಗೆ ಮತ್ತೊಮ್ಮೆ ಸ್ವಾಗತ! ನಾವು ಹಳೆಯ ಒಡಂಬಡಿಕೆಯ ಪ್ರಾಮುಖ್ಯ ಜನರ ಜೀವಿತಗಳನ್ನು ಅಧ್ಯನ ಮಾಡುತ್ತಿದ್ದೇವೆ ಮತ್ತು ಅವರು ದೇವರೊಂದಿಗೆ ಯಾವ ರೀತಿ ನಡೆದುಕೊಂಡರು ಹಾಗೂ ದೇವರು ಅವರ ಜೀವಿತಗಳಲ್ಲಿ ಯಾವ ರೀತಿ ಕಾರ್ಯಮಾಡಿದನು ಎಂಬದನ್ನು ತಿಳಿದುಕೊಳ್ಳುತ್ತಿದ್ದೇವೆ. ಈ ಎಲ್ಲಾ ವಿಷಯಗಳನ್ನು ತಿಳಿದುಕೊಳ್ಳುವಾಗ, ನಾವೂ ನಮ್ಮ ಜೀವಿತದಲ್ಲಿ ಪ್ರೋತ್ಸಾಹ ಹೊಂದಿಕೊಳ್ಳಬಹುದಾಗಿದೆ. ಇಂದು ನಾವು ಸತ್ಯವೇದದಲ್ಲಿ ಅತ್ಯಂತ ವಿಚಿತ್ರವಾದ ಕಥೆಯನ್ನು ನೋಡಿಕೊಳ್ಳೋಣ. ಇಸ್ರಾಯೇಲ್ಯರು ಯೆಹೋಶುವನ ನಾಯಕತ್ವದಲ್ಲಿ ವಾಗ್ದಾನ ದೇಶವನ್ನು ವಶಪಡಿಸಿಕೊಂಡ ನಂತರ, ಮನೆಗಳನ್ನು ಕಟ್ಟಿಕೊಂಡರು, ಹೊಲಗಳನ್ನು ಮಾಡಿಕೊಂಡರು ಮತ್ತು ಅಲ್ಲಿಯೇ ಬಹುಕಾಲದವರೆಗೂ ಜೀವಿಸಿದರು. ಆ ಸಮಯದಲ್ಲಿ ಜನರು ದೇವರನ್ನು ಮರೆತುಹೋದರು ಮತ್ತು ನಿಜವಾದ ದೇವರಲ್ಲದ ಇತರೆ ವಸ್ತುಗಳನ್ನು ಆರಾಧಿಸಿದರು! ನಾನು ಮತ್ತು ನೀವುಗಳು ಸಹ ಪಾಪಿಗಳಾಗಿದ್ದೇವೆ, ನಾವು ಎಷ್ಟೇ ಪ್ರಯತ್ನಿಸಿದರೂ ಸಾಮಾನ್ಯವಾಗಿ ತಪ್ಪುಗಳನ್ನು ಮಾಡುತ್ತಲೇ ಇರುತ್ತೇವೆ. ಅವರಿಗೆ ಕ್ರಮಶಿಕ್ಷಣ ನೀಡಲು, ದೇವರು ಅವರ ನೆರೆಯವರಾದ ಮೋವಾಬ್ಯರನ್ನು ಅವರ ಮೇಲೆ ಬರಮಾಡಿದರು, ಅವರು 18 ವರ್ಷಗಳ ಕಾಲ ಇಸ್ರಾಯೇಲ್ಯರನ್ನು ಕುಗ್ಗಿಸಿದರು! 18 ವರ್ಷಗಳು ಸುದೀರ್ಘ ಅವಧಿಯಾಗಿದೆ.
ಕೆಲವೊಮ್ಮೆ ದೇವರ ಕ್ರಮಶಿಕ್ಷಣವನ್ನು ನಮ್ಮ ಜೀವಿತದಲ್ಲಿ ಅರಿತುಕೊಳ್ಳಲು ನಮಗೆ ಹೆಚ್ಚು ಸಮಯ ಬೇಕಾಗುತ್ತದೆ.
ನಾವು ಕರ್ತನಾದ ಯೇಸು ಕ್ರಿಸ್ತನನ್ನು ಅಂಗೀಕರಿಸಿಕೊಳ್ಳುವಾಗ, ದೇವರ ಕುಟುಂಬದೊಳಗೆ ಪ್ರವೇಶಿಸುತ್ತೇವೆ
ಮತ್ತು ದೇವರಿಗೆ ಪುತ್ರರು ಹಾಗೂ ಪುತ್ರಿಯರು ಆಗುತ್ತೇವೆ ಹಾಗೂ ಅದನ್ನು ಬದಲಾಯಿಸಲು ಯಾವುದರಿಂದಲೂ ಆಗುವದಿಲ್ಲ. ಒಳ್ಳೆಯ ತಂದೆಯ ಹಾಗೆ, ದೇವರು ನಮ್ಮನ್ನು ಕ್ರಮಶಿಕ್ಷಣಕ್ಕೊಳಪಡಿಸುತ್ತಾನೆ ಮತ್ತು ಆತನಿಗೆ ವಿಧೇಯರಾಗುವದು ಹೇಗೆ ಎಂದು ನಮಗೆ ಕಲಿಸುತ್ತಾನೆ. ನಮ್ಮ ಜೀವಿತದಲ್ಲಿ ನಾವು ತೆಗೆದುಕೊಳ್ಳುವ ಪ್ರತಿಯೊಂದು ನಿರ್ಧಾರಗಳಿಗೂ ಪರಿಣಾಮಗಳು ಇದ್ದೇ ಇರುತ್ತವೆ. ನಾವು ನಮ್ಮ ಕ್ರಿಯೆಗಳ ನಿಮಿತ್ತವಾಗಿಯೇ ಕಷ್ಟದಲ್ಲಿದ್ದೇವೆ ಎಂಬದು ಇಸ್ರಾಯೇಲ್ಯರಿಗೆ ತಿಳಿದಾಗ, ತಮ್ಮನ್ನು ಕಾಪಾಡುವಂತೆ ಅವರು ದೇವರಿಗೆ ಪ್ರಾರ್ಥಿಸಿದರು. ಕಷ್ಟದ ಪರಿಸ್ಥಿತಿಗಳಲ್ಲಿ ಸಹಾಯ ಮಾಡುವಂತೆ ನಾವು ದೇವರನ್ನು ಬೇಡಿಕೊಳ್ಳಬಹುದಾಗಿದೆ. ದೇವರು ನಮಗೆ ಸಹಾಯಮಾಡುತ್ತಾನೆ ಎಂದು ನಾವು

ನಂಬಬಹುದು ಆದರೆ ನಾವಂದುಕೊಳ್ಳುವ ರೀತಿಯಲ್ಲಿ ಆತನ ಸಹಾಯ ಇರುವದಿಲ್ಲ. ತಮ್ಮನ್ನು ಕುಗ್ಗಿಸುತ್ತಿರುವ ಜನಾಂಗದ ಮೇಲೆ ಆಕ್ರಮಣ ಮಾಡಲು ಇಸ್ರಾಯೇಲ್ಯರೆಲ್ಲರನ್ನು ಒಟ್ಟುಗೂಡಿಸಿ ದೊಡ್ಡ ಸೈನ್ಯವನ್ನು ರಚಿಸುವಂಥ ಶೂರನನ್ನುದೇವರು ಎಬ್ಬಿಸುವನು ಎಂಬದು ಇಸ್ರಾಯೇಲ್ಯರ ನಿರೀಕ್ಷೆಯಾಗಿತ್ತು. ಆದರೆ ದೇವರು ಹಾಗೆ ಮಾಡಲಿಲ್ಲ. ಬದಲಾಗಿ ದೇವರು ಎಡಚನಾದ ಏಹೂದನನ್ನು ಕಳುಹಿಸಿದನು ಅವನು ಮೋವಾಬಿನ ಅರಸನಿಗೆ ರಹಸ್ಯವಾದ ಸಂದೇಶವನ್ನು ತಿಳಿಸುವವನಂತೆ ನಟಿಸಿ ಅರಸನ ಅರಮನೆಯಲ್ಲಿಯೇ ಅರಸನನ್ನು ಕೊಂದುಹಾಕಿದನು! ಅದಾದ ನಂತರ, ಅವನು ಇಸ್ರಾಯೇಲ್ಯರೆಲ್ಲರನ್ನು ಒಟ್ಟುಗೂಡಿಸಿದನು, ಆದರೆ ಸೈನ್ಯವನ್ನು ಕೂಡಿಸಿ ದಾಳಿ ಮಾಡುವ ಬದಲು, ಅವರು ನದಿ ದಾಟುವ ಸ್ಥಳದಲ್ಲಿ ಕಾಯುತ್ತಾ ಕುಳಿತಿದ್ದು, ಅಲ್ಲಿಗೆ ಬರುತ್ತಿದ್ದ ಮೋವಾಬ್ಯರನ್ನೆಲ್ಲಾ ಕೊಂದು ಹಾಕಿದರು. ದೇವರು ಅನಿರೀಕ್ಷಿತ ರೀತಿಯಲ್ಲಿ ಏಹೂದನೆಂಬ ಒಬ್ಬ ವ್ಯಕ್ತಿಯ ಮೂಲಕ ಇಸ್ರಾಯೇಲ್ಯರನ್ನು ಕಾಪಾಡಿದ ಹಾಗೆ, ದೇವರು ತನ್ನ ಒಬ್ಬನೇ ಮಗನಾದ ಯೇಸು ಕ್ರಿಸ್ತನ ಮೂಲಕ ಅನಿರೀಕ್ಷಿತ ರೀತಿಯಲ್ಲಿ ಇಡೀ ಲೋಕವನ್ನು ಕಾಪಾಡಿದನು. ಅರಸನು ಬಂದು ತಮ್ಮನ್ನು ಕಾಪಾಡುವನು ಎಂಬದಾಗಿ ಇಸ್ರಾಯೇಲ್ಯರು ನೆನೆಸಿದರು, ಆದರೆ ಯೇಸು ಕ್ರಿಸ್ತನು ದೀನತಯುಳ್ಳವನಾಗಿ ಬಂದು ನಮ್ಮ ಪರವಾಗಿ ಶಿಲುಬೆಯ ಮೇಲೆ ಪ್ರಾಣ ಕೊಟ್ಟನು ಮತ್ತು ಮೂರನೆಯ ದಿನದಲ್ಲಿ ಎದ್ದು ಬಂದನು ಆದ್ದರಿಂದ ಆತನನ್ನು ನಂಬುವವರು ರಕ್ಷಣೆ ಹೊಂದುತ್ತಾರೆ. ಮುಂದಿನ ಸಲ ನೀವು ಯಾವುದಾದರೂ ಕಷ್ಟ ಅಥವಾ ಇಕ್ಕಟ್ಟಿನ ಪರಿಸ್ಥಿತಿಯಲ್ಲಿರುವದಾದರೆ, ಟಿವಿ ನೋಡುವ ಸಮಸ್ಯೆ ಎದುರಿಸುತ್ತಿದ್ದ ಇಂದಿನ ನಮ್ಮ ಸಹೋದರ ಮತ್ತಾಯನ ಹಾಗೆ, ದೇವರು ಪ್ರಾರ್ಥನೆಗೆ ಉತ್ತರಿಸುತ್ತಾನೆ ಎಂಬದನ್ನು ನೆನಪಿಗೆ ತಂದುಕೊಳ್ಳಿರಿ. ಸಹಾಯಕ್ಕಾಗಿ ದೇವರನ್ನು ಬೇಡಿಕೊಳ್ಳಿರಿ ಮತ್ತು ಆತನು ನಿಮಗೆ ಸಹಾಯ ಮಾಡುವ ಅನಿರೀಕ್ಷತವಾದ ರೀತಿಯನ್ನು ಎದುರುನೋಡಿರಿ.

ಕಷ್ಟದ ಸಮಯಗಳಲ್ಲಿ ನಾನು ದೇವರನ್ನು ಪ್ರಾರ್ಥಿಸುತ್ತೇನೆ ಮತ್ತು ಸಹಾಯ ಬೇಡಿಕೊಳ್ಳುತ್ತೇನೆ!

## ವಿಶ್ಲೇಷಣ ೧




ಪ್ರಾರ್ಥನೆ ಮಾಡಿದ ನಂತರ ಒಂದುದಿನ, ಅವನ ಮನೆಯ ಪಕ್ಕದ ಮನೆಗೆ ಹೊಸಬರು ಬಾಡಿಗೆಗೆ ಬಂದರು, ಹೊಸದಾಗಿ ಬಂದವರ ಮನೆಯಲ್ಲಿದ್ದ ಹುಡುಗರೊಂದಿಗೆ ಅವನಿಗೆ ಸ್ನೇಹವಾಯಿತು ಮತ್ತು ಅವರೆಲ್ಲರೂ ಸೇರಿ ಪ್ರತಿದಿನ ಮಧ್ಯಾಹ್ನ ಆಟವಾಡುತ್ತಿದ್ದರು. ಬಹಳ ಖುಷಿಪಡುತ್ತಿದ್ದರು. ಒಂದುವಾರದ ನಂತರ ಟಿವಿ ನೋಡುವ ಬದಲು ತಾನು ಆಟವಾಡುತ್ತಿರುವದು ಮತ್ತು ಟಿವಿ ನೋಡಲು ಸಮಯವೇ ಇಲ್ಲದಿರುವದು ಅವನಿಗೆ ಅರಿವಾಯಿತು. ಆಗ ಟಿವಿ ನೋಡುವ ಅವಶ್ಯಕತೆಯಿಲ್ಲದೆ, ಆ ಅಭ್ಯಾಸದಿಂದ ಹೊರಬಂದದ್ದಕ್ಕಾಗಿ ಅವನು ದೇವರಿಗೆ ಸ್ತೋತ್ರ ಹೇಳಿದನು.

## ಚಟುವಟಿಕೆ ೧

ಕುರುಡು ಕೋಳಿ

ಈ ಚಟುವಟಿಕೆಗಾಗಿ, ಒಬ್ಬ ಹುಡುಗ ಅಥವಾ ಹುಡುಗಿಯನ್ನು ಆರಿಸಿಕೊಳ್ಳಿರಿ ಮತ್ತು ಅವರ ಕಣ್ಣಿಗೆ ಬಟ್ಟೆ ಕಟ್ಟಿರಿ. ಉಳಿದ ಮಕ್ಕಳು ವೃತ್ತವನ್ನು ರಚಿಸಬೇಕು ಮತ್ತು ಕಣ್ಣಿಗೆ ಬಟ್ಟೆ ಕಟ್ಟಿರುವ ಮಗುವನ್ನು ಮಧ್ಯದಲ್ಲಿ ನಿಲ್ಲಿಸಿರಿ. ಯಾವ ಆಟಗಾರನೂ ಆಟವಾಡುವ ಸ್ಥಳವನ್ನು ಬಿಡಬಾರದು. ಕಣ್ಣಿಗೆ ಬಟ್ಟೆ ಕಟ್ಟಿರುವ ಮಗು ಉಳಿದವರನ್ನು ಮುಟ್ಟಲು ಪ್ರಯತ್ನಿಸಬೇಕು, ಮತ್ತು ಮುಟ್ಟಿದ ನಂತರ ಅವರು ಯಾರೆಂದು ಹೇಳಬೇಕು. ಹುಡುಗರನ್ನು ಪ್ರತ್ಯೇಕವಾಗಿ ಮತ್ತು ಹುಡುಗಿಯರನ್ನು ಪ್ರತ್ಯೇಕವಾಗಿ ನೀವು ಆಡಿಸಬಹುದು.



## ಟೈಮ್ ಲೈನ್ ೧

ಈ ಪ್ರಶ್ನೆಗಳ ಮಾಹಿತಿಯಿಂದ, ಮಕ್ಕಳು ಏಹೂದನ ಟೈಮ್ ಲೈನ್ ಬರೆಯಬಹುದು. ಏಹೂದನು ಯಾವ ಸಮಯದಿಂದ ಇಸ್ರಾಯೇಲ್ಯರನ್ನು ಮುನ್ನಡೆಸಲು ಪ್ರಾರಂಭಿಸಿದನು? ಉ. ನಿಖರವಾಗಿ ನಮಗೆ ಗೊತ್ತಿಲ್ಲ, ಆದರೆ ಅವನು ಕ್ರಿ.ಪೂ 1297 ರಿಂದ ಪ್ರಾರಂಭಿಸಿರಬಹುದು ಎಂದು ನಮಗೆ ಕಲಿಸಲಾಗಿದೆ.

ಏಹೂದನು ಇಸ್ರಾಯೇಲ್ಯರನ್ನು ಎಷ್ಟು ವರ್ಷ ಮುನ್ನಡೆಸಿದನು? ಉ. 80 ವರ್ಷಗಳು.

## ಒಗಟಿನ ಉತ್ತರಗಳು ೧



| | | | | | | | | | |
|---|---|---|---|---|---|---|---|---|---|
| ಶು | ನೆ | ಧ | ರಾ | ಆ | ಸ | ಯ | ಪಾ | ಶು | ಮೋ |
| ಮ | ಪ್ರಾ | ಣಾ | ದೇ | ಸೆ | ಮ | ಕ್ರ | ಪ | ವಿ | ವಾ |
| ಕ್ರ | ಕ್ರ | ರ್ಥ | ಭ | ರ | ವ | ಸೆ | ದೇ | ಮ | ಬ್ಯ |
| ಮ | ಯ | ಕ್ಷ | ನೆ | ವಿ | ಕ್ತಿ | ರ್ಥ | ದೇ | ವ | ರು |
| ಶಿ | ಸ | ಧೇ | ಷ್ಟ | ಧ | ಬ್ಯ | ಸಿ | ನೆ | ರ್ಥ | ಪ್ರಾ |
| ಕ್ಷ | ಮ | ಆ | ವಿ | ಹೂ | ಏ | ಹೂ | ದ | ಕ್ರ | ಆ |
| ಣ | ವಿ | ಸೆ | ಗ್ರ | ಣಾ | ಭ | ಕ | ಸ | ನು | ವ |
| ಸ | ದೇ | ಕ್ಷ | ಹ | ರಾ | ಣ | ಷ್ಟ | ಧ | ಏ | ಶು |
| ಏ | ಹಾ | ಳು | ಗ | ಮ | ಣಾ | ರಿ | ಪ | ಮ | ಹೋ |
| ಸೆ | ರಾ | ಯ | ಳು | ಮ | ತೆ | ಯ | ಧೇ | ವಿ | ಯೆ |



## ಪ್ರಶ್ನೆಗಳು ಮತ್ತು ಉತ್ತರಗಳು ೧

**(ಹಿರಿಯ ಮಕ್ಕಳಿಗೆ)**

1. ಏಹೂದನ ಹಾಗೆ ಸಾಹಸದ ಕಾರ್ಯವನ್ನು ಮಾಡುವಂತೆ ದೇವರು ಒಂದುವೇಳೆ ನನಗೆ ಹೇಳುವದಾದರೆ, ನಾನು ಹೆದರಿಕೊಳ್ಳುತ್ತೇನೋ? ಹೆದರಿಕೊಳ್ಳುವದು ಸರಿಯೋ? (ಧೈರ್ಯಶಾಲಿ ಎಂದರೆ ಭಯವೇ ಇಲ್ಲ ಎಂಬದಾಗಿಯಲ್ಲ ಬದಲಾಗಿ ಭಯವಿದ್ದರೂ ಧೈರ್ಯದಿಂದ ಮುಂದೆ ಸಾಗುವ ಮನೋಭಾವನೆಯಾಗಿದೆ.)
2. ನಿಮ್ಮ ತಪ್ಪುಗಳಿಗೆ ನೀವು ಯಾವ ರೀತಿಯ ಶಿಕ್ಷೆಯನ್ನು ಅನುಭವಿಸಿದ್ದೀರಿ? (ವಿವಿಧ ರೀತಿಯ ಶಿಕ್ಷೆಗಳು ಮತ್ತು ಅವರು ತಪ್ಪು ಮಾಡಿದಾಗ ಹಾಗೂ ತಪ್ಪು ಮಾಡದಿರುವಾಗ ಯಾವ ರೀತಿಯ ಶಿಕ್ಷೆಯನ್ನು ಅನುಭವಿಸಿರುವದರ ಬಗ್ಗೆ ಚರ್ಚಿಸುವಂತೆ ಮಕ್ಕಳನ್ನು ಪ್ರೋತ್ಸಾಹಪಡಿಸಿರಿ.)
3. ಯುದ್ಧಗಳು ಒಳ್ಳೆಯವುಗಳಾಗಿವೆಯೇ? (ಒಬ್ಬ ವ್ಯಕ್ತಿಯನ್ನು ಕೊಲೆಮಾಡುವದು ಮತ್ತು ಯುದ್ಧದಲ್ಲಿ ಜನರನ್ನು ಕೊಲ್ಲುವದು ಇವುಗಳ ನಡುವೆಯಿರುವ ವ್ಯತ್ಯಾಸವನ್ನು ಚರ್ಚಿಸಿರಿ. ನಮ್ಮ ಲೋಕದಲ್ಲಿ ನಡೆಯುತ್ತಿರುವ ಯುದ್ಧಗಳ ಕುರಿತು ಅವರು ತಮ್ಮ ಅಭಿಪ್ರಾಯಗಳನ್ನು ಹಂಚಿಕೊಳ್ಳಲು ಅವಕಾಶ ಕೊಡಿರಿ ಮತ್ತು ಈಗ ನಡೆಯುತ್ತಿರುವ ಯುದ್ಧಗಳ ಬಗ್ಗೆ ಮಾತನಾಡಲು ಮರೆಯಬೇಡಿರಿ.)

## ಆಟ ೧

ದೇವರನ್ನು ಬೇಡಿಕೊಳ್ಳುವದು



ಹುಡುಗ ಹುಡುಗಿಯರನ್ನು ಬೇರ್ಪಡಿಸಿ ಪ್ರತ್ಯೇಕವಾಗಿ ಆಡಿಸಿರಿ. ಮಕ್ಕಳು ಸಾಲಿನಲ್ಲಿ ನಿಲ್ಲಬೇಕು ಮತ್ತು ಒಬ್ಬರ ಕೈಗಳನ್ನೊಬ್ಬರು ಹಿಡಿದುಕೊಳ್ಳಬೇಕು. ನಂತರ ಮಕ್ಕಳು ಎರಡೂ ಕಡೆಯಿಂದ ಕೈಗಳನ್ನು ಹಿಡಿದುಕೊಂಡಿರುವವರ ನಡುವೆ ನಡೆದುಬರಬೇಕು, ಎರಡೂ ಕಡೆಗಳಿಂದ ಬರುವಾಗ ಈ ಕಡೆಯವರು ಆ ಕಡೆಗೆ ಹೋಗಲು ಆ ಕಡೆಯವರು ಈ ಕಡೆಗೆ ಹೋಗಲು ಆಗದಂತೆ ಮಧ್ಯದಲ್ಲಿ ಸಿಕ್ಕಿಕೊಳ್ಳುವರು. ಹಾಗೆ ಸಿಕ್ಕಿಕೊಳ್ಳುವ ಸಮಯದಲ್ಲಿ, “ದೇವರೇ ಸಹಾಯಮಾಡು” ಎಂದು ಗಟ್ಟಿಯಾಗಿ ಆತನನ್ನು ಬೇಡಿಕೊಳ್ಳುವರು! ಆಗ ತಂಡದ ಸದಸ್ಯರಲ್ಲಿ ಒಬ್ಬರು ಬಂದು ಅವರನ್ನು ಬಿಡಿಸುವರು.

## ಹಾಜರಾತಿ ೧




ತರಗತಿಗೆ ಬಂದ ಮಕ್ಕಳಿಗೆ ಅಂದಿನ ಕಾರ್ಡ್ ಕೊಡಿರಿ. ವೀರರ ಆಟ ಆಡಲು ಮತ್ತೊಂದು ಕಾರ್ಡ್ ಪಡೆಯಬೇಕೆಂದರೆ ಮುಂದಿನ ವಾರ ತರಗತಿಗೆ ಬರುವಂತೆ ಅವರನ್ನು ಪ್ರೋತ್ಸಾಹಪಡಿಸಿರಿ ಮತ್ತು ಈ ವಾರ ಕಾರ್ಡ್ ಪಡೆದದ್ದಕ್ಕಾಗಿ ಅಭಿನಂದಿಸಿರಿ! ಇಂದಿನ ಕಾರ್ಡ್ ಯಾವುದೆಂದರೆ:

ಪ್ರಾರ್ಥನೆ

## ಹೋಮ್ ವರ್ಕ್ ೧

ಈ ವಾರದ ಹೋಮ್ ವರ್ಕ್ ಏನೆಂದರೆ ನಿಮ್ಮ ಜೊತೆಯಲ್ಲಿ ಓದುತ್ತಿರುವವರಿಂದ ಅಥವಾ ನಿಮ್ಮ ಶಿಕ್ಷಕಿಯಿಂದ ನಿಮಗೇನಾದರೂ ತೊಂದರೆಯಾಗುತ್ತಿರುವದಾದರೆ ಅವರ ವಿಷಯವಾಗಿ ತರಗತಿಯಲ್ಲಿಯೇ (ಶಾಲೆಯಲ್ಲಿಯೇ) ಪ್ರಾರ್ಥನೆ ಮಾಡಬೇಕು. ನಿಮ್ಮ ಕಣ್ಣುಗಳನ್ನು ಮುಚ್ಚಿಕೊಳ್ಳಬೇಡಿರಿ, ಗಟ್ಟಿಯಾಗಿ ಹೇಳಲೂ ಬೇಡಿರಿ ಯಾಕಂದರೆ ದೇವರು ನಿಮ್ಮ ಆಲೋಚನೆಗಳನ್ನು ಮತ್ತು ಹೃದಯದ ವಿಷಯಗಳನ್ನು ಕೇಳಿಸಿಕೊಳ್ಳುವವನಾಗಿದ್ದಾನೆ. ಪ್ರಾಯೋಗಿಕ ಮತ್ತು ನಿರ್ದಿಷ್ಟವಾದ ವಿಷಯಗಳಿಗಾಗಿ ಪ್ರಾರ್ಥನೆ ಮಾಡಿರಿ ಆಗ ನೀವು ದೇವರ ಪ್ರತ್ಯುತ್ತರವನ್ನು ಪಡೆಯಬಹುದು.

ಓದಿರಿ

ದಿನ 1: ನ್ಯಾಯಸ್ಥಾಪಕರು 4:1-5
ದಿನ 2: ನ್ಯಾಯಸ್ಥಾಪಕರು 4:6-10
ದಿನ 3: ನ್ಯಾಯಸ್ಥಾಪಕರು 4:11-14
ದಿನ 4: ನ್ಯಾಯಸ್ಥಾಪಕರು 4:15-20
ದಿನ 5: ನ್ಯಾಯಸ್ಥಾಪಕರು 4:21-24

# ೨. ದೇವರು ನೀತಿವಂತನು



**ಸತ್ಯವೇದ ಕಥೆ: ದೆಬೋರಳು**

**ನ್ಯಾಯಸ್ಥಾಪಕರು 4:1-24, 2:24-27**

### ಕಂಠಪಾಠ ವಚನ ೨

"ವಿಶ್ವಾಸವಿಲ್ಲದೆ ದೇವರ ಮೆಚ್ಚುಗೆಗೆ ಪಾತ್ರರಾಗಲು ಯಾರಿಂದಲೂ ಸಾಧ್ಯವಿಲ್ಲ. ದೇವರ ಬಳಿಗೆ ಸಾಗುವವರು, ಅವರ ಅಸ್ತಿತ್ವವನ್ನು ವಿಶ್ವಾಸಿಸಬೇಕು; ಅವರನ್ನು ಅರಸುವವರಿಗೆ ತಕ್ಕ ಪ್ರತಿಫಲ ಸಿಗುವದೆಂದು ನಂಬಬೇಕು." ಹಿಬ್ರಿಯರಿಗೆ 11:6

### ಕಥೆಯ ಅವಶ್ಯಕತೆ ೨



ಒಂದುದಿನ ಮಾರ್ಕನ ಸಭೆಯಲ್ಲಿ, ಸಂಡೇ ಸ್ಕೂಲ್ ಟೀಚರ್ ಬರಲಿಲ್ಲ ಯಾಕಂದರೆ ಅವರಿಗೆ ಮೈ ಹುಷಾರಿರಲಿಲ್ಲ. ಆಕೆ ಅದನ್ನು ಮಾರ್ಕನಿಗೆ ತಿಳಿಸಿದಳು ಮತ್ತು ಅಂದು ಮಕ್ಕಳನ್ನು ನೋಡಿಕೊಳ್ಳುವಂತೆ ಅವನಿಗೆ ಹೇಳಿದಳು. ಮಕ್ಕಳು ಯಾರು ತರಗತಿಯಿಂದ ಹೊರಗೆ ಹೋಗದಂತೆ ನೋಡಿಕೊಳ್ಳುವದು, ನಂತರ ಸತ್ಯವೇದ ಚಲನಚಿತ್ರ ಹಾಕುವದು ಅವನ ಕೆಲಸವಾಗಿತ್ತು. ಆದರೆ ಮಾರ್ಕನಿಗೆ ಈ ಕೆಲಸ ಒಪ್ಪಿಕೊಳ್ಳಲು ಮನಸ್ಸಿರಲಿಲ್ಲ. ಅವನು ಅಂದುಕೊಂಡದ್ದೇನೆಂದರೆ: "ತರಗತಿ ಪಾಠ ಕೇಳಿಕೊಂಡಿರುವುದೇ ಉತ್ತಮ." ಅವನು ಒಪ್ಪಿಕೊಳ್ಳದಿರುವದು ಟೀಚರ್ ಗಮನಿಸಿದಾಗ "ದಯವಿಟ್ಟು" ನನಗಾಗಿ ಮಾಡು ಎಂದು ಹೇಳಿದಳು. ಮಾರ್ಕನು ಒಪ್ಪಿಕೊಂಡನು, ಆದರೆ ನೀವು ಬೇರೆಯವರನ್ನು ನೇಮಿಸಿರಿ ನಾನು ಅವರಿಗೆ ಸಹಾಯ ಮಾಡುತ್ತೇನೆ ಎಂದು ಹೇಳಿದನು.

### ಮುಖ್ಯ ಪಾಠ ೨

ನಂಬಿಕೆಯ ವೀರರಿಗೆ ಮತ್ತೊಮ್ಮೆ ಸ್ವಾಗತ! ಕಳೆದ ಸಲ ದೇವರು ಏಹೂದನೆಂಬ ವ್ಯಕ್ತಿಯ ಮೂಲಕ ಅನಿರೀಕ್ಷಿತವಾದ ರೀತಿಯಲ್ಲಿ ಇಸ್ರಾಯೇಲ್ಯರನ್ನು ಹೇಗೆ ಕಾಪಾಡಿದನು ಎಂಬದನ್ನು ನಾವು ಕಲಿತುಕೊಂಡೆವು. ಈ ಸಲ ದೇವರು ನೀತಿವಂತನು ಎಂಬದನ್ನು ನಾವು ಕಲಿತುಕೊಳ್ಳೋಣ. ಮತ್ತೊಮ್ಮೆ ಇಸ್ರಾಯೇಲ್ಯರು ಪಾಪ ಮಾಡಿದರು ಮತ್ತು ಕಾನಾನಿನ ಅರಸನಾದ ಯಾಬೀನನು ತನ್ನ ಸೈನ್ಯದ ಸೇನಾಪತಿಯಾದ ಸೀಸೆರನ ಮೂಲಕ ಅವರನ್ನು ಬಾಧಿಸಿದನು. ಆ ಸಮಯದಲ್ಲಿ ದೆಬೋರಳೆಂಬ ಪ್ರವಾದಿನಿಯಿದ್ದಳು ಆಕೆ ಖರ್ಜೂರ ವೃಕ್ಷದ ಕೆಳಗೆ ಕೂತುಕೊಂಡು ಇಸ್ರಾಯೇಲ್ ಜನರನ್ನು ಮುನ್ನಡೆಸಲು ಸಹಾಯ ಮಾಡುತ್ತಿದ್ದಳು. ಪ್ರವಾದಿ ಎಂದರೆ ದೇವರ ಮಾತುಗಳನ್ನು ತಿಳಿಸುವಾತನಾಗಿದ್ದಾನೆ, ಇಸ್ರಾಯೇಲ್ಯರನ್ನು ಒಟ್ಟುಗೂಡಿಸಿ ಸೀಸೆರಳ ಸೈನ್ಯದ ಮೇಲೆ ದಾಳಿ ಮಾಡಲು ದೇವರು ದೆಬೋರಳ ಮೂಲಕ ಬಾರಾಕ್ ಎಂಬ ವ್ಯಕ್ತಿಯನ್ನು ಕರೆದನು. ಕಳೆದ ವಾರ ನಾವು ಕಷ್ಟದಲ್ಲಿರುವಾಗ ಸಹಾಯ ಮಾಡಲು ದೇವರನ್ನು ಬೇಡಿಕೊಳ್ಳಬೇಕು ಎಂದು ಕಲಿತುಕೊಂಡೆವು. ಇಂದಿನ ಕಥೆಯಲ್ಲಿ ಬಂದ ಮಾರ್ಕನ ಹಾಗೆ, ಕೆಲವೊಮ್ಮೆ ಬೇರೆಯವರು ಸಹಾಯವನ್ನು ಎದುರುನೋಡುತ್ತಿರುತ್ತಾರೆ, ಆಗ ಅವರಿಗೆ ಸಹಾಯ ಮಾಡಲು ದೇವರು ನಮ್ಮನ್ನು ಕರೆಯುತ್ತಾನೆ. ದೇವರು ನಿಮ್ಮನ್ನು ಕರಯುವಾಗ, ನಿಮ್ಮ ಉತ್ತರ ಏನಾಗಿರತ್ತದೆ?ನೀನು ನನ್ನ ಸಂಗಡ ಬಂದರೆ ಮಾತ್ರ ನಾನು ಹೋರಾಡಲು ಹೋಗುತ್ತೇನೆ ಎಂದು ಬಾರಾಕನು ದೆಬೋರಳಿಗೆ ಹೇಳಿದನು. ನಾವು ಹೆದರುವಾಗ, ಕಣ್ಣಿಗೆ ಕಾಣದಿರವ ದೇವರಲ್ಲಿ ಭರವಸೆಯನ್ನಿಡುವ ಬದಲು ಕಣ್ಣಿಗೆ ಕಾಣುವ ಮನುಷ್ಯರಲ್ಲಿ ಭರವಸೆಯನ್ನಿಡಲು ಮುಂದಾಗುತ್ತೇವೆ. ದೇವರು ಮಹೋನ್ನತನು ಎಂಬದನ್ನು ಮರೆತುಹೋಗುತ್ತೇವೆ. ದೇವರು ಎಷ್ಟು ಮಹೋನ್ನತನೆಂದರೆ, ಇಡೀ ಭೂಮಂಡಲವನ್ನು ಆತನು ಉಂಟುಮಾಡಿದನು. ನಮ್ಮಿಂದ ಊಹೆಮಾಡಿಕೊಳ್ಳಲೂ ಆಗದಷ್ಟು ದೊಡ್ಡ ನಕ್ಷತ್ರಗಳನ್ನು ಆತನು ಉಂಟುಮಾಡಿದನು, ಅವುಗಳು ನಮ್ಮಿಂದ

ಎಷ್ಟು ದೂರದಲ್ಲಿವೆ ಎಂದರೆ ಅವುಗಳನ್ನು ನೋಡಲು ಸಹ ನಮ್ಮಿಂದ ಆಗುವದಿಲ್ಲ. ಆತನು ದೊಡ್ಡ ಸಮುದ್ರಗಳನ್ನು, ದೊಡ್ಡ ಆಕಾಶವನ್ನು, ಮೋಡಗಳನ್ನು, ಉನ್ನತ ಪರ್ವತಗಳನ್ನು ಉಂಟುಮಾಡಿದನು. ಲೋಕವನ್ನು ಮುನ್ನಡೆಸುತ್ತಿರುವಾತನು ಆತನೇ ಆಗಿದ್ದಾನೆ, ಎಲ್ಲಾ ಜನಾಂಗಗಳ ಹಿಡಿತ ಆತನ ಕೈಯಲ್ಲಿದೆ, ಇಡೀ ಚರಿತ್ರೆಯನ್ನು ಬರೆಯುತ್ತಿರುವವನೇ ಆತನು ಮತ್ತು ಭವಿಷ್ಯದ ಕುರಿತಾದ ಪ್ರತಿಯೊಂದು ವಿಷಯವೂ ಆತನಿಗೆ ಗೊತ್ತಿದೆ. ಆಕಾಶವನ್ನು ನೋಡಿರಿ ಅಥವಾ ಆಕಾಶವನ್ನು ಊಹಿಸಿಕೊಳ್ಳಿರಿ ಮತ್ತು ಆತನು ಎಷ್ಟು ದೊಡ್ಡವನಾಗಿದ್ದಾನೆ ಎಂಬದನ್ನು ನೆನಪಿಸಿಕೊಳ್ಳಿರಿ. ಆತನು ನಿಮ್ಮನ್ನು ಕರೆಯುವಾಗ, ಆತನು ನಿಮ್ಮೊಂದಿಗಿರುತ್ತಾನೆ ಮತ್ತು ಯಾವುದೇ ಕಾರ್ಯವನ್ನು ಮಾಡಲು ನಿಮಗೆ ಹೇಳಿದರೂ ಅದನ್ನು ಮಾಡಿ ಮುಗಿಸಲು ನಿಮಗೆ ಸಹಾಯ ಮಾಡುತ್ತಾನೆ ಎಂಬ ಭರವಸೆ ನಿಮ್ಮಲ್ಲಿರಲಿ. ನೀವು ಮಾಡಬೇಕಾಗಿರುವ ಕಾರ್ಯ ಗಾಬರಿ ಉಂಟುಮಾಡುತ್ತಿದೆ ಎಂದು ನೀವು ಆಲೋಚಿಸುವಾಗ, ಆಕಾಶ, ನಕ್ಷತ್ರಗಳು ಮತ್ತು ಬೆಟ್ಟಗಳ ಬಗ್ಗೆ ಆಲೋಚಿಸಿರಿ  ಹಾಗೂ ನಿಮಗೆ ಗಾಬರಿಯನ್ನುಂಟುಮಾಡುತ್ತಿರುವ ಕಾರ್ಯಗಳಿಗಿಂತ ದೇವರು ಉನ್ನತನಾಗಿದ್ದಾನೆ, ದೊಡ್ಡವನಾಗಿದ್ದಾನೆ ಎಂಬದನ್ನು ನೆನಪುಮಾಡಿಕೊಳ್ಳಿರಿ. ಬಾರಾಕನು ದೇವರಲ್ಲಿ ಭರವಸೆಯನ್ನಿಡದೆ ದೆಬೋರಳಲ್ಲಿ ಭರವಸೆಯನ್ನಿಟ್ಟದ್ದರಿಂದ, ಸೀಸರನನ್ನು ಕೊಲ್ಲುವ ಅವಕಾಶವನ್ನು ದೇವರು ಮತ್ತೊಬ್ಬ ಸ್ತ್ರೀಗೆ ಕೊಟ್ಟನು. ದೇವರು ಅವರ ಸಂಗಡ ಇದ್ದನು ಆದ್ದರಿಂದ ಬಾರಾಕನು ಮತ್ತು ಇಸ್ರಾಯೇಲ್ಯರು ಯುದ್ಧಗಳನ್ನು ಜಯಿಸಿದರು. ಸೀಸರನು ಓಡಿಹೋದನು ಮತ್ತು ಒಬ್ಬ ಹೆಂಗಸಿನ ಮೇಲೆ ಭರವಸೆಯನ್ನಿಟ್ಟು ಗುಡಾರದೊಳಗೆ ಅವಿತುಕೊಂಡಾಗ ಆಯಾಸದಿಂದ ನಿದ್ರೆ ಮಾಡಿದನು. ಅವನು ಮಲಗಿರುವಾಗ, ಆಕೆ ಅವನನ್ನು ಕೊಂದಳು, ಇಸ್ರಾಯೇಲ್ಯರು ವಿಜಯದ ಗೀತೆಯನ್ನು ಹಾಡುವಾಗ ಬಾರಾಕನ ಬಗ್ಗೆ ಹಾಡುವ ಬದಲು ಅವನನ್ನು ಕೊಂದ ಆ ಸ್ತ್ರೀಯ ಬಗ್ಗೆ ಹಾಡಿದರ್. ದೇವರು ನೀತಿವಂತನು, ಮತ್ತು ನಾವು ಮಾಡುವ ಪ್ರತಿಯೊಂದು ಕಾರ್ಯಗಳಿಗೆ ತಕ್ಕ ಹಾಗೆ ದೇವರು ನಮಗೆ ಪ್ರತಿಫಲ ಕೊಡುವನು ಎಂದು ಯೇಸು ಕ್ರಿಸ್ತನು ಹೇಳಿದ್ದಾನೆ. ನಮಗೆ ಭೂಲೋಕದಲ್ಲಿ ಕೆಲವು ಬಹುಮಾನಗಳು ದೊರೆಯುತ್ತವೆ ಮತ್ತು ಪರಲೋಕದಲ್ಲಿ ಕೆಲವು ಬಹುಮಾನಗಳು ದೊರೆಯುತ್ತವೆ. ದೇವರ ವಿಷಯದಲ್ಲಿ ನಾವು ಧೈರ್ಯಶಾಲಿಗಳಾಗಿರುವಾಗ ಆತನು ಹೇಗೂ ನಮಗೆ ಬಹುಮಾನ ಕೊಡುತ್ತಾನೆ ಎಂಬ ದೃಢತೆ ನಮಗಿರಬೇಕು.

ದೇವರು ನೀತಿವಂತನಾಗಿದ್ದಾನೆ ಮತ್ತು ನಾನು ನನ್ನ ಜೀವಿತದಲ್ಲಿ ಮಾಡುವ ಪ್ರತಿಯೊಂದು ಕಾರ್ಯಗಳಿಗೆ ತಕ್ಕ ಹಾಗೆ ನನಗೆ ಬಹುಮಾನ ಕೊಡುತ್ತಾನೆ ಎಂಬದನ್ನು ನಾನು ಅರ್ಥಮಾಡಿಕೊಳ್ಳುತ್ತೇನೆ.

## ವಿಶ್ಲೇಷಣ ೨

ಸಭೆಯ ಸಭಾಪಾಲಕರು ಮಾರ್ಕನಿಗೆಂದು ಒಂದು ಸಣ್ಣ ಬಹುಮಾನ ತಂದಿದ್ದರು. ಸಹಾಯ ಮಾಡಿದ್ದಕ್ಕಾಗಿ ಅವರು ಅವನಿಗೊಂದು ಸಣ್ಣ ಬಹುಮಾನ ಕೊಡಬೇಕೆಂದಿದ್ದರು. ತರಗತಿಯನ್ನು ಇಬ್ಬರು ನೋಡಿಕೊಂಡಿದ್ದರು ಎಂಬದು ಅವರಿಗೆ ತಿಳಿದಾಗ, ಹಣದ ರೂಪವಾಗಿದ್ದ ಬಹುಮಾನವನ್ನು ಎರಡಾಗಿ ವಿಭಾಗಿಸಿದರು. ಎಲ್ಲಾ ಮುಗಿದ ನಂತರ ತನಗೆ ಯಾರ ಸಹಾಯದ ಅವಶ್ಯಕತೆಯೂ ಇರಲಿಲ್ಲ ಎಂಬದು ಮಾರ್ಕನಿಗೆ ಅರಿವಾಯಿತು.



## ಚಟುವಟಿಕೆ ೨

ನ್ಯಾಯಾಲಯ

ಮಕ್ಕಳು ವೃತ್ತಾಕಾರದಲ್ಲಿ ಕುಳಿತುಕೊಳ್ಳಬೇಕು; ಟೀಚರ್ ಒಂದು ಸನ್ನಿವೇಶವನ್ನು ಸೃಷ್ಟಿಸುವರು ಉದಾಹರಣೆಗೆ (ತಂದೆ ತನ್ನ ಮಕ್ಕಳಿಗೆ ಕಲವು ಸ್ಕೇಟ್ (ಭರ್ಪದ ಮೇಲೆ ಉಪಯೋಗಿಸುವ ಸಾಧನ) ತರುತ್ತಾರೆ. ಆದರೆ ದೊಡ್ಡ ಮಗಳು ತನ್ನ ತಮ್ಮನ ಕಾಲುಗಳಲ್ಲಿ ವಾಸನೆ ಬರುತ್ತವೆ ಎಂಬ ಕಾರಣಕ್ಕೆ ಅವುಗಳನ್ನು ಅವನಿಗೆ ಸಿಗದಂತೆ ಬಚ್ಚಿಡುತ್ತಾಳೆ. ಇದು ಸರಿಯೋ ಅಥವಾ ತಪ್ಪೋ?) ನಿಮ್ಮ ಬಲಗಡೆಯಲ್ಲಿ ಕುಳಿತಿರುವ ಮಗು ನ್ಯಾಯಾಧಿಪತಿಯಾಗಿ ಇದು ಸರಿಯೋ ಅಥವಾ ತಪ್ಪೋ ಎಂಬ ವಾದವನ್ನು ಪ್ರಾರಂಭಿಸುವಂತೆ ಹೇಳಬೇಕು. ಆದರೆ ಅದಕ್ಕೂ ಮೊದಲು, ಉಳಿದ ಮಕ್ಕಳು ತೀರ್ಪುಗಾರರಾಗಿರುತ್ತಾರೆ. ಮೊದಲನೆಯದಾಗಿ ಸರಿ ಎಂಬದಾಗಿ  ಹೇಳುವವರು ತಮ್ಮ ಕೈಗಳನ್ನು ಮೇಲೆತ್ತುವರು ಮತ್ತು ಕೈ ಎತ್ತಿದವರ ಸಂಖ್ಯೆಯನ್ನು




ಲೆಕ್ಕಿಸಬೇಕು. ನಂತರ ತಪ್ಪು ಎಂಬದಾಗಿ ಹೇಳುವವರು ತಮ್ಮ ಕೈಗಳನ್ನು ಮೇಲೆತ್ತುವರು ಮತ್ತು ಕೈ ಎತ್ತಿದವರ ಸಂಖ್ಯೆಯನ್ನು ಲೆಕ್ಕಿಸಬೇಕು. ನ್ಯಾಯಾಧಿಪತಿಯು, ಒಂದು ನಿಮಿಷದ ನಂತರ, ಗಟ್ಟಿಯಾಗಿ ಮತ್ತು ಸ್ಪಷ್ಟವಾಗಿ, ಸರಿಯೋ ಅಥವಾ ತಪ್ಪೋ ಎಂಬ ವಿಷಯದಲ್ಲಿ ತನ್ನ ಅಂತಿಮ ತೀರ್ಪನ್ನು ತಿಳಿಸಬೇಕು. ನಂತರ ಬೇರೊಬ್ಬ ಮಗುವಿನ ಸರದಿ ಬರುವಾಗ, ಯಾವುದು ಸರಿ ಎಂದು ತೀರ್ಮಾನಿಸಲು ಅವಕಾಶ ಕೊಡಬೇಕು.

## ಟೈಮ್ ಲೈನ್ ೨

**ಏಹೂದನ ನಂತರ ಇಸ್ರಾಯೇಲ್ಯರನ್ನು ಮುನ್ನಡೆಸಿದವರು ಯಾರು? ಉ. ದೆಬೋರಾ.**
**ದೆಬೋರಳು ಎಷ್ಟು ವರ್ಷ ಮುನ್ನಡೆಸಿದಳು? ಉ. 40 ವರ್ಷಗಳು.**

## ಒಗಟಿನ ಉತ್ತರಗಳು ೨

| | | | | | | | | | | |
|---|---|---|---|---|---|---|---|---|---|---|
| ದು | ಉ | ಸ್ತ | ನಿ | ದಿ | ವಾ | ಪ್ರ | ನಂ | ಬಾ | ಯ | ಭ |
| ಫ | ಯ | ನಂ | ರ | ತ್ತ | ಬಾ | ಧಿ | ಸು | ವ | ದು | ದಿ |
| ಭ | ಳು | ಬಿ | ಭ | ಬಾ | ದಿ | ರಾ | ದೇ | ತಿ | ಫ | ನು |
| ತಿ | ಲ್ | ಗ | ಳು | ರ | ಲ್ | ಉ | ಕ | ವ | ವೀ | ರ |
| ದಿ | ಫ | ಸ್ತ | ಷ್ಟ | ವ | ಯೇ | ನಂ | ಸ್ತ | ನು | ರ | ಸೆ |
| ಸೆ | ಸ್ತ | ರು | ಸು | ಕ | ಸ್ರಾ | ಗ | ದೆ | ಫ | ತ್ತ | ಸೀ |
| ವ | ವ | ದು | ತ್ತ | ಫ | ಇ | ಭ | ಬೋ | ರು | ಯ | ಗ |
| ರ | ತ್ತ | ಉ | ಯ | ಲ್ | ರ | ದೇ | ರ | ದು | ಳು | ಭ |
| ಭ | ಭ | ಪ್ರ | ತಿ | ಫ | ಲ | ಗ | ಳು | ವ | ನಂ | ಉ |
| ದೇ | ರು | ವ | ದೇ | ತ್ತ | ನಂ | ದಿ | ಸ್ತ | ಬಾ | ಸೆ | ತಿ |





## ಪ್ರಶ್ನೆಗಳು ಮತ್ತು ಉತ್ತರಗಳು ೨


**(ಹಿರಿಯ ಮಕ್ಕಳಿಗೆ)**

1. ಅನುದಿನ ನಾವು ದೇವರು ನೋಡುವಂಥ ಯಾವ ಕಾರ್ಯಗಳನ್ನು ಮಾಡಬಹುದು? ಆತನು ನಮಗೆ ಬಹುಮಾನ ಕೊಡುತ್ತಾನೆಯೇ? (ಟೀಚರ್, ದೇವರು ಎಲ್ಲವನ್ನು ನೋಡುತ್ತಾನೆ ಎಂಬದನ್ನು ನಾನು ನಂಬುವದಿಲ್ಲ ಎಂದು ನೀವು ನಟಿಸಬೇಕು ಮತ್ತು ಅವರ ಅಭಿಪ್ರಾಯಗಳನ್ನು ತಿಳಿದುಕೊಳ್ಳಲು ಎಲ್ಲವುಗಳ ಬಗ್ಗೆ ಮಾತನಾಡಬೇಕು. ಉದಾಹರಣೆಗೆ, ನಾನು ಟಿವಿ ನೋಡುವಾಗ ಆತನು ನನ್ನನ್ನು ನೋಡುವದಿಲ್ಲ . . . ಇತ್ಯಾದಿ. ಅಂತಿಮವಾಗಿ, ದೇವರು ಎಲ್ಲವನ್ನು ನೋಡುತ್ತಾನೆ ಎಂದು ಹೇಳುವ ಮೂಲಕ ಕೊನೆಗೊಳಿಸಿರಿ. ಅಭ್ಯಾಸಗಳು ನಿಮ್ಮ ವಿದ್ಯಾರ್ಥಿಗಳ ಕಣ್ಣು ತೆರೆಸುತ್ತವೆ.)
2. ನಾನು ಟಿವಿ ನೋಡಬೇಕೆಂದು ಅಂದುಕೊಂಡಿದ್ದೇನೆ. ಪರವಾಗಿಲ್ಲವೇ? ಯಾಕೆ ನೋಡಬಾರದು? (ಕೆಲವು ಕಾರ್ಯಗಳು ನೈತಿಕವಾಗಿ ತಪ್ಪಲ್ಲ, ಆದರೆ ಅವುಗಳಿಂದ ಸಮಯ ವ್ಯರ್ಥವಾಗುತ್ತದೆ. ನಾವೆಲ್ಲರೂ

   ಅನುದಿನ ವಿಶ್ರಮಿಸಿಕೊಳ್ಳಬೇಕು. ನಿಮ್ಮ ವಿದ್ಯಾರ್ಥಿಗಳು ಸಮಯವನ್ನು ಸುಮ್ಮನೆ ವ್ಯರ್ಥವಾಗಿ ಕಳೆಯುತ್ತಿದ್ದಾರೆ ಎಂಬದನ್ನು ತಿಳಿದುಕೊಳ್ಳಲು ಅವರು ಪ್ರತಿದಿನ ವೀಡಿಯೋ ಗೇಮ್ ಆಡುತ್ತಾ ಅಥವಾ ಟಿವಿ ನೋಡುತ್ತಾ ಎಷ್ಟು ಸಮಯ ಕಳೆಯುತ್ತಿದ್ದಾರೆ ಎಂದು ತಿಳಿದಕೊಳ್ಳಿರಿ. ಒಂದುವೇಳೆ ದೇವರು ನಮಗ ಎಲ್ಲವುಗಳಿಗೆ ಬಹುಮಾನ ಕೊಡುತ್ತಾನೆಂದರೆ, ಒಳ್ಳೆಯ ಕಾರ್ಯಗಳನ್ನು ಹೆಚ್ಚಾಗಿ ಮಾಡುವದು ಒಳ್ಳೆಯದಲ್ಲವೇ?)
3. ಪರಲೋಕವು ಹೇಗಿರುತ್ತದೆ? (ಪರಲೋಕದ ವಿಷಯದಲ್ಲಿ ನಮ್ಮ ಉತ್ತರಗಳು ಬೇರೆಬೇರೆಯಾಗಿರುತ್ತವೆ. ಪರಲೋಕದಲ್ಲಿ ಬಹಳ ಬೇಸರವಿರುತ್ತದೆ, ಮೋಡಗಳೊಂದಿಗೆ ತೇಲುವದನ್ನು ಬಿಟ್ಟರೆ ನಮಗೆ ಬೇರೆ ಯಾವುದೇ ಕೆಲಸ ಇರುವದಿಲ್ಲ ಎಂದು ಲೋಕವು ಕೆಲವೊಮ್ಮೆ ಹೇಳುತ್ತದೆ. ಈ ಲೋಕವನ್ನು ಉಂಟು ಮಾಡಿದ ದೇವರು ಮತ್ತೊಮ್ಮೆ ಹೊಸ ಲೋಕವನ್ನು ಉಂಟುಮಾಡುತ್ತಾನೆ ಅದರಲ್ಲಿ ಕೆಟ್ಟದ್ದು ಯಾವುದೂ ಇರುವದಿಲ್ಲ ಬದಲಾಗಿ ಒಳ್ಳೆಯದು ಮಾತ್ರವೇ ಇರುತ್ತದೆ. ನಾವು ಊಹೆ ಮಾಡಿಕೊಳ್ಳುವದಕ್ಕಿಂತಲೂ ಅದು ಉತ್ತಮವಾಗಿರುತ್ತದೆ ಎಂದು ಸತ್ಯವೇದವು ಹೇಳುತ್ತದೆ. ನಿಮ್ಮ ವಿದ್ಯಾರ್ಥಿಗಳೊಂದಿಗೆ ಉತ್ತಮವಾದದ್ದರಲ್ಲಿ ಉತ್ತಮವಾದದ್ದರ ಬಗ್ಗೆ ಊಹಿಸಿಕೊಳ್ಳಲು ಸಮಯ ಬೇರ್ಪಡಿಸಿಕೊಳ್ಳಿರಿ ಮತ್ತು ಕೆಲವು ದೊಡ್ಡ ಬಹುಮಾನಗಳ ಬಗ್ಗೆಯೂ ಯೋಚಿಸಿರಿ. ಐಪ್ಯಾಡ್ 2 ಗೆಲ್ಲಲು ನೀವೇನು ಮಾಡುವಿರಿ ಎಂದು ಅವರನ್ನು ಕೇಳಿರಿ? ಪರಲೋಕದಲ್ಲಿ ದೇವರು ಇಂಥಾ ಒಳ್ಳೆಯ ಬಹುಮಾನಗಳನ್ನು ಕೊಡುತ್ತಾನೆಯೇ ಎಂದು ಆತನನ್ನು ಕೇಳಿರಿ?)


## ಆಟ ೨

ಹಿಂದಿನವರ ಮಾತು ಕೇಳಿ ಚಿತ್ರ ಬಿಡಿಸಬೇಕು



ಭಾಗವಹಿಸುವವರನ್ನು ಇಬ್ಬಿಬ್ಬರಾಗಿ ಗುಂಪು ಮಾಡಿರಿ. ಅವರನ್ನು ಒಬ್ಬರ ಬೆನ್ನಿಗೊಬ್ಬರನ್ನು ಒರಗಿಕೊಂಡು ಕೂರಿಸಿರಿ. ಪ್ರತಿಯೊಂದು ಗುಂಪಿನಲ್ಲಿರುವ ಒಂದು ಮಗುವಿಗೆ ಪೆನ್ ಮತ್ತು ಪೇಪರ್ ಕೊಡಿರಿ, ಇನ್ನೊಂದು ಮಗುವಿನ ಕೈಗೆ ಚಿತ್ರವನ್ನು ಕೊಡಿರಿ. ಯಾವ ಮಗುವಿನ ಕೈಯಲ್ಲಿ ಚಿತ್ರವಿದೆಯೋ ಆ ಮಗು ತನ್ನ ಜೊತೆ ಆಟಗಾರನಿಗೆ ಆ ಚಿತ್ರ ನಿಜವಾಗಿಯೂ ಏನೆಂದು ಹೇಳದೆ ಅದನ್ನು ವಿವರಿಸಬೇಕು. ಉದಾಹರಣೆಗೆ ಸೇಬಿನ ಹಣ್ಣಿನಲ್ಲಿ ಹುಳು ಇರುವ ಚಿತ್ರವಿದ್ದರೆ, "ಹಣ್ಣಿನಲ್ಲಿ ಹುಳು ಇರುವ" ಚಿತ್ರ ಬಿಡಿಸು ಎಂದು ನೇರವಾಗಿ ಹೇಳಬಾರದು. ಬದಲಾಗಿ ಒಂದು ವೃತ್ತವನ್ನು ಬರೆ ಎಂದು  ಹೇಳಬಹುದು. ಪೆನ್ ಮತ್ತು ಪೇಪರ್ ಇರುವ ಮಗು ಮೌಖಿಕ ವಿವರಣೆ ಕೇಳಿ ತನ್ನ ಕಲ್ಪನೆಯ ಮೇರೆಗೆ ಚಿತ್ರವನ್ನು ಬಿಡಿಸಬೇಕು. ಚಿತ್ರ ಬಿಡಿಸಲು ಸುಮಾರು 10 ಅಥವಾ 15 ನಿಮಿಷಗಳ ಸಮಯಾವಕಾಶವನ್ನು ಕೊಡಿರಿ.

## ಹಾಜರಾತಿ ೨




ತರಗತಿಗೆ ಬಂದ ಮಕ್ಕಳಿಗೆ ಅಂದಿನ ಕಾರ್ಡ್ ಕೊಡಿರಿ. ವೀರರ ಆಟ ಆಡಲು ಮತ್ತೊಂದು ಕಾರ್ಡ್ ಪಡೆಯಬೇಕೆಂದರೆ ಮುಂದಿನ ವಾರ ತರಗತಿಗೆ ಬರುವಂತೆ ಅವರನ್ನು ಪ್ರೋತ್ಸಾಹಪಡಿಸಿರಿ ಮತ್ತು ಈ ವಾರ ಕಾರ್ಡ್ ಪಡೆದದ್ದಕ್ಕಾಗಿ ಅಭಿನಂದಿಸಿರಿ! ಇಂದಿನ ಕಾರ್ಡ್ ಯಾವುದೆಂದರೆ:
ದೆಬೋರಳು

## ಹೋಮ್ ವರ್ಕ್ ೨

ಈ ವಾರದ ಹೋಮ್ ವರ್ಕ್ ಏನೆಂದರೆ ಯೇಸು ಕ್ರಿಸ್ತನ ಬಗ್ಗೆ ಮಾತನಾಡುವದು, ಯಾರನ್ನಾದರೂ ಪ್ರೋತ್ಸಹಪಡಿಸುವದು ಅಥವಾ ಮನೆಯಲ್ಲಿ ತಂದೆತಾಯಿಗಳಿಗೆ ಸಹಾಯ ಮಾಡುವದು, ಅನುದಿನ ಯಾವ ರೀತಿಯ ಜವಾಬ್ದಾರಿಕೆಗಳನ್ನು ನಿಭಾಯಿಸಬೇಕು ಎಂಬ ಯಾವುದಾದರು ಚಟುವಟಿಕೆಯನ್ನು ಆಯ್ಕೆ ಮಾಡಿಕೊಳ್ಳಿರಿ. ಅದು ಮನೆಯಲ್ಲಾಗಿರಬಹುದು ಅಥವಾ ಶಾಲೆಯಲ್ಲಾಗಿರಬಹುದು. ಇದಲ್ಲದೆ, ಸಭೆಯಲ್ಲಿಯೂ ಯಾವುದಾದರು ಕಾರ್ಯಮಾಡಲು ನೀವು ಮುಂದಾಗಬಹುದು. ಒಂದುವೇಳೆ ನಿಮಗೇನಾದರೂ ಗಾಬರಿಯಾದರೆ, ನಕ್ಷತ್ರಗಳು ಅಥವಾ ಮೋಡಗಳನ್ನು ನೋಡಿರಿ ಮತ್ತು ಅವುಗಳು ಉಂಟುಮಾಡಿರುವ ದೇವರು ಎಷ್ಟು ಉನ್ನತನು ಅಥವಾ ದೊಡ್ಡವನು ಎಂಬದನ್ನು ಆಲೋಚಿಸಿರಿ.

ಓದಿರಿ

ದಿನ 1: ನ್ಯಾಯಸ್ಥಾಪಕರು 6:1-13
ದಿನ 2: ನ್ಯಾಯಸ್ಥಾಪಕರು 6:14-26
ದಿನ 3: ನ್ಯಾಯಸ್ಥಾಪಕರು 6:27-40
ದಿನ 4: ನ್ಯಾಯಸ್ಥಾಪಕರು 7:1-15
ದಿನ 5: ನ್ಯಾಯಸ್ಥಾಪಕರು 7:16-25

# ೩. ದೇವರು ತನ್ನ ವಾಕ್ಯವನ್ನು ದೃಢಪಡಿಸುತ್ತಾನೆ



ಸತ್ಯವೇದ ಕಥೆ: ಗಿದ್ಯೋನನು

ನ್ಯಾಯಸ್ಥಾಪಕರು 6:1-7:25

## ಕಂಠಪಾಠ ವಚನ ೩

"ಸರ್ವೇಶ್ವರನನ್ನು ಎದುರುನೋಡುವವರು ಹೊಸ ಚೇತನವನ್ನು ಹೊಂದುವರು. ರೆಕ್ಕೆ ಚಾಚಿದ ಹದ್ದುಗಳಂತೆ ಹಾರುವರು ಓಡಿದರೂ ದಣಿಯರು, ನಡೆದರೂ ಬಳಲರು." ಪ್ರವಾದಿ ಯೆಶಾಯನ ಗ್ರಂಥ 40:31

## ಕಥೆಯ ಅವಶ್ಯಕತೆ ೩



ಮತ್ತಾಯನ ತಮ್ಮ ಯೌವನಸ್ಥನಾಗಿದ್ದಾನೆ. ಒಂದುದಿನ ಅವನು ಸತ್ಯವೇದವನ್ನು ಓದಿ ಪ್ರಾರ್ಥನೆ ಮಾಡುತ್ತಿರುವಾಗ ದೇವರು ಅವನಿಗೆ ಹೇಳಿದ್ದೇನೆಂದರೆ . . .

ನಿನ್ನ ಸಭೆಯ ಆರಾಧನಾ ತಂಡದಲ್ಲಿ ನಾನು ನಿನ್ನನ್ನು ಉಪಯೋಗಿಸಿಕೊಳ್ಳುತ್ತೇನೆ! ಅವನಿಗೆ ಬಹಳ ಆಶ್ಚರ್ಯವಾಯಿತು ಯಾಕಂದರೆ ಅವನಿಗೆ ಯಾವ ವಾದ್ಯ ನುಡಿಸಲೂ ಬರುತ್ತಿರಲಿಲ್ಲ, ಆದ್ದರಿಂದ ಅವನಲ್ಲಿ ಅನೇಕ ಸಂದೇಹಗಳು ಉಂಟಾದವು ಮತ್ತು ಅವನು ತನ್ನ ಅಲೋಚನೆ ತಪ್ಪು ಎಂಬದಾಗಿ ಅಂದುಕೊಂಡನು.

ನಂತರ ಅವನು ಪುನಃ ಪ್ರಾರ್ಥನೆ ಮಾಡಿ ದೇವರು ಇದನ್ನೇ ಎದುರುನೋಡುತ್ತಿದ್ದಾನೇನೋ ಎಂದು ವಿಚಾರಿಸಿದನು . . .

## ಮುಖ್ಯ ಪಾಠ ೩

ಕಳೆದ ವಾರ, ಬಾರಾಕನು ದೇವರಿಗಿಂತ ಹೆಚ್ಚಾಗಿ ಮನುಷ್ಯರಲ್ಲಿ ಭರವಸೆಯಿಟ್ಟನು ಎಂಬದನ್ನು ಕಲಿತುಕೊಂಡೆವು. ಈ ವಾರ ನಾವು ಗಿದ್ಯೋನನೆಂಬ ವ್ಯಕ್ತಿಯ ಬಗ್ಗೆ ಕಲಿತುಕೊಳ್ಳೋಣ. ಮತ್ತೊಮ್ಮೆ, ಇಸ್ರಾಯೇಲ್ಯರು ಪಾಪಮಾಡಿದರು, ಮಿದ್ಯಾನ್ಯರು ಅವರು ಎಷ್ಟರ ಮಟ್ಟಿಗೆ ಬಾಧಿಸಿದರೆಂದರೆ ಈ ಸಲ ಅವರಿಗೆ ಆಹಾರವಾಗಲಿ ಅಥವಾ ಪಶುಗಳಾಗಲಿ ಇರಲಿಲ್ಲ. ಅವರು ರಹಸ್ಯವಾಗಿ ಆಹಾರವನ್ನು ಸಿದ್ಧಮಾಡಿಕೊಳ್ಳಬೇಕಾಗಿತ್ತು. ಪ್ರತಿಯೊಂದು ರಹಸ್ಯವಾಗಿಯೇ ಊಟಮಾಡುತ್ತಿದ್ದರು. ಒಂದುದಿನ ದೇವದೂತನು ಗಿದ್ಯೋನನ ಬಳಿಗೆ ಬಂದು, ದೇವರು ನಿನ್ನ ಮೂಲಕ ಇಸ್ರಾಯೇಲ್ಯರನ್ನು ಬಿಡುಗಡೆ ಮಾಡುವನು ಎಂಬದಾಗಿ ಹೇಳಿದನು. ಆತನು ಗಿದ್ಯೋನ್ಯನಿಗೆ ನೀನು ನಿನ್ನ ಬಲ್ಲದಲ್ಲಿಯೇ ಮುಂದೆ ಸಾಗು ಎಂದು ಹೇಳಿದನು. ಆದರೆ ಗಿದ್ಯೋನ್ಯನು ಇದು ಹೇಗೆ ಸಾಧ್ಯ ನಾನು ಕನಿಷ್ಠನು ನನ್ನಿಂದ ಆಗುವದಿಲ್ಲವಲ್ಲಾ ಎಂದು ಹೇಳಿದನು. ನೀವು ಎಂದಾದರೂ, "ನಾನು ಚಿಕ್ಕವನು, ನಾನೇನು ಮಾಡಬಲ್ಲೆನು" ಎಂಬದಾಗಿ ಅಂದುಕೊಂಡಿದ್ದೀರೋ? ನಿಮಗಿರುವ ಸ್ವಲ್ಪ ಬಲವನ್ನು ದೇವರು ಉಪಯೋಗಿಸಿಕೊಳ್ಳುತ್ತಾನೆ ಮತ್ತು ನೀವು ದೊಡ್ಡ ಕಾರ್ಯಮಾಡಲು ನಿಮಗೆ ಸಹಾಯ ಮಾಡುತ್ತಾನೆ. ದೇವರು ಬಲಿಷ್ಠನಾಗಿರವದರಿಂದ ಆತನಿಗೆ ಇತರ ಬಲಿಷ್ಠರ ಸಹಾಯದ ಅವಶ್ಯಕತೆಯಿಲ್ಲ. ಗಿದ್ಯೋನನು ಮಾಡಿದ
ಕಾರ್ಯವನ್ನು ನಾವೆಲ್ಲರೂ ಮಾಡಬಹುದಾಗಿದೆ: ಇಂದಿನ ಕಥೆಯಲ್ಲಿ ಮತ್ತಾಯನ ತಮ್ಮನೂ ಹಾಗೆಯೇ ಮಾಡಿದನು; ಅವನು ದೃಢತಗಾಗಿ ಅದಕ್ಕೆ ಗುರುತೇನು ಎಂದು ಕೇಳಿದನು. ದೇವರು ತನ್ನ ವಾಕ್ಯವನ್ನು ದೃಢಪಡಿಸವಂತೆ ನಾವು ಆತನನ್ನು ಬೇಡಿಕೊಳ್ಳಬೇಕು ನಂತರ ಅದಕ್ಕೆ ವಿಧೇಯರಾಗಬೇಕು. ಅವಿಧೇಯತೆ ಮತ್ತು ಅಲ್ಪವಿಶ್ವಾಸ ದೇವರಿಗೆ ಇಷ್ಟವಾಗದ ಕಾರ್ಯಗಳಾಗಿವೆ. ದೇವದೂತನು ತನ್ನೊಂದಿಗೆ

ಮಾತನಾಡುತ್ತಿದ್ದಾನೆ ಎಂಬದು ಗಿದ್ಯೋನನಿಗೆ ತಿಳಿದಾಗ ಅವನು ಹೆದರಿಕೊಂಡನು. ದೇವರು ಅವನಿಗೆ ಹೇಳಿದ್ದೇನೆಂದರೆ, “ನಿನಗೆ ಸಮಾಧಾನವಾಗಲಿ! ಹೆದರಬೇಡ.” ನಾನು ನನ್ನ ಸಮಾಧಾನವನ್ನು ನಿಮಗೆ ಕೊಡುತ್ತೇನೆ ಮತ್ತು ಯಾವಾಗಲೂ ನಿಮ್ಮೊಂದಿಗಿರುತ್ತೇನೆ ಎಂದು ಯೇಸು ಕ್ರಿಸ್ತನು ಹೇಳಿದ್ದಾನೆ ಹಾಗೂ ನೀವು ಭಯಪಡಬೇಡಿರಿ ಎಂದು ನಮಗೆ ಮತ್ತೆಮತ್ತೆ ಹೇಳುವವನಾಗಿದ್ದಾನೆ. ನಾವು ಸಮಾಧಾನದಿಂದಿರುವಾಗ, ದೇವರು ನಮ್ಮೊಂದಿಗಿದ್ದಾನೆ ಎಂಬದು ನಮಗೆ ತಿಳಿದಿರುವಾಗ ಮತ್ತು ಆತನು ತನ್ನ ವಾಕ್ಯವನ್ನು ದೃಢಪಡಿಸಿರುವಾಗ ನಾವು ನಮ್ಮ ನಂಬಿಕೆಯನ್ನು ಕ್ರಿಯೆಯಾಗಿ ಪ್ರವರ್ತಿಸುತ್ತೇವೆ ಹಾಗೂ ಆತನಿಗೆ ವಿಧೇಯರಾಗುತ್ತೇವೆ. ಗಿದ್ಯೋನನು ತನ್ನ ಪಟ್ಟಣದಲ್ಲಿದ್ದ ಸುಳ್ಳು ದೇವತೆಗಳ ಯಜ್ಞವೇದಿಗಳನ್ನು ಕೆಡವಿದನು ಮತ್ತು ನಿಜವಾದ ದೇವರಿಗೆ ಯಜ್ಞವೇದಿಯನ್ನು ಕಟ್ಟಿದನು. ನಂತರ ದೇವರು ಅವನಿಗೆ ಮಿದ್ಯಾನ್ಯರ ದೊಡ್ಡ ಸೈನ್ಯದ ವಿರುದ್ಧ ಹೋರಾಡಲು ಇಸ್ರಾಯೇಲ್ಯರನ್ನು ಒಟ್ಟುಗೂಡಿಸುವಂತೆ ಹೇಳಿದನು. ಮತ್ತೊಮ್ಮೆ ಗಿದ್ಯೋನ್ಯನು ದೇವರಿಗೆ ದೃಢಪಡಿಸುವಂತೆ ಕೇಳಿಕೊಂಡನು, ಈ ಸಲ ಅಸಾಧ್ಯವಾದದ್ದನ್ನು ಕೇಳಿಕೊಂಡನು. ಅವನು ನೆಲದ ಮೇಲೆ ಕುರಿಯ ತುಪ್ಪಟವನ್ನು ಇಟ್ಟನು ಮತ್ತು ಮುಂಜಾನೆ ಬಂದು ನೋಡುವಾಗ ಅದರ ಮೇಲೆ ಮಾತ್ರವೇ ಮಂಜು ಬಿದ್ದಿರಬೇಕು ಆದರೆ ಅದರ ಸುತ್ತಲಿರುವ ಭೂಮಿ ಒಣಗಿರಬೇಕು. ಹಾಗೆಯೇ ಎರಡನೆದಿನ ತುಪ್ಪಟ ಒಣಗಿರಬೇಕು ಆದರೆ ಅದರ ಸುತ್ತಲಿರುವ ಭೂಮಿ ಒದ್ದೆಯಾಗಿರಬೇಕು. ಗಿದ್ಯೋನನು 32,000 ಇಸ್ರಾಯೇಲ್ಯರನ್ನು ಕೂಡಿಸಿದನು ಆದರೆ ದೇವರಿಗೆ ನಮ್ಮ ಬಲದಲ್ಲಿ ಆಸಕ್ತಿಯಿಲ್ಲ; ಆದರೆ ಕಡಿಮೆ ಸಂಖ್ಯೆಯಿಂದಲೂ ನಮ್ಮನ್ನು ರಕ್ಷಿಸಲು ಶಕ್ತನಾಗಿದ್ದಾನೆ. ಕೂಡಿ ಬಂದಿದ್ದ ಜನರಲ್ಲಿ 300 ಜನರನ್ನು ಮಾತ್ರವೇ ಉಳಿಸಿಕೊಂಡು ಆತನು ಉಳಿದವರನ್ನು ಮನೆಗೆ ಕಳುಹಿಸುವಂತೆ ಗಿದ್ಯೋನನಿಗೆ ಹೇಳಿದನು. ದೇವರು ಮತ್ತೊಮ್ಮೆ ತನ್ನ ವಾಕ್ಯವನ್ನು ದೃಢಪಡಿಸಿದನು. ಆತನು ಗಿದ್ಯೋನನಿಗೆ ನೀವು ವೈರಿ ಪಾಳೆಯದ ಅಂಚಿಗೆ ಹೋಗು ಎಂದು ಹೇಳಿದನು, ಅಲ್ಲಿ ಯಾರೋ ಒಬ್ಬನು ಗಿದ್ಯೋನನು ತಮ್ಮನ್ನು ಸೋಲಿಸಿದ ಹಾಗೆ ಕನಸು ಕಂಡದ್ದರ ಕುರಿತು ಮಾತನಾಡುತ್ತಿರುವದನ್ನು ಅವನು ಕೇಳಿಸಿಕೊಂಡನು. ದೇವರು ನಿಮ್ಮ ಜೊತೆಯಲ್ಲಿರುವದು ನಿಮಗೆ ತಿಳಿಯುವಾಗ ಗಿದ್ಯೋನನು ಮಾಡಿದ ಕಾರ್ಯವನ್ನೇ ನೀವು ಮಾಡಿರಿ ಮತ್ತು ದೇವರನ್ನು ಆರಾಧಿಸಿರಿ. ಗಿದ್ಯೋನನು 300 ಜನರಿಗೆ ಪಂಜುಗಳು, ಮಡಿಕೆಗಳು ಮತ್ತು ತುತ್ತೂರಿಗಳನ್ನು ಕೊಟ್ಟನು. ಮಧ್ಯರಾತ್ರಿಯಲ್ಲಿ, ಅವರು ಸೈನ್ಯವನ್ನು ಸುತ್ತುವರಿದರು. ಮತ್ತು ಎಲ್ಲರೂ ಒಟ್ಟಾಗಿ ಮಡಿಕೆಗಳನ್ನು ಒಡೆದಾಗ ಅವುಗಳೊಳಗಿದ್ದ ಪಂಜುಗಳು ಉರಿಯಲಾರಂಭಿಸಿದವು ಆಗ ಅವರು ತುತ್ತೂರಿಗಳನ್ನು ಊದಿದರು ಮತ್ತು ಗಟ್ಟಿಯಾಗಿ ಕೂಗಿದರು. ಅಸಂಖ್ಯರಾಗಿದ್ದ ವೈರಿಗಳ ಸೈನ್ಯವು ಹೆದರಿ ಓಡಿಹೋಯಿತು! ಇಸ್ರಾಯೇಲ್ಯರು ಸುಲಭವಾಗಿ ಯುದ್ಧವನ್ನು ಜಯಿಸಿದರು ಯಾಕಂದರ ದೇವರು ಅವರ ಸಂಗಡ ಇದ್ದನು. ದೇವರು ನಿಮ್ಮನ್ನು ಕರೆಯುವಾಗ, ದೇವರು ಎಷ್ಟು ಬಲಿಷ್ಠನು ಎಂಬದನ್ನು ನೆನಪಿಸಿಕೊಳ್ಳಿರಿ. ಆತನಿಂದ ದೃಢತೆಯನ್ನು ಕೇಳಿಸಿಕೊಳ್ಳಿರಿ, ನಂತರ ಆತನು ಯಾವುದಕ್ಕೆ ಕರಯುತ್ತಿದ್ದಾನೋ ಅದನ್ನು ಮಾಡಿರಿ.

ದೇವರ ತನ್ನ ವಾಕ್ಯವನ್ನು ದೃಢಪಡಿಸುವಂತೆ ನಾನು ಬೇಡಿಕೊಳ್ಳುತ್ತೇನೆ. ನಾನು ದೇವರಿಗೆ ವಿಧೇಯನಾಗುತ್ತೇನೆ.

## ವಿಶ್ಲೇಷಣ ೩

ಸಭೆಯಲ್ಲಿ ಕೆಲವು ವಾರಗಳಾದ ನಂತರ, ದೇವರ ಪರವಾಗಿ ಸಭಾಪಾಲಕನು ಮುಂಚಿತವಾಗಿ ಅವನಿಗೆ ಹೇಳಿದ ಮಾತುಗಳನ್ನೇ ಮತ್ತೊಮ್ಮೆ ಹೇಳಿದನು. ಆಗ ಅವನಿಗೆ ದೇವರ ವಾಕ್ಯದ ದೃಢತೆ ದೊರೆಯಿತು ಮತ್ತು ತನ್ನನ್ನು ಸಂಗೀತಕ್ಕಾಗಿ ಸಿದ್ಧಮಾಡಿಕೊಳ್ಳಲು ಪ್ರಾರಂಭಿಸಿದನು.



## ಚಟುವಟಿಕೆ ೩

ದಿನಚರಿ ಪುಸ್ತಕ

- ಪೇಪರ್ ಹಾಳೆಗಳಿಂದ ದಿನಚರಿ ಪುಸ್ತಕ ಅಥವಾ ಕಿರುಪುಸ್ತಕವನ್ನು ಮಾಡಿಕೊಳ್ಳಿರಿ.
- ಪ್ರತಿದಿನ ದೇವರು ಇದ್ದಾನೆ ಎಂಬದಕ್ಕೆ ದೃಢವಾದ ಸಾಕ್ಷಿಗಳನ್ನು ಅದರಲ್ಲಿ ಬರೆಯಬೇಕು ಎಂದು ಅವರಿಗೆ ಹೇಳಿರಿ. ಅದು ಅವರ ಜೀವಿತದಲ್ಲಿ ಸಂಭವಿಸುವ ಕಾರ್ಯವಾಗಿರಬಹುದು ಅಥವಾ ದೇವರು ಇದ್ದಾನೆ ಎಂಬದನ್ನು ನಿರೂಪಿಸುವ ಕಾರ್ಯಗಳು ಅವರ ಅನುಭವಕ್ಕೆ ಬರುವವುಗಳಾಗಿರಬಹುದು.




## ಟೈಮ್ ಲೈನ್ ೩

ಗಿದ್ಯೋನನು ಯಾವ ಇಸವಿಯಲ್ಲಿ ಜನಿಸಿದನು? ನಮಗೆ ನಿಖರವಾಗಿ ಗೊತ್ತಿಲ್ಲ, ಆದರೆ ಕ್ರಿ.ಪೂ 1252 ರಲ್ಲಿ ಹುಟ್ಟಿರಬಹುದು ಎಂದು ನಮಗೆ ಕಲಿಸಲಾಗಿದೆ. ಗಿದ್ಯೋನನು ಯಾವಾಗ ಮೃತಪಟ್ಟನು? ನಮಗೆ ನಿಖರವಾಗಿ ಗೊತ್ತಿಲ್ಲ, ಆದರೆ ಕ್ರಿ.ಪೂ 1152 ರಲ್ಲಿ ಮೃತಪಟ್ಟಿರಬಹುದು ಎಂದು ನಮಗೆ ಕಲಿಸಲಾಗಿದೆ.

## ಒಗಟಿನ ಉತ್ತರಗಳು ೩

| | | | | | | | | | | |
|---|---|---|---|---|---|---|---|---|---|---|
| ನೆ | ತೆ | ಯ | ಧೇ | ವಿ | ಪ್ಪ | ಲಿ | ಜು | ಪಂ | ಬ | ಸ |
| ಬ | ಧ | ತೆ | ಬೇ | ನು | ತ | ದೂ | ವ | ದೇ | ಹೀ | ಳು |
| ಳು | ಷ್ಠ | ರಾ | ನು | ಷ್ಠ | ನ | ಧಾ | ಮಾ | ಸ | ಹ | ಗ |
| ಗ | ಸ | ಹೀ | ಆ | ಲಿ | ಮಾ | ಹೀ | ದೇ | ಳು | ಸಿ | ದಿ |
| ರಿ | ಳು | ಒ | ಲಿ | ಬ | ತೆ | ಮಿ | ಲ | ಬೇ | ವೆ | ವೇ |
| ತ್ತೂ | ಯ | ಣ | ದಿ | ವ | ಮಾ | ದ್ಯಾ | ದೂ | ಬ | ತೆ | ಜ್ಞ |
| ತು | ಪ್ಪ | ಗಿ | ದೇ | ಗಿ | ದ್ಯೋ | ನ | ನು | ತೆ | ವ | ಯ |
| ತೆ | ಬೇ | ರ | ವ | ಹೀ | ದೂ | ರು | ಸ | ಷ್ಠ | ಢ | ಬ |
| ಬ | ಕು | ಬೇ | ರ | ಗಿ | ಯಾ | ದ್ದೆ | ಒ | ಲಿ | ದಿ | ದೃ |
| ಷ್ಠ | ದೂ | ಕು | ಯ | ಳು | ದ್ಯಾ | ನು | ತು | ಪ್ಪ | ಟ | ಪ್ಪ |







## ಪ್ರಶ್ನೆಗಳು ಮತ್ತು ಉತ್ತರಗಳು ೩

(ಹಿರಿಯ ಮಕ್ಕಳಿಗೆ)

1. ಒಂದುವೇಳೆ ದೇವರು ನನಗೆ ಬೇಡ ಎಂದರೆ ಏನಾಗುತ್ತದೆ? (ನಾವು ಬಹಳವಾಗಿ ಬೇಡುವಾಗ ನಮ್ಮೆಲ್ಲರಿಗೂ ಸಹಜವಾಗಿ ಹೀಗಾಗುತ್ತದೆ ಆದ್ದರಿಂದ ನಮಗೆ ದೇವರು ಬೇಡ ಅನ್ನುತ್ತಿದ್ದಾನೆ ಎಂದು ಅನ್ನಿಸುವಾಗ, ಅನೇಕ ಸಲ ದೃಢಪಡಿಸುವಂತೆ ದೇವರನ್ನು ಬೇಡಿಕೊಳ್ಳುತ್ತೇವೆ. ದೇವರು ನಮ್ಮ ವಿಷಯದಲ್ಲಿ ದೀರ್ಘಶಾಂತನಾಗಿದ್ದಾನೆ, ಆದರೆ ನಾವು ಆತನು ಬೇಡ ಎಂಬ ಉತ್ತರ ಕೊಟ್ಟಿದ್ದಾನೆ ಎಂಬದನ್ನು ಅಂಗೀಕರಿಸಿಕೊಳ್ಳಬೇಕು ಹಾಗೂ ಆತನಿಗೆ ವಿಧೇಯರಾಗಬೇಕು.)

2. ದೇವರು ನನ್ನ ವಿಷಯದಲ್ಲಿ ಕೋಪಿಸಿಕೊಳ್ಳುತ್ತಾನೆಯೇ? ಯಾಕೆ? (ದೇವರು ಯಾವ ವಿಷಯಗಳ ಕುರಿತು ನನ್ನ ಮೇಲೆ ಕೋಪಿಸಿಕೊಳ್ಳುತ್ತಾನೆ? ನಾವು ಅವಿಧೇಯರಾಗುವಾಗ, ಸುಳ್ಳು ಹೇಳುವಾಗ, ಸಂದೇಹಪಟ್ಟು ಇತರೆ ಕಾರ್ಯಗಳನ್ನು ಮಾಡುವಾಗ ಅಥವಾ ನಮ್ಮಿಂದ ಮಾಡಲು ಆಗುವದಿಲ್ಲ ಎಂದು ಕಾರಣಗಳನ್ನು ಹೇಳುವಾಗ ಕೋಪಿಸಿಕೊಳ್ಳುತ್ತಾನೆ. ಆದರೆ ನಾವು ಹೆದರಿಕೊಂಡು, ತನ್ನ ವಾಕ್ಯವನ್ನು ದೃಢಪಡಿಸುವಂತೆ ಬೇಡಿಕೊಳ್ಳುವಾಗ ದೇವರು ಕೋಪಿಸಿಕೊಳ್ಳುವದಿಲ್ಲ.)
3. ದೇವರು ನಿಜವಾಗಿಯೂ ನನ್ನ ಸಂಗಡ ಮಾತನಾಡಲು ಬಯಸುತ್ತಾನೆಯೇ? (ವಿಷಯವನ್ನು ಚರ್ಚಿಸಿರಿ: ದೇವರು ಏನು ಹೇಳುತ್ತಾನೆ, ಆತನು ನಮ್ಮ ಜೊತೆಯಲ್ಲಿ ಮಾತನಾಡುವದಾದರೆ ಯಾರ ಜೊತೆಯಲ್ಲಿ ಮಾತನಾಡಲು ಬಯಸುತ್ತಾನೆ, ಇತ್ಯಾದಿ. ಆತನು ಪ್ರತಿದಿನ ನಮ್ಮೆಲ್ಲರೊಂದಿಗೆ ಎಲ್ಲಾ ವಿಷಯಗಳ ಬಗ್ಗೆ ಮಾತನಾಡುತ್ತಾನೆ ಎಂದು ಹೇಳುವ ಮೂಲಕ ಮುಕ್ತಾಯಗೊಳಿಸಿರಿ.)


## ಆಟ ೩



ಯಾರೆಂದು ಊಹಿಸಿರಿ

ಎರಡು ತಂಡಗಳನ್ನು ರಚಿಸಿರಿ. ಒಂದು ತಂಡದಲ್ಲಿರುವ ಮಕ್ಕಳು ಹಿಂದಿನ ಪಾಠಗಳ ವ್ಯಕ್ತಿಗಳನ್ನು ಪ್ರತಿನಿಧಿಸಬೇಕು, ಅವು ಯಾರೆಂದು ಟೀಚರ್ ರಹಸ್ಯವಾಗಿ ತಿಳಿಸುತ್ತಾರೆ. ಇನ್ನೊಂದು ತಂಡದವರು ಅವರು ಯಾರನ್ನು ಪ್ರತಿನಿಧಿಸುತ್ತಿದ್ದಾರೆ ಎಂಬದನ್ನು ತಿಳಿಸಬೇಕು. ಅವರು ಹಿಂದಿನ ಪಾಠದ ವ್ಯಕ್ತಿಗಳ ಬಗ್ಗೆ ನಿರ್ದಿಷ್ಟವಾದ ಪ್ರಶ್ನೆಗಳನ್ನು ಕೇಳಬಹುದು, ಆಗ ಉತ್ತರ ಕೊಡುವವರು ಹೌದು ಅಥವಾ ಇಲ್ಲ ಎಂಬದಾಗಿ ಮಾತ್ರವೇ ಉತ್ತರಿಸಬೇಕು. ಯಾರೊಬ್ಬರೂ ಸುಳ್ಳು ಹೇಳದಿರಬಹುದು. ಉದಾಹರಣೆಗೆ: ಹಿಂದಿನ ಪಾಠದ ವ್ಯಕ್ತಿ ಮೋಶೆಯಾಗದ್ದು "ನೀನು ನಾವೆಯನ್ನು ಕಟ್ಟಿದೆಯಾ?" ಎಂಬದು ಪ್ರಶ್ನೆಯಾಗಿದ್ದರೆ, ಅದಕ್ಕೆ ಉತ್ತರ ಇಲ್ಲ ಎಂಬದಾಗಿರುತ್ತದೆ. "ನಿನ್ನ ಹೆಸರೇನು?" ಅಥವಾ ಅಂಥ ನೇರವಾದ ಪ್ರಶ್ನೆಗಳನ್ನು ಕೇಳುವಂತಿಲ್ಲ. ಪ್ರಶ್ನೆಗಳನ್ನು ಕೇಳುವ ತಂಡದವರು ತಮ್ಮ ಊಹೆ ಸರಿಯಾಗಿದ್ದರೆ ಆ ವ್ಯಕ್ತಿ ಯಾರು ಎಂದು ಊಹಿಸಬಹುದು. ಎಲ್ಲಾ ಮುಗಿದ ನಂತರ, ತಂಡದವರು ಅದಲುಬದಲಾಗಬೇಕು ಮತ್ತು ಪುನಃ ಆಡಬೇಕು.

## ಹಾಜರಾತಿ ೩




ತರಗತಿಗೆ ಬಂದ ಮಕ್ಕಳಿಗೆ ಅಂದಿನ ಕಾರ್ಡ್ ಕೊಡಿರಿ. ವೀರರ ಆಟ ಆಡಲು ಮತ್ತೊಂದು ಕಾರ್ಡ್ ಪಡೆಯಬೇಕೆಂದರೆ ಮುಂದಿನ ವಾರ ತರಗತಿಗೆ ಬರುವಂತೆ ಅವರನ್ನು ಪ್ರೋತ್ಸಾಹಪಡಿಸಿರಿ ಮತ್ತು ಈ ವಾರ ಕಾರ್ಡ್ ಪಡೆದದ್ದಕ್ಕಾಗಿ ಅಭಿನಂದಿಸಿರಿ! ಇಂದಿನ ಕಾರ್ಡ್ ಯಾವುದೆಂದರೆ:

ಗಿದ್ಯೋನನು

## ಹೋಮ್ ವರ್ಕ್ ೩

ಈ ವಾರದ ಹೋಮ್ ವರ್ಕ್ ಏನೆಂದರೆ ದೇವರು ಇದ್ದಾನೆ ಎಂಬದನ್ನು ದೃಢಪಡಿಸುವ, ನಿಮ್ಮ ಜೀವಿತದಲ್ಲಿ ಅಥವಾ ಇತರರ ಜೀವಿತದಲ್ಲಿ ನೀವು ನೋಡಬಹುದಾದ ಯಾವುದಾದರು ಕಾರ್ಯಗಳು ಆತನ ಇರುವಿಕೆಯನ್ನು ಸಾಬೀತುಪಡಿಸುವದಾದರೆ ಅದನ್ನು ತಿಳಿದುಕೊಳ್ಳುವದಾಗಿದೆ. ಅದರ ಬಗ್ಗೆ ಬರೆಯಿರಿ ಅಥವಾ ಮನೆಗೆ ಹೋದ ಮೇಲೆ ನೋಟ್ ಪುಸ್ತಕದಲ್ಲಿ ಅದರ ಚಿತ್ರ ಬಿಡಿಸಿರಿ, ನಂತರ ಅದರ ಬಗ್ಗೆ ಚರ್ಚ್ ನಲ್ಲಿ ನಿಮ್ಮ ಟೀಚರ್ ಗೆ ಹೇಳಿರಿ.

ಓದಿರಿ

ದಿನ 1: ನ್ಯಾಯಸ್ಥಾಪಕರು 10:6-14

ದಿನ 2: ನ್ಯಾಯಸ್ಥಾಪಕರು 10:15-11:3

ದಿನ 3: ನ್ಯಾಯಸ್ಥಾಪಕರು 11:4-13

ದಿನ 4: ನ್ಯಾಯಸ್ಥಾಪಕರು 11:28-34

ದಿನ 5: ನ್ಯಾಯಸ್ಥಾಪಕರು 11:35-40

# ೪. ದೇವರು ನಿಮಗೆ ಆದ್ಯತೆಯನ್ನು ಕೊಡುತ್ತಾನೆ



**ಸತ್ಯವೇದ ಕಥೆ: ಯೆಫ್ತಾಹನು**

**ನ್ಯಾಯಸ್ಥಾಪಕರು 10:6-11:13, 11:29-40**

## ಕಂಠಪಾಠ ವಚನ ೪

**"ದೇವರು ಸರ್ವಶಕ್ತನು, ಯಾರನ್ನೂ ತುಚ್ಛೀಕರಿಸನು ಆತನ ಬುದ್ಧಿಸಾಮರ್ಥ್ಯ ಅಪಾರವಾದುದು."**

**ಯೋಬನು ಗ್ರಂಥ 36:5**

## ಕಥೆಯ ಅವಶ್ಯಕತೆ ೪



ಮಾರ್ಥಳಿಗೆ ಶಾಲೆಯಲ್ಲಿ ಬಹಳ ಅವಮಾನವಾಯಿತು. ಶಾಲೆಯಲ್ಲಿರುವವರೆಲ್ಲರೂ ಆಕೆಯ ಕುಟುಂಬದ ನಿಮಿತ್ತ ಅಥವಾ ಆಕೆ ಕ್ರೈಸ್ತಳಾಗಿರುವದರಿಂದ ಆಕೆಯನ್ನು ರೇಗಿಸುತ್ತಿದ್ದರು. ಊಟದ ಸಮಯದಲ್ಲಿ ಆಕೆ ಯಾವಾಗಲೂ ಒಂಟಿಯಾಗಿರುತ್ತಿದ್ದಳು. ಆಕೆಗೆ ಚೆಂಡಿನ ಆಟವಾಡಲು ಚೆನ್ನಾಗಿ ಗೊತ್ತಿರಲಿಲ್ಲ ಹಾಗೆಯೇ ಜಿಮ್ ತರಗತಿಯಲ್ಲಿಯೂ ಆಕೆಗೆ ಆಸಕ್ತಿ ಇರಲಿಲ್ಲ, ಉಳಿದವರೆಲ್ಲರೂ ತಂಡಗಳಿಗೆ ಆಯ್ಕೆಯಾಗುತ್ತಿದ್ದರು, ಈಕೆ ಮಾತ್ರ ಕಡೆಯದಾಗಿ ಆಯ್ಕೆಯಾಗುತ್ತಿದ್ದಳು. ಉಳಿದವರಿಗೆ ನೀವು ಬಹಳ ಚೆನ್ನಾಗಿ ಚೆಂಡಿನ ಆಟ ಆಡುತ್ತೀರಿ ಎಂದು ಆಕೆ ಹೇಳುತ್ತಿದ್ದಳು ಆದರೆ ಆಕೆ ಆಡುವಾಗ ಉಳಿದವರು ಆಕೆಯನ್ನು ನೋಡಿ ನಗುತ್ತಿದ್ದರು ಮತ್ತು ಆಕೆ ತೀರಾ ಕಳಪೆಯಾಗಿ ಆಡುತ್ತಿರುವದಾಗಿ ಹೇಳುತ್ತಿದ್ದರು. ಸಹಜವಾಗಿ ಎಲ್ಲರೂ ಆಕೆಯನ್ನು ಕಡೆಗಣಿಸುತ್ತಿದ್ದರು. ಒಂದುವಾರ ಆಕೆ ಬಹಳ ಅನಾರೋಗ್ಯಕ್ಕೆ ಒಳಗಾದ್ದರಿಂದ ಶಾಲೆಗೆ ಹೋಗಲು ಆಗಲಿಲ್ಲ. ಆಕೆ ಹುಷಾರಾದ ಮೇಲೆ, ಪುನಃ ಎಲ್ಲರ ಗೇಲಿಗೆ ಗುರಿಯಾಗಲು ಮತ್ತೆ ಶಾಲೆಗೆ ಹೋಗಲು ಧೈರ್ಯ ಮಾಡಿದಳು. "ತಂದೆಯಾದ ದೇವರೇ, ನನಗೆ ಸಹಾಯ ಮಾಡು" ಎಂದು ಪ್ರಾರ್ಥಿಸಿ ಆಕೆ ಶಾಲೆಗೆ ಹೋದಳು.

## ಮುಖ್ಯ ಪಾಠ ೪

ನಂಬಿಕೆಯ ವೀರರಿಗೆ ಪುನಃ ಸ್ವಾಗತ! ಇಂದು ದೇವರು ಯಾವುದಕ್ಕೆ ಆದ್ಯತೆ ಕೊಡುತ್ತಾನೆ ಎಂಬದನ್ನು ನಾವು ಕಲಿತುಕೊಳ್ಳೋಣ. ಜನರು ಆದ್ಯತೆ ಕೊಡುವ ವಿವಿಧ ಕಾರ್ಯಗಳ ಬಗ್ಗೆ, ಜೀವನದಲ್ಲಿ ಒಬ್ಬ ವ್ಯಕ್ತಿಯ ಮೌಲ್ಯವನ್ನು ತೋರಿಸುವ ವಿವಿಧ ಕಾರ್ಯಗಳ ಬಗ್ಗೆ ಒಂದು ಕ್ಷಣ ಆಲೋಚಿಸಿರಿ. ಲೋಕವು ಹೇಳುವ ಯಾವ ಕಾರ್ಯಗಳು ಒಬ್ಬ ವ್ಯಕ್ತಿಯನ್ನು ಪ್ರಾಮುಖ್ಯನನ್ನಾಗಿ ಮಾಡುತ್ತವೆ? (ವಿವಿಧ ಉತ್ತರಗಳಿಗೆ ಅವಕಾಶ ಕೊಡಿರಿ) ಲೋಕವು ನಮಗೆ ಯಾವಾಗಲೂ ಐಶ್ವರ್ಯ, ಸಾಮರ್ಥ್ಯಗಳು (ಇಂದಿನ ಮಾರ್ಥಳ ಕಥೆಯ ಹಾಗೆ), ತಲಾಂತುಗಳು, ಕೌಟುಂಬಿಕ ಹಿನ್ನಲೆಗಳು, ಚರ್ಮದ ಬಣ್ಣ, ಕೂದಲು, ಬಟ್ಟೆಗಳು, ಸುಂದರವಾದ ಹಲ್ಲುಗಳನ್ನು ನೋಡುವಂತೆ ಹೇಳುತ್ತದೆ! ಲೋಕವು ವಿವಿಧವಾದ ರೀತಿಯಲ್ಲಿ ಜನರಿಗೆ ಆದ್ಯತೆಯನ್ನು ಕೊಡುತ್ತದೆ, ಕೆಲವರಿಗೆ ಹೆಚ್ಚಿನ ಮೌಲ್ಯವನ್ನು ಕೊಡುತ್ತದೆ ಕೆಲವರಿಗೆ ಅತ್ಯಂತ ಕಡಿಮೆ ಮೌಲ್ಯವನ್ನು ಕೊಡುತ್ತದೆ. ಆದರೆ ದೇವರು ಇವುಗಳನ್ನು ನೋಡುವದಿಲ್ಲ. ದೇವರ ಏನನ್ನು ನೋಡುತ್ತಾನೆ ಎಂದು ನಿಮಗೆ ಅನ್ನಿಸುತ್ತದೆ? (ಊಹೆ ಮಾಡಲು ಮಕ್ಕಳಿಗೆ ಅನುಮತಿಸಿರಿ, ಆದರ

ಉತ್ತರ ಹೇಳಬೇಡಿರಿ.) ಇಂದಿನ ಸತ್ಯವೇದ ಕಥೆಯನ್ನು ನೋಡಿಕೊಳ್ಳೋಣ.

ಇಸ್ರಾಯೇಲ್ಯರ ನಿಜವಾದ ದೇವರನ್ನು ಬಟ್ಟು ಇತರ ದೇವರುಗಳನ್ನು ಆರಾಧಿಸುವ ಮೂಲಕ ಮತ್ತೆ ಪಾಪ ಮಾಡದರು. ನಂತರ ಫಿಲಿಷ್ಟಿಯರು ಮತ್ತು ಅಮ್ಮೋನಿಯರು ಅವರನ್ನು 18 ವರ್ಷಗಳ ಕಾಲ ಬಾಧಿಸಿದರು. ತಮ್ಮನ್ನು ಕಾಪಾಡುವಂತೆ ಅವರು ದೇವರನ್ನು ಬೇಡಿಕೊಂಡರು ಮತ್ತು ತಮ್ಮ ದೇಶದಲ್ಲಿದ್ದ ಎಲ್ಲಾ ಅನ್ಯದೇವತೆಗಳನ್ನು ಕಡಿದುಹಾಕಿದರು. ದೇವರು ಅವರ ಪ್ರಾರ್ಥನೆಗಳಿಗೆ ಉತ್ತರಿಸಿದನು ಮತ್ತು ಅವರನ್ನು ಕಾಪಾಡಲು

ಒಬ್ಬನನ್ನು ಕಳುಹಿಸಿದನು. ಎಂಥಾ ವ್ಯಕ್ತಿ ಇಸ್ರಾಯೇಲ್ಯರನ್ನು ಕಾಪಾಡಲು ಶಕ್ತನಾಗಿದ್ದಾನೆ? ಅವನು ಉನ್ನತನಾದ ಯೋಧನಾಗಿರುವನು ಮತ್ತು ಎಲ್ಲಾ ಜನರ ಪ್ರೀತಿ, ಗೌರವಗಳಿಗೆ ಪಾತ್ರನಾಗಿರುವನು ಎಂಬದಾಗಿ ನೀವು ಅಂದುಕೊಳ್ಳಬಹುದು . . . ಆದರೆ ದೇವರು ವ್ಯಭಚಾರಿಣಿಯ ಮಗನಾದ ಯೆಫ್ತಾಹನನ್ನು ಆರಿಸಿಕೊಂಡನು. ಅವನು ಪ್ರಾಮುಖ್ಯತೆಯಿಲ್ಲದವನು ಎಂಬದಾಗಿ ಲೋಕವು ಅಂದುಕೊಂಡಿತು, ಅವನನ್ನು ಗೇಲಿ ಮಾಡಿತು ಮತ್ತು ಅವನ ತಾಯಿಯ ನಿಮಿತ್ತ ಅವನ ಸ್ವಂತ ಸಹೋದರರೇ ದೂರಮಾಡಿದರು. ಅದು ಅನ್ಯಾಯವಾಗಿದೆ-ಅವನು ಮಾಡದ ತಪ್ಪಿಗೆ ಅವನೊಂದಿಗೆ ಕೆಟ್ಟದಾಗಿ ನಡೆದುಕೊಳ್ಳಲಾಯಿತು. ಆ ಸಮಯದ ಮನಸ್ಥಿತಿ ಹೇಗಿರುತ್ತದೆ ಎಂಬದೂ ಯೇಸು ಕ್ರಿಸ್ತನಿಗೆ ಗೊತ್ತಿದೆ. ಯೆಹೂದ್ಯರ ನಾಯಕರು ಯೇಸು ಕ್ರಿಸ್ತನು ಯಾವುದೇ ತಪ್ಪು ಮಾಡದಿದ್ದರೂ ಆತನನ್ನು ಅಪಹಾಸ್ಯ ಮಾಡಿದರು, ದೂಷಿಸಿದರು ಮತ್ತು ಕೊಂದು ಬಿಟ್ಟರು. ದೇವರು ಏನನ್ನು ಎದುರುನೋಡುವವನಾಗಿದ್ದಾನೆ? ಲೋಕದವರ ಹಾಗೆ ದೇವರು ಹೊರಗಿನ ತೋರಿಕೆಯನ್ನು ನೋಡುವದಿಲ್ಲ ಎಂದು ಸತ್ಯವೇದವು ಹೇಳುತ್ತದೆ (1 ಸಮುವೇಲ 16:7). ಒಬ್ಬ ವ್ಯಕ್ತಿ ಲೋಕವನ್ನೆಲ್ಲಾ (ಸ್ಥಾನಮಾನ, ಐಶ್ವರ್ಯ, ಪ್ರಾಮುಖ್ಯತೆ, ಇತ್ಯಾದಿ) ಸಂಪಾದಿಸಿಕೊಂಡು ಆತ್ಮ ನಷ್ಟಪಡಿಸಿಕೊಂಡರೆ ಏನು ಪ್ರಯೋಜನ ಎಂದು ಯೇಸು ಕ್ರಿಸ್ತನು ಹೇಳಿದ್ದಾನೆ. (ಮತ್ತಾಯ 16:26). ನಿಮ್ಮ ಹೃದಯವನ್ನು ಗಮನಿಸಿಕೊಳ್ಳಿರಿ. ನಿಮ್ಮ ಆತ್ಮವು ಲೋಕಕ್ಕಿಂತ ಬೆಲೆಯುಳ್ಳದ್ದಾಗಿದೆ! ಯೇಸು ಕ್ರಿಸ್ತನು ಪ್ರಾಣ ಕೊಟ್ಟಾಗ, ಆತನು ನಿಮಗೆ ಹೆಚ್ಚಿನ ಆದ್ಯತೆ ಕೊಡುತ್ತಾನಾದ್ದರಿಂದ ತನ್ನನ್ನೇ ಅರ್ಪಿಸಿದನು. ದೇವರು ನಿಮಗೆ ಕೊಡುವ ಆದ್ಯತೆಯಿಂದ ಲೌಕಿಕವಾದ ಯಾವ ಕಾರ್ಯಗಳೂ ಯಾವುದನ್ನೂ ಕೂಡಿಸಲು ಅಥವಾ ಕಳೆಯಲು ಆಗುವದಿಲ್ಲ. ನಿಮ್ಮ ಬಲಗಡೆಯಲ್ಲಿ ಮತ್ತು ಎಡಗಡೆಯಲ್ಲಿರುವ ಇರುವ ವ್ಯಕ್ತಿಯನ್ನು ನೋಡಿರಿ. ನೀವು ನೋಡುವ ಪ್ರತಿಯೊಬ್ಬ ವ್ಯಕ್ತು ಸಹ ಇಡೀ ಲೋಕಕ್ಕಿಂತ ಹೆಚ್ಚಿನವನಾಗಿದ್ದಾನೆ. ಇಂದಿನ ಸತ್ಯವೇದ ಕಥೆಯಲ್ಲಿ, ದೇವರ ಜನರ ಹೃದಯಗಳನ್ನು ಬದಲಾಯಿಸಿದನು. ಅವರು ಕಷ್ಟದಲ್ಲಿದ್ದಾಗ, ತಾವೇ ಒಮ್ಮೆ ಓಡಿಸಿಬಿಟ್ಟಿದ್ದ ಯಫ್ತಾಹನ ಬಳಿಗೆ ಹೋದರು ಮತ್ತು ತಮಗೆ ಸಹಾಯ ಮಾಡಬೇಕೆಂದು ಬೇಡಿಕೊಂಡರು. ಅವನು ಜನರನ್ನು ವಿಜಯದ ಕಡೆಗೆ ನಡೆಸಿದನು ಮತ್ತು 6 ವರ್ಷಗಳ ಕಾಲ ಇಸ್ರಾಯೇಲ್ಯರ ನಾಯಕನಾಗಿದ್ದನು.

ದೇವರ ಅಭಿಪ್ರಾಯವೇ ಪ್ರಾಮುಖ್ಯ ಎಂಬದು ನನಗೆ ಗೊತ್ತಿದೆ. ದೇವರು ನನಗೆ ಆದ್ಯತೆ ಕೊಡುತ್ತಾನೆ ಎಂಬದು ನನಗೆ ಗೊತ್ತಿದೆ.

## ವಿಶ್ಲೇಷಣ ೪



ಮಾರ್ಥಳು ಶಾಲೆಗೆ ಹೋದಾಗ, ಆಕೆಗೆ ದೊಡ್ಡ ಆಶ್ಚರ್ಯ ಎದುರಾಯಿತು. ಆಕೆ ಹಿಂದಿರುಗಿ ಬಂದದ್ದಕ್ಕೆ ಉಳಿದ ಮಕ್ಕಳು ಸಂತೋಷಿಸಿದರು! “ನಾವು ನಿನ್ನನ್ನು ತುಂಬಾ ಮಿಸ್ ಮಾಡಿಕೊಂಡೆವು,

ನೀನಿಲ್ಲದೆ ಹೋದರೆ ನಮಗೆ ಯಾವ ಸಂತೋಷವೂ ಇರುವದಿಲ್ಲ. ನೀನು ಎಲ್ಲಾ ಸಮಯಗಳಲ್ಲಿಯೂ ನಮಗೆ ಪ್ರೋತ್ಸಾಹ ಕೊಡುವವಳು” ಎಂದು ಅವರು ಹೇಳಿದರು. ಇದಾದ ನಂತರ ಆಕೆ ಉತ್ತಮವಾಗಿ ಆಡುತ್ತಿರಲಿಲ್ಲವಾದರೂ, ಆಯ್ಕೆಯಾಗುವದರಲ್ಲಿ ಆಕೆ ಕಡೆಯವಳಾಗಿರಲಿಲ್ಲ.

## ಚಟುವಟಿಕೆ ೪



ನಿಮ್ಮ ಕೈ ಚಿತ್ರವನ್ನು ಬಿಡಿಸಿರಿ

ಮಕ್ಕಳಿಗೆ ಅವರ ಕೈ ಚಿತ್ರವನ್ನು ಎ-4 ಅಳತೆಯ ಹಾಳೆಯಲ್ಲಿ ಅಥವಾ ತಮ್ಮ ನೋಟ್ ಪುಸ್ತಕದಲ್ಲಿ ಬರೆಯುವಂತೆ ಹೇಳಿರಿ. ಪ್ರತಿಯೊಂದು ಬೆರಳಿನ ಮೇಲೆ ಅವರು ದೇವರು ಅವರಿಗೆ ಕೊಡಬೇಕೆಂದು ಬಯಸುವಂಥವುಗಳನ್ನು ಅಂದರೆ ಉಡುಗೊರೆಯನ್ನು ಅಥವಾ ಬೇರೆಯವರ ಪ್ರಾರ್ಥನೆ ಮನವಿಗಳನ್ನು ಬರೆಯುವಂತೆ ಹೇಳಿರಿ.

## ಟೈಮ್ ಲೈನ್ ೪


ಯಫ್ತಾಹನು ಯಾವ ಇಸವಿಯಲ್ಲಿ ಜನಿಸಿದನು? ನಮಗೆ ನಿಖರವಾಗಿ ಗೊತ್ತಿಲ್ಲ, ಆದರೆ ಕ್ರಿ.ಪೂ 1118 ರಲ್ಲಿ ಜನಿಸಿದನು ಎಂದು ನಮಗೆ ಕಲಿಸಲಾಗಿದೆ.

ಯಫ್ತಾಹನು ಯಾವಾಗ ಮೃತಪಟ್ಟನು? ನಮಗೆ ನಿಖರವಾಗಿ ಗೊತ್ತಿಲ್ಲ, ಆದರೆ ಕ್ರಿ.ಪೂ 1094 ರಲ್ಲಿ ಮೃತಪಟ್ಟನು ಎಂದು ನಮಗೆ ಕಲಿಸಲಾಗಿದೆ.

## ಒಗಟಿನ ಉತ್ತರಗಳು ೪

**ಆದ್ಯತೆಯ ಚಟುವಟಿಕೆಯಲ್ಲಿ, ಇಡೀ ಲೋಕಕ್ಕಿಂತ ಪ್ರತಿಯೊಬ್ಬ ವ್ಯಕ್ತಿಯ ಆತ್ಮ ಪ್ರಾಮುಖ್ಯವಾದದ್ದು ಎಂಬದಾಗಿ ದೇವರು ಯೋಚಿಸುತ್ತಾನೆ ಎಂಬದನ್ನು ಮರೆಯಬೇಡಿರಿ (ಮತ್ತಾಯ 16:26), ಮತ್ತು ಜನರ ನಡುವೆ ಆತನು ಯಾವ ವ್ಯತ್ಯಾಸವನ್ನೂ ಮಾಡುವದಿಲ್ಲ (ಮತ್ತಾಯ 22:16, ಗಲಾತ್ಯ 3:28). ಉತ್ತರ 10 ಅಥವಾ ಪ್ರತಿಯೊಬ್ಬ ವ್ಯಕ್ತಿಗೆ ಗರಿಷ್ಠ ಆದ್ಯತೆ.**

| | | | | | | | | | | |
|---|---|---|---|---|---|---|---|---|---|---|
| ಸ | ತಿ | ಪ್ರೀ | ದ | ಗ್ರ | ವೇ | ತಿ | ಸ್ಥಾ | ನ | ತ್ಯ | ಯ |
| ವೇ | ಸ್ಯ | ತ್ಯ | ಜ | ಜ | ಷ್ಟಿ | ವಿ | ಗ | ಸ | ಷ್ಟಿ | ಸ್ಯ |
| ನಿ | ಗ್ರ | ನ | ಹಾ | ಯ | ಫ್ತಾ | ಹ | ನು | ಕ್ಷ | ಳು | ಳು |
| ಸ್ಯ | ಕ್ಷ | ಯ | ತ್ಯ | ಳು | ಷ್ಟಿ | ಸ್ಯ | ಗ | ವೇ | ಗ | ನಿ |
| ವಿ | ಹಾ | ಲ್ಯ | ಫಿ | ವೇ | ಹ | ಸ | ಪ್ರ | ಲ್ಯ | ಹ | ದ |
| ಪ್ರ | ಷ್ಟಿ | ಪ | ತ್ಯ | ಜ | ದ | ನಿ | ಮೌ | ರು | ಗ್ರ | ತಿ |
| ಸ | ತಿ | ನಿ | ಅ | ತಿ | ನಿ | ಫಿ | ಯ | ಗ್ರ | ವಿ | ಪ್ರ |
| ರ | ಯ | ದ | ಮ್ಯೋ | ನ | ಲಿ | ಜ | ದ | ಜ | ಹ | ತ್ಯ |
| ದೇ | ನಿ | ಷ್ಟಿ | ನಿ | ಷ್ಟಿ | ರು | ವೀ | ವೇ | ವೀ | ಷ್ಟಿ | ಕ್ಷ |
| ಸ್ಯ | ವ | ನ್ಯಾ | ಯ | ಸ್ಥಾ | ಪ | ಕ | ನು | ಪ್ರ | ರ | ವಿ |
| ಜ | ಹ | ಋ | ರು | ಕ್ಷ | ಲ್ಯ | ಸ | ತ್ಯ | ಫಿ | ಯ | ಗ್ರ |






## ಪ್ರಶ್ನೆಗಳು ಮತ್ತು ಉತ್ತರಗಳು ೪


**(ಹಿರಿಯ ವಿದ್ಯಾರ್ಥಿಗಳಿಗೆ)**

1. **ನಿಮ್ಮ ಶಾಲೆಯ ತರಗತಿಯಲ್ಲಿ ನೀವು ಯಾವ ವಿಷಯಗಳಲ್ಲಿ ತಾರತಮ್ಯ ನಡೆಯುವದನ್ನು ನೋಡಿದ್ದೀರಿ? (ವಿದ್ಯಾರ್ಥಿಗಳು ನೋಡಿರು ವಿವಿಧ ಘಟನೆಗಳ ಬಗ್ಗೆ ಚರ್ಚಿಸುವಂತೆ ಪ್ರೋತ್ಸಾಹಪಡಿಸಿರಿ ಮತ್ತು ತಾರತಮ್ಯ ಮಾಡುವದರಿಂದ ಅದಕ್ಕೆ ಒಳಗಾಗುವ ಜನರಿಗೆ ಎಷ್ಟು ನೋವಾಗುತ್ತದೆ ಎಂಬದರ ಬಗ್ಗೆ ಮಾತನಾಡಿರಿ.)**
2. **ನಾನು ತಾರತಮ್ಯವನ್ನು ನೋಡುವಾಗ, ಅದರಲ್ಲಿ ಯಾಕೆ ಭಾಗಿಯಾಗಬೇಕು? (ಇತರರಿಗೆ ನಿಮ್ಮ ಸಹಾಯದ ಅವಶ್ಯಕತೆಯಿರುವಾಗ ಏನೂ ಹೇಳದಿರುವದು ಮತ್ತು ಮಾಡದಿರುವದು ಅತ್ಯಂತ ಘೋರವಾದ ಸಂಗತಿಯಾಗಿದೆ ಎಂಬದರ ಬಗ್ಗೆ ಚರ್ಚಿಸಿರಿ.)**
3. **ಅವರು ನನ್ನನ್ನು ಒಂಟಿಯಾಗಿ ಯಾಕೆ ಬಿಡುವದಿಲ್ಲ? (ಮಾನವರು ಸಾಮಾಜಿಕ ಜೀವಿಗಳಾಗಿದ್ದಾರೆ ಮತ್ತು ನಾವು ಕೂಡಲೇ ತಾರತಮ್ಯದ ತಪ್ಪುಗಳಿಗೆ ಒಳಗಾಗುತ್ತೇವೆ, ಇತರರಿಗಿಂತ ಹೆಚ್ಚು ಪ್ರಸಿದ್ಧರಾಗಬೇಕೆಂಬ ಬಯಕೆ ಉಂಟಾಗುತ್ತದೆ ಮತ್ತು ನಾವು ಪಾಪದ ಕಾರ್ಯಗಳಿಗೆ ಒಳಗಾಗುತ್ತೇವೆ. ಜನರು ನಮ್ಮನ್ನು ಸಮಾಧಾನವಾಗಿರಲು ಬಿಡುವದಿಲ್ಲ. ನಾವು ನಮ್ಮನ್ನು ಮತ್ತು ಇತರರನ್ನು**

ಕಾಪಾಡಿಕೊಳ್ಳುವದನ್ನು ಕಲಿತುಕೊಳ್ಳಬೇಕು. ಕರ್ತನಲ್ಲಿ ನಾವು ಯಾರಾಗಿದ್ದೇವೆ ಎಂಬದನ್ನು ತಿಳಿಯುವದರಲ್ಲಿ ದೃಢವಾಗಿರಬೇಕು ಹಾಗು ಇತರರು ಏನು ಹೇಳುತ್ತಾರೆ ಎಂಬದರ ಬಗ್ಗೆ ಚಿಂತಿಸಬಾರದು.)

## ಆಟ ೪

ಒಬ್ಬರಿಗೊಬ್ಬರು ಆದ್ಯತೆ ಕೊಡಬೇಕು



ಮಕ್ಕಳು ವೃತ್ತವಾಗಿ ನಿಂತು ಒಬ್ಬರ ಕೈಗಳನ್ನೊಬ್ಬರು ಹಿಡಿದುಕೊಳ್ಳಬೇಕು. ನೀವು ಹುಡುಗರನ್ನು ಮತ್ತು ಹುಡುಗಿಯರನ್ನು ಬೇರ್ಪಡಿಸಬೇಕು ಹಾಗೂ ಸರದಿಯ ಪ್ರಕಾರ ಅವರನ್ನು ಆಡಿಸಬೇಕು. ಮಗು ವೃತ್ತದ

ಹೊರಗಿರಬೇಕು ಮತ್ತು ಸುತ್ತಲೂ ಓಡಬೇಕು. ಅವನು ವೃತ್ತದೊಳಗಿಂದ ಒಂದು ಮಗುವನ್ನು ಆರಿಸಿಕೊಳ್ಳಬೇಕು ಮತ್ತು ಅವನ ಹಿಂಭಾಗವನ್ನು ಮುಟ್ಟಿ ತನ್ನ ಸ್ಥಾನವನ್ನು ಕಳೆದುಕೊಳ್ಳದಂತೆ ವಿರುದ್ಧ ದಿಕ್ಕಿನಲ್ಲಿ ಓಡಬೇಕು. ಯಾರು ಮೊದಲು ಬರುತ್ತಾರೋ ಅವರು ಸ್ಥಾನವನ್ನು ಗೆಲ್ಲುತ್ತಾರೆ. ಸೋತವನಿಗೆ ಗೆದ್ದವನು ಗಟ್ಟಿಯಾದ ಸ್ವರದಲ್ಲಿ ಅವನ ಒಳ್ಳೆಯ ಸ್ವಭಾವವನ್ನು ಪ್ರಶಂಸಿಸಬೇಕು, ಉದಾಹರಣೆಗೆ: ಪೇತ್ರನು ಬಹಳ ಬುದ್ಧಿವಂತನು.

## ಹಾಜರಾತಿ ೪




ತರಗತಿಗೆ ಬಂದ ಮಕ್ಕಳಿಗೆ ಅಂದಿನ ಕಾರ್ಡ್ ಕೊಡಿರಿ. ವೀರರ ಆಟ ಆಡಲು ಮತ್ತೊಂದು ಕಾರ್ಡ್ ಪಡೆಯಬೇಕೆಂದರೆ ಮುಂದಿನ ವಾರ ತರಗತಿಗೆ ಬರುವಂತೆ ಅವರನ್ನು ಪ್ರೋತ್ಸಾಹಪಡಿಸಿರಿ ಮತ್ತು ಈ ವಾರ ಕಾರ್ಡ್ ಪಡೆದದ್ದಕ್ಕಾಗಿ ಅಭಿನಂದಿಸಿರಿ! ಇಂದಿನ ಕಾರ್ಡ್ ಯಾವುದೆಂದರೆ:
ಪದ್ಯ ಪುಸ್ತಕಗಳು

## ಹೋಮ್ ವರ್ಕ್ ೪

ಈ ವಾರದ ಹೋಮ್ ವರ್ಕ್ ನಮ್ಮನ್ನು ನಾವೇ ಪರೀಕ್ಷಿಸಿಕೊಳ್ಳುವದಾಗಿದೆ: ನಿಮ್ಮನ್ನು ನೀವು ಯಾವ ರೀತಿ ಆಲೋಚಿಸಿಕೊಳ್ಳುವವರಾಗಿದ್ದೀರಿ? ನಿಮ್ಮನ್ನು ನೀವು ಇತರರೊಂದಿಗೆ ಹೋಲಿಸಿಕೊಳ್ಳದಂತೆ ಎಚ್ಚರವಾಗಿರ್ರಿ. ಒಂದುವೇಳೆ ನಿಮಗೆ ನಿಮ್ಮ ವಿಷಯದಲ್ಲಿ ಕನಿಷ್ಠ ಭಾವನೆ ಇರುವದಾದರೆ, ನೀವು ಇರುವ ಹಾಗೆ ನಿಮ್ಮನ್ನು ಉಂಟುಮಾಡಿದವನು ದೇವರು ಮತ್ತು ಆತನು ನಿಮಗೆ ಆದ್ಯತೆಯನ್ನು ಕೊಡುತ್ತಾನೆ ಹಾಗೂ ನಿಮ್ಮನ್ನು ಪ್ರೀತಿಸುತ್ತಾನೆ ಎಂಬದನ್ನು ನೆನಪಿಸಿಕೊಳ್ಳಿರಿ. ಒಂದುವೇಳೆ ನಿಮಗೆ ಹೆಮ್ಮೆಯಾದರೆ, ನಿಮ್ಮ ಭರವಸೆ ಯೇಸು ಕ್ರಿಸ್ತನಲ್ಲಿದೆಯೇ ಹೊರತು ನಿಮ್ಮಲ್ಲಿಲ್ಲ ಎಂಬದನ್ನು ನೆನಪಿಸಿಕೊಳ್ಳಿರಿ. ಈ ವಾರದ ಪ್ರತಿದಿನ ಗಟ್ಟಿಯಾಗಿ, "ನಾನು ಯೇಸು ಕ್ರಿಸ್ತನಿಗೆ ಸೇರಿದವನು, ಆತನು ನನಗೆ ಆದ್ಯತೆ ಕೊಡುತ್ತಾನೆ ಮತ್ತು ನನ್ನನ್ನು ಪ್ರೀತಿಸುತ್ತಾನೆ" ಎಂದು ಹೇಳಿರಿ.

ಓದಿರಿ

ದಿನ 1: ನ್ಯಾಯಸ್ಥಾಪಕರು 13:1-5

ದಿನ 2: ನ್ಯಾಯಸ್ಥಾಪಕರು 15:9-16

ದಿನ 3: ನ್ಯಾಯಸ್ಥಾಪಕರು 16:4-10

ದಿನ 4: ನ್ಯಾಯಸ್ಥಾಪಕರು 16:15-22

ದಿನ 5: ನ್ಯಾಯಸ್ಥಾಪಕರು 16:23-30

# ೫. ಮಾಹಿತಿಗಳು



**ಸತ್ಯವೇದ ಕಥೆ: ಸಂಸೋನನು**

**ನ್ಯಾಯಸ್ಥಾಪಕರು 13:1-25, 14:5-6, 15:9-20, 16:2-31**

## ಕಂಠಪಾಠ ವಚನ ೫

"ಆದಕಾರಣ, ನಾವು ಸಮಯೋಚಿತ ಸಹಾಯವನ್ನು ಅವರ ಅನುಗ್ರಹದಿಂದ ಪಡೆಯಲು ಮತ್ತು ಅವರ ಕರುಣೆಯನ್ನು ಸವಿಯಲು ಧೈರ್ಯದಿಂದ ಅವರ ಕೃಪಾಸನವನ್ನು ಸಮೀಪಿಸೋಣ." ಹಿಬ್ರಿಯರಿಗೆ 4:16

## ಕಥೆಯ ಅವಶ್ಯಕತೆ ೫



ಇಂದು ಬೆಳಗ್ಗೆ ಮಾರ್ಥಳ ತಂದೆತಾಯಿಗಳು ಕೆಲಸಕ್ಕೆ ಹೋಗುವಾಗ, ಆಕೆಯೊಂದಿಗೆ ಮಾತನಾಡಿದರು ಮತ್ತು ಒಲೆ ಮೇಲೆ ಪಾತ್ರೆಯಲ್ಲಿರುವ ಆಹಾರವನ್ನು ಫ್ರಿಡ್ಜ್ ನಲ್ಲಿಡುವಂತೆ ಹೇಳಿದರು. "ನಾವು ನಿನಗೆ ಕೊಟ್ಟಿರುವ ಕೆಲಸ ಇದು ಮಾತ್ರವೇ, ತಪ್ಪದೆ ಮಾಡು ಮತ್ತು ಚೆನ್ನಾಗಿ ನಡೆದುಕೋ." "ಪರವಾಗಿಲ್ಲ ನನಗೆ ಬೇರೆ ಯಾವುದೇ ಕಲಸ ಇಲ್ಲ. ಆದರೂ ನಾನು ನನಗೆ ಬೇಕಾದ್ದನ್ನು ಮಾಡಬಹುದು" ಎಂಬದಾಗಿ ಮಾರ್ಥಳು ಅಂದುಕೊಂಡಳು. ಮೊದಲು ದಿನಪತ್ರಿಕೆಯನ್ನು ಓದೋಣ ನಂತರ ಅಪ್ಪಾಅಮ್ಮ ಹೇಳಿರುವ ಕೆಲಸ ಮಾಡೋಣ ಎಂಬದಾಗಿ ಮಾರ್ಥಳು ಯೋಚಿಸಿದಳು, ಆದರೆ ಓದುತ್ತಾ ಮಾಡಬೇಕಾದ ಕೆಲಸ ಮರೆತುಹೋದಳು.

## ಮುಖ್ಯ ಪಾಠ ೫

ಮತ್ತೊಮ್ಮೆ ಸ್ವಾಗತ! ಇಂದು ನಾವು ಅತ್ಯಂತ ಅಸಾಮಾನ್ಯನಾದ ವೀರನ ಬಗ್ಗೆ ಕಲಿತುಕೊಳ್ಳೋಣ. ಒಂದುದಿನ ಮಕ್ಕಳಿಲ್ಲದೆ ಇದ್ದ ದಂಪತಿಗಳಿಬ್ಬರ ಬಳಿಗೆ ದೇವದೂತನೊಬ್ಬನು ಬಂದನು ಮತ್ತು ನಿಮಗೆ ಒಬ್ಬ ಮಗ ಹುಟ್ಟುವನು ಎಂದು ಹೇಳಿದನು. ಅವನು ನಾಜೀರನಾಗಿರುವನು, ವಿಶೇಷವಾದ ವಾಗ್ದಾನವುಳ್ಳವನಾಗಿ ದೇವರಿಗೆ ಪ್ರತಿಷ್ಠಿತನಾಗಿರುವನು. ಅವನು ಮದ್ಯವನ್ನಾಗಲಿ, ಮೃತ ದೇಹವನ್ನಾಗಲಿ ಮುಟ್ಟಬಾರದು, ತನ್ನ ಜೀವನ ಪರ್ಯಂತರ ತಲೆಯ ಮೇಲೆ ಕ್ಷೌರ ಕತ್ತಿಯನ್ನು ಬರಗೊಡಿಸಬಾರದು. ನಾಜೀರ ವಾಗ್ದಾನವು ದೇವರೊಂದಿಗಿನ ನಮ್ಮ ಜೀವಿತದ ಚಿತ್ರಣವಾಗಿದೆಯೇ ಹೊರತು, ನಾವು ಇಂದು ಮಾಡುವ ಕಾರ್ಯಗಳು ಮಾತ್ರವಲ್ಲ ಯಾಕಂದರೆ ಯೇಸು ಕ್ರಿಸ್ತನು ಧರ್ಮಶಾಸ್ತ್ರವನ್ನು ನೆರವೇರಿಸಿದ್ದಾನೆ. ಆದರೆ ದೇವರು ಬದಲಾಗಿಲ್ಲ, ಆತನು ಈಗಲೂ ಪ್ರತಿಯೊಂದು ಮಾಹಿತಿಗಳಿಗೆ ಗಮನ ಕೊಡುತ್ತಾನೆ. ಸಂಸೋನನು ಪ್ರಮಾಣವನ್ನು ಕಾಪಾಡಿಕೊಂಡಿದ್ದಷ್ಟೂ ದಿನ, ದೇವರು ಅವನಿಗೆ ಅಸಾಧಾರಣವಾದ ಶಕ್ತಿಯನ್ನು ಕೊಟ್ಟನು. ಒಂದುದಿನ ಸಿಂಹವೊಂದು ಅವನ ಮೇಲೆ ದಾಳಿ ಮಾಡಿತು, ಅವನು ಬರೀಗೈಯಲ್ಲಿ ಸಿಂಹವನ್ನು ಸೀಳಿ ಬಿಟ್ಟನು! ಇನ್ನೊಂದು ಸಲ, ಇಸ್ರಾಯೇಲ್ಯರು ಅವನನ್ನು ಫಿಲಿಷ್ಟಿಯರ ಕೈಗಳಿಗೆ ಒಪ್ಪಿಸಿದರು. ಸಂಸೋನನು ತನ್ನ ಕೈಗಳಿಗೆ ಕಟ್ಟಿದ್ದ ಹೊಸ ದಾರಗಳನ್ನು ಕಡಿದುಹಾಕಿದನು, ದವಡೆಹಲ್ಲನ್ನು ಹಿಡಿದುಕೊಂಡು ತಾನೊಬ್ಬನೇ 1000 ಮಂದಿ ಫಿಲಿಷ್ಟಿಯರನ್ನು ಕೊಂದುಬಿಟ್ಟನು. ಇನ್ನೊಮ್ಮೆ

ಫಿಲಿಷ್ಟಿಯರು ಪಟ್ಟಣಕ್ಕೆ ಮುತ್ತಿಗೆ ಹಾಕಿದರು. ಸಂಸೋನನು ಪಟ್ಟಣದ ದ್ವಾರಗಳನ್ನು ಗೋಡೆಯಿಂದ ಕಿತ್ತು ಬೆಟ್ಟದ ಮೇಲೆ ಹೊತ್ತುಕೊಂಡು ಹೋದನು. ಸಂಸೋನನ ಬಲವನ್ನು ಜಯಿಸಲು ಎಷ್ಟು ಪ್ರಯತ್ನಿಸಿದರೂ ಫಿಲಿಷ್ಟಿಯರಿಗ ಸಾಧ್ಯವಾಗಲೇ ಇಲ್ಲ. ಇದೇ ಪ್ರಕಾರ ನಮ್ಮೊಳಗೆ ದೇವರ ಶಕ್ತಿ ಇದೆ ಮತ್ತು ನಮ್ಮ ವೈರಿಯಾಗಿರುವ ಸೈತಾನನು ನಮ್ಮನ್ನು ಜಯಿಸಲಾರನು. ನಂತರದಲ್ಲಿ ಸಂಸೋನನು ಫಿಲಿಷ್ಟಿಯ ಸ್ತ್ರೀಯಾದ ದೆಲೀಲ

ಎಂಬ ಸ್ತ್ರೀಯ ಪ್ರೀತಿಯ ಬಲೆಗೆ ಬಿದ್ದನು. ಅವನು ತನ್ನ ಶಕ್ತಿಯ ರಹಸ್ಯವನ್ನು ಹೇಳುವಂತೆ ಅವಳು ಅವನನ್ನು ಬಹಳವಾಗಿ ಪೀಡಿಸಿದಳು, ಕಡೆಯಲ್ಲಿ ಅವನು ತನ್ನ ತಲೆಯ ಕೂದಲ ಬಗ್ಗೆ ತಿಳಿಸಿದಳು. ಅವಳು ಅವನ ತಲೆಯ ಕೂದಲನ್ನು ಕತ್ತರಿಸಿದಾಗ, ಅವನು ನಿರ್ಬಲನಾದನು! ಫಿಲಿಷ್ಟಿಯರು ಅವನನ್ನು ಹಿಡಿದು, ಕಣ್ಣುಗಳನ್ನು ಕಿತ್ತಿದರು ಮತ್ತು ಸೆರೆಮನೆಗೆ ಹಾಕಿದರು. ದೇವರು ಸಣ್ಣ ಮಾಹಿತಿಗಳಿಗೂ ಗಮನ ಕೊಡುತ್ತಾನೆ. ನಮ್ಮ ಜೀವಿತಗಳಲ್ಲಿ ನಾವು ಸಭೆಗೆ ಹೋಗುತ್ತೇವೆ ಆದರೆ ಗಮನ ಕೊಡದವರಾಗಿರುತ್ತೇವೆ. ಇಂದಿನ ಕಥೆಯಲ್ಲಿ ಮಾರ್ಥಳು ಮಾಡಿದ ಹಾಗೆ ಅದು ಅವಿಧೇಯತೆಯಾಗಿದೆ ಅಥವಾ ತಂದೆತಾಯಿಗಳಿಗೆ ವಿರುದ್ಧವಾಗಿ ತಿರುಗಿಬೀಳುವದಾಗಿದೆ. ಯಾರ ಮೇಲಾದರೂ ಹಠ ಸಾಧಿಸುವದಾಗಿರುತ್ತದೆ. ಅದು ಏನೇ ಆಗಿರಲಿ, ದೇವರಿಂದ ನೀವು ಏನನ್ನೂ ಮರೆಮಾಡಲು ಆಗುವದಿಲ್ಲ. ಅದೇನೆಂದು ನಿಮಗೆ ಗೊತ್ತಾಗುವಾಗ, ಅದರ ವಿಷಯದಲ್ಲಿ ಪಶ್ಚಾತ್ತಾಪಪಡಿರಿ ಆಗ ದೇವರು ನಿಮಗೆ ನಿಮ್ಮ ಶಕ್ತಿಯನ್ನು ಹಿಂದಿರುಗಿಸುತ್ತಾನೆ. ಕೆಲವು ದಿವಸಗಳಾದ ನಂತರ ಸಂಸೋನನ ತಲೆ ಕೂದಲು ಬೆಳೆಯಲಾರಂಭಿಸಿತು. ದೊಡ್ಡ ಹಬ್ಬದ ದಿನದಂದು ಫಿಲಿಷ್ಟರು ಸಂಸೋನನನ್ನು ಗೇಲಿ ಮಾಡಲು ಜನರ ಮುಂದೆ ಕರೆದುಕೊಂಡು ಬಂದರು. ಕಡೆಯ ಸಲ ತನಗೆ ಶಕ್ತಿ ಕೊಡುವಂತೆ ಅವನು ದೇವರನ್ನು ಬೇಡಿಕೊಂಡನು, ದೇವಾಲಯದ ಎರಡೂ ಕಂಬಗಳನ್ನು ಗಟ್ಟಿಯಾಗಿ ಎಳೆದನು ಮತ್ತು ಇಡೀ ಕಟ್ಟಡ ನೆಲಸಮವಾಯಿತು. ಅವನು ಬದುಕಿದ್ದಾಗ ಸಾಯಿಸಿದ ಫಿಲಿಷ್ಟಿಯರಿಗಿಂತ ಸಾಯುವಾಗ ಹೆಚ್ಚು ಫಿಲಿಷ್ಟಿಯರನ್ನು ಸಾಯಿಸಿದನು. ಇದೇ ಪ್ರಕಾರ ಯೇಸು ಕ್ರಿಸ್ತನು ದೇವರ ಶಕ್ತಿಯುಳ್ಳ ಈ ಲೋಕದಲ್ಲಿ ಜೀವಿಸಿದನು-ಆತನನ್ನು ತಡೆಯಲು ಯಾರಿಂದಲೂ ಆಗಲಿಲ್ಲ. ಸಂಸೋನನು ಅನೇಕ ತಪ್ಪುಗಳನ್ನು ಮಾಡಿದನಾದರೂ, ಯೇಸು ಕ್ರಿಸ್ತನು ಒಮ್ಮೆಯಾದರೂ ಪಾಪ ಮಾಡಲಿಲ್ಲ. ಸಂಸೋನನ ಹಾಗೆ, ಯೇಸು ಕ್ರಿಸ್ತನು ಶಿಲುಬೆಯ ಮೇಲೆ ಪ್ರಾಣ ಕೊಟ್ಟು ಮೂರನೆಯ ದಿನದಲ್ಲಿ ಎದ್ದು ಬರುವ ಮೂಲಕ ಪಾಪ ಹಾಗೂ ಸೈತಾನನಿಗೆ ದೊಡ್ಡ ಹೊಡೆತ ನೀಡಿದನು ಮತ್ತು ಜಯಿಸಿದನು. ಸಂಸೋನನ ಯಾವುದೇ ರೀತಿಯ ತಪ್ಪುಗಳನ್ನು ಮಾಡಿದರು, ಯೇಸು ಕ್ರಿಸ್ತನ ನಿಮಿತ್ತ ನಮಗೆ ಕೃಪೆ ದೊರೆಯುತ್ತದೆ. ಯೇಸು ಕ್ರಿಸ್ತನು ನಮ್ಮ ಜೊತೆಯಲ್ಲಿದ್ದಾನೆ ಮತ್ತು ನಾವು ಆತನಿಗಾಗಿ ಹೇಗೆ ಜೀವಿಸಬೇಕೆಂದು ಕಲಿಸುತ್ತಾನೆ ಮತ್ತು ಸಹಜವಾಗಿ ಆತನನ್ನು ಹಿಂಬಾಲಿಸುವದೆಂದರ ಮಾಹಿತಿಗಳಿಗೆ ಗಮನ ಕೊಡುವದಾಗಿದೆ.

ನಾನು ದೇವರನ್ನು ಎಲ್ಲಾ ಮಾಹಿತಿಗಳಿಗನುಸಾರ ಅನುಸರಿಸುತ್ತೇನೆ.




## ವಿಶ್ಲೇಷಣ ೫

ಆಕೆಯ ತಂದೆತಾಯಿಗಳು ಮನೆಗೆ ಬಂದಾಗ, ಜೊತೆಯಲ್ಲಿ ಅತಿಥಿಗಳನ್ನು ಊಟಕ್ಕೆ ಕರೆದುಕೊಂಡು ಬಂದರು. ಸಿದ್ಧಮಾಡಲಾಗಿದ್ದ ಆಹಾರ ಕೆಟ್ಟುಹೋಗಿದ್ದು, ಅವರಿಗೆ ಬಹಳ ಆಶ್ಚರ್ಯವಾಯಿತು.

## ಚಟುವಟಿಕೆ ೫

**ಹೊಸ ಅವಕಾಶ**

ಒಂದು ಹಾಳೆಯ ನಡುವೆ ಗೆರೆ ಹಾಕುವ ಮೂಲಕ ಎರಡು ಭಾಗಗಳಾಗಿ ವಿಂಗಡಿಸಿರಿ. ಮೊದಲನೆಯ ಭಾಗದಲ್ಲಿ ಕಾರ್ಯಗಳು ತಪ್ಪಾಗಿರುವ ಸಂದರ್ಭಗಳಲ್ಲಿ ಬರೆಯಿರಿ. ಮತ್ತೊಂದರಲ್ಲಿ ದೇವರು ಹೇಗೆ ಎರಡನೆಯ ಅವಕಾಶವನ್ನು ಕೊಡುತ್ತಾನೆ ಮತ್ತು ನೀವು ಕಾರ್ಯಗಳನ್ನು ಹೇಗೆ ಬದಲಾಯಿಸಬಹುದು ಎಂಬದರ ಕುರಿತು ಒಂದೆರೆಡು ಆಲೋಚನೆಗಳನ್ನು ಬರೆಯಿರಿ.



## ಟೈಮ್ ಲೈನ್ ೫

ಸಂಸೋನನು ಯಾವ ಇಸವಿಯಲ್ಲಿ ಜನಿಸಿದನು? ನಮಗೆ ನಿಖರವಾಗಿ ಗೊತ್ತಿಲ್ಲ ಆದರೆ ಕ್ರಿ.ಪೂ **1119** ರಲ್ಲಿ ಹುಟ್ಟಿದನು ಎಂದು ನಮಗೆ ಕಲಿಸಲಾಗಿದೆ.

ಸಂಸೋನನು ಯಾವಾಗ ಮೃತಪಟ್ಟನು? ನಮಗೆ ನಿಖರವಾಗಿ ಗೊತ್ತಿಲ್ಲ ಆದರೆ ಕ್ರಿ.ಪೂ **1079** ರಲ್ಲಿ ಮೃತಪಟ್ಟನು ಎಂದು ನಮಗೆ ಕಲಿಸಲಾಗಿದೆ.

## ಒಗಟಿನ ಉತ್ತರಗಳು ೫

| | | | | | | | | | |
|---|---|---|---|---|---|---|---|---|---|
| ಚ | ಡೆ | ತ | ಮ | ಗ | ನು | ನು | ದ | ಹ | ನೆ |
| ಫಿ | ಜೀ | ವಾ | ಮ | ಡೆ | ಳು | ಲ | ಲೀ | ದ | ಚ |
| ಲಿ | ಫಿ | ದೂ | ಗ್ದಾ | ಳು | ಮ | ಡೆ | ಜೀ | ವ | ವಂ |
| ಷ್ಟಿ | ಹ | ಕ್ತಿ | ಳು | ನ | ದ | ದೇ | ಯ | ಡೆ | ದೂ |
| ಯ | ಸಂ | ಲೀ | ಶ | ಕ್ತಿ | ಫಿ | ಹ | ವ | ಮೂ | ಡೆ |
| ರು | ಮ | ನಾ | ಡೆ | ವ | ಸಂ | ಕೂ | ಸಿಂ | ಳೆ | ಗ |
| ನು | ತ | ದೇ | ಜೀ | ನ | ಸೋ | ದೂ | ನ | ಗ್ದಾ | ತ |
| ದ | ಗ | ಜೀ | ಕೂ | ರ | ನ | ಶ | ಚ | ಹ | ದ್ವಾ |
| ಲು | ದೇ | ವ | ದೂ | ತ | ನು | ಡೆ | ಸಂ | ರ | ಜೀ |
| ಳು | ದ | ಫಿ | ನ | ಜೀ | ಲೀ | ಳು | ಗ | ಗ್ಗ | ಹ |
| ಡೆ | ಯ | ಕೂ | ಗ್ದಾ | ಚ | ಗ | ಳು | ಶ | ಳು | ನು |

### ಸರಿ ಅಥವಾ ತಪ್ಪು

ಉತ್ತರ ಸರಿಯಾಗಿದ್ದರೆ ಸರಿ ಎಂಬದಾಗಿ ಬರೆಯಿರಿ, ತಪ್ಪಾಗಿದ್ದರೆ ತಪ್ಪು ಎಂಬದಾಗಿ ಬರೆಯಿರಿ.

1. ಸಂಸೋನನ ಶಕ್ತಿ ಅವನ ಹೃದಯದೊಳಗೆ ನೆಲೆಯಾಗಿತ್ತು.
2. ದೆಲೀಲಳು ಸಂಸೋನನಿಗೆ ಮೋಸ ಮಾಡಿ, ಫಿಲಿಷ್ಟಿಯರಿಗೆ ಹಿಡಿದು ಕೊಟ್ಟಳು.
3. ದೇವಾಲಯ ಬೀಳುವದರೊಂದಿಗೆ ಅನೇಕ ಫಿಲಿಷ್ಟಿಯರು ಸತ್ತರು ಆದರೆ ಸಂಸೋನನು ಉಳಿದುಕೊಂಡನು.
4. ತಲೆ ಕೂದಲು ಇಲ್ಲದೆಯೂ ಸಂಸೋನನು ಶಕ್ತಿವಂತನಾಗಿದ್ದನು.
5. ಸಂಸೋನನು ಕತ್ತೆಯ ದವಡೆ ಮೂಳೆಯಿಂದ ಸಾವಿರ ಜನರನ್ನು ಕೊಂದನು.



## ಪ್ರಶ್ನೆಗಳು ಮತ್ತು ಉತ್ತರಗಳು ೫

**(ಹಿರಿಯ ವಿದ್ಯಾರ್ಥಿಗಳಿಗೆ)**

1. **ನಾನು ಕಾರ್ಯಗಳನ್ನು ನನ್ನ ಮನಸ್ಸಿಗೆ ಬಂದ ಹಾಗೆ ಮಾಡಬಹುದೇ? (ಒಂದುವೇಳೆ ನಾವು ಯೇಸು ಕ್ರಿಸ್ತನನ್ನು ಘನಪಡಿಸಲು ಬಯಸುವದಾದರೆ, ಕಾರ್ಯಗಳನ್ನು ಆತನ ಚಿತ್ತದಂತೆ ಮಾಡಬೇಕು. ರಕ್ಷಣೆಯು ಉಚಿತ ವರವಾಗಿದೆಯಾದರೂ, ಕಡೆಯಲ್ಲಿ ನಾವು ನಮ್ಮನ್ನೇ ಸಂಪೂರ್ಣವಾಗಿ ಆತನಿಗೆ ಒಪ್ಪಿಸುತ್ತೇವೆ, ನಮ್ಮ ಜೀವಿತದ ಮಾಹಿತಿಗಳನ್ನೂ ಒಪ್ಪಿಸುತ್ತೇವೆ.)**
2. **ಒಳ್ಳೆಯವರು ಪರಲೋಕಕ್ಕೆ ಹೋಗುತ್ತಾರೆ, ಅಲ್ಲವೇ? (ಒಳ್ಳೆಯವರಾಗಿರುವದು ಅಥವಾ ಯೇಸು ಕ್ರಿಸ್ತನ ಒಳ್ಳೇತನ ನಮ್ಮ ಪಾಪಗಳಿಗೆ ಕ್ರಯ ಕೊಡುವಂತೆ ಮಾಡುವದರ ನಡುವೆಯಿರುವ ವ್ಯತ್ಯಾಸವನ್ನು ಚರ್ಚಿಸಿರಿ. ಯಾರೂ ಒಳ್ಳೆಯವರಲ್ಲ.)**

3. ನಾನು ಯಾಕೆ ದೇವರಲ್ಲಿ ಭರವಸೆಯನ್ನಿಡಬೇಕು? (ದೇವರೊಬ್ಬನೇ ಭರವಸೆಗೆ ಅರ್ಹನಾಗಿದ್ದಾನೆ. ನಮ್ಮ ತಂದೆಯಂದಿರು, ಸಭಾಪಾಲಕರು ಮತ್ತು ಶಿಕ್ಷಕರು ಆಗಾಗ ನಮ್ಮನ್ನು ಸೋಲಿಸುತ್ತಾರೆ. ನಮಗೆ ನೋವಾಗುತ್ತದೆ, ಆದರೆ ಕೊನೆಯಲ್ಲಿ, ನಾವು ದೇವರಲ್ಲಿ ಮಾತ್ರವೇ ಭರವಸೆಯನ್ನಿಡಬೇಕು.)

## ಆಟ ೫

ಗಮನ ಕೊಡುವದು

ಮಕ್ಕಳು ವೃತ್ತಾಕಾರದಲ್ಲಿ ಕುಳಿತುಕೊಳ್ಳಬೇಕು, ಮತ್ತು ಯಾರಾದರೂ ಒಬ್ಬರು ನಾಯಕನು ಯಾರು ಎಂಬದನ್ನು ಊಹೆ ಮಾಡಲು ಮಧ್ಯಕ್ಕೆ ಹೋಗಬೇಕು. ಮಧ್ಯದಲ್ಲಿರುವ ಮಗು ಯಾರೆಂಬದನ್ನು ಅರಿಯದೆ ನಾಯಕನನ್ನು ಆಯ್ಕೆ ಮಾಡಲಾಗುತ್ತದೆ. ಆರಿಸಲ್ಪಟ್ಟ ನಾಯಕನು ಮತ್ತೆಮತ್ತೆ ಕ್ರಿಯೆ ಮಾಡಲು ಪ್ರಾರಂಭಿಸಬೇಕು ಮತ್ತು ಉಳಿದ ಮಕ್ಕಳು ಅದರಂತೆಯೇ ಮಾಡಬೇಕು, ಆದರೆ ಮಧ್ಯದಲ್ಲಿರುವವರಿಗೆ ಅದನ್ನು ಪ್ರಾರಂಭಿಸಿದವರು ಯಾರು ಎಂಬದನ್ನು ಗಮನಿಸಲು ಆಗಬಾರದು. ಅವರು ಮಾಡುವ ಕ್ರಿಯೆಗಳು ತಲೆಯ ಮೇಲೆ ಸವರುವದು, ಮೂಗು, ಕಿವಿ ಮುಟ್ಟುವಂಥದ್ದಾಗಿರಬೇಕು. ಮಧ್ಯದಲ್ಲಿರುವವನು ನಾಯಕನು ಯಾರು ಎಂಬದನ್ನು ಊಹಿಸಿದ ನಂತರ, ತಮ್ಮ ಮಧ್ಯದ ಸ್ಥಾನವನ್ನು ಬದಲಾಯಿಸಬೇಕು ಮತ್ತು ಆಟವನ್ನು ಮತ್ತೆ ಆಡಬೇಕು.



## ಹಾಜರಾತಿ ೫

ತರಗತಿಗೆ ಬಂದ ಮಕ್ಕಳಿಗೆ ಅಂದಿನ ಕಾರ್ಡ್ ಕೊಡಿರಿ. ವೀರರ ಆಟ ಆಡಲು ಮತ್ತೊಂದು ಕಾರ್ಡ್ ಪಡೆಯಬೇಕೆಂದರೆ ಮುಂದಿನ ವಾರ ತರಗತಿಗೆ ಬರುವಂತೆ ಅವರನ್ನು ಪ್ರೋತ್ಸಾಹಪಡಿಸಿರಿ ಮತ್ತು ಈ ವಾರ ಕಾರ್ಡ್ ಪಡೆದದ್ದಕ್ಕಾಗಿ ಅಭಿನಂದಿಸಿರಿ! ಇಂದಿನ ಕಾರ್ಡ್ ಯಾವುದೆಂದರೆ:

ಸಂಸೋನನು




## ಹೋಮ್ ವರ್ಕ್ ೫

ಈ ವಾರದ ನಿಮ್ಮ ಹೋಮ್ ವರ್ಕ್ ಏನೆಂದರೆ ಜೀವನದ ಮಾಹಿತಿಗಳಿಗೆ ಗಮನ ಕೊಡುವದು. ನೀವು ನಿಮ್ಮ ತಂದೆತಾಯಿಗಳಿಗೆ ವಿಧೇಯರಾಗುತ್ತಿದ್ದೀರೋ? ಜನರೊಂದಿಗೆ ಬೆರೆಯುತ್ತಿದ್ದೀರೋ? ಎಲ್ಲರನ್ನು ಕ್ಷಮಿಸಿದ್ದೀರೋ? ನಿಮ್ಮ ಅಧಿಕಾರಿಗಳಿಗೆ (ತಂದೆತಾಯಿಗಳು, ಟೀಚರ್, ಪಾಸ್ಟರ್, ಇತ್ಯಾದಿ) ತಿಳಿಯದಂತೆ ಏನಾದರೂ ಮರೆಮಾಡುತ್ತಿದ್ದೀರೋ? ನೀವು ತಪ್ಪಿಸಿರುವ ಮಾಹಿತಿಯನ್ನು ಆಯ್ಕೆ ಮಾಡಿರಿ, ದೇವರಲ್ಲಿ ಕ್ಷಮಾಪಣೆ ಬೇಡಿಕೊಳ್ಳಿರಿ ಮತ್ತು ಸಹಾಯ ಕೇಳಿಕೊಳ್ಳಿರಿ, ಅದನ್ನು ಅಧಿಕಾರಿಗಳೊಂದಿಗೆ ಅರಿಕೆ ಮಾಡಿಕೊಳ್ಳಿರಿ, ನಂತರ ಪಶ್ಚಾತ್ತಾಪಪಡಿರಿ. ವಾರದ ಉಳಿದ ದಿವಸಗಳಂದು ಮಾಹಿತಿಯೊಂದಿಗೆ ಎಚ್ಚರಿಕೆಯಿಂದ ಒಳ್ಳೆಯ ಕಾರ್ಯವನ್ನು ಮಾಡಿರಿ.

ಓದಿರಿ

ದಿನ 1: ರೂತಳು 1:1-7

ದಿನ 2: ರೂತಳು 1:11-18

ದಿನ 3: ರೂತಳು 2:1-4

ದಿನ 4: ರೂತಳು 2:19-23

ದಿನ 5: ರೂತಳು 4:9-15

# ೬. ದೇವರು ನಿಮ್ಮನ್ನು ಆಶೀರ್ವದಿಸುವನು



**ಸತ್ಯವೇದ ಕಥೆ: ರೂತಳು**

**ರೂತಳು 1:1-3:3, 3:16-4:22**

## ಕಂಠಪಾಠ ವಚನ ೬

"ಸರ್ವೇಶ್ವರನಲ್ಲಿ ಭರವಸೆಯಿಟ್ಟವನಾದರೋ ಧನ್ಯ ! ಅಂಥವನಿಗೆ ಸರ್ವೇಶ್ವರನಲ್ಲೇ ವಿಶ್ವಾಸ. ನೀರರುಗಿನಲೆ ನೆಡಲಾದ, ನದಿಯ ಬದಿಯಲೆ ಬೇರು ಹರಡಿದ ಬಿಸಿಲ ಧಗೆಗೆ ಹೆದರದ, ಬರಗಾಲದಲ್ಲೂ ನಿಶ್ಚಿಂತವಾದ ಹಸಿರೆಲೆಬಿಡುವ, ಫಲನೀಡುವ ಮರಕ್ಕೆ ಸಮಾನನು ಆತ." ಪ್ರವಾದಿ ಯೆರೆಮೀಯನ ಗ್ರಂಥ 17:7-8

## ಕಥೆಯ ಅವಶ್ಯಕತೆ ೬



ಇಂದು ಶಾಲೆಯಲ್ಲಿ ಮಾರ್ಕನ ತಾಯಿ ಇಡೀ ಗುಂಪಿನವರೊಂದಿಗೆ ಒಂದು ಸಂಗತಿಯನ್ನು ಪ್ರಸ್ತಾಪಿಸಿದರು. "ಪ್ರತಿದಿನ ತರಗತಿ ಮುಗಿದ ನಂತರ ಕೊಠಡಿಯನ್ನು ಶುಚಿಗೊಳಿಸಲು ಮತ್ತು ವಸ್ತುಗಳನ್ನು ಸರಿಯಾದ ಸ್ಥಳದಲ್ಲಿ ಏರ್ಪಡಿಸಲು ನೀವು ಇಲ್ಲಿಯೇ ಇರಬೇಕು ಎಂದು ಮನವಿ ಮಾಡಿಕೊಳ್ಳುತ್ತೇನೆ. ಆಗ ನಾವು ಕೆಲಸವನ್ನು ಒಟ್ಟಾಗಿ ಬೇಗ ಮುಗಿಸಬಹುದು ಮತ್ತು ಸಂತೋಷವಾಗಿ ಮನೆಗೆ ಹೋಗಬಹುದು. ಒಂದುವೇಳೆ ಎಲ್ಲರೂ ನನಗೆ ಸಹಾಯ ಮಾಡುವದಾದರೆ, ಸೆಮೆಸ್ಟರ್ ಕೊನೆಯಲ್ಲಿ ನಾನು ಬಹುಮಾನ ಕೊಡುತ್ತೇನೆ." ಮಾರ್ಕನೂ ಸೇರಿ ಎಲ್ಲರಿಗೂ ಈ ಯೋಚನೆ ಇಷ್ಟವಾಯಿತು, ಆದರೆ ಅವನ ಮನೆ ಸ್ವಲ್ಪ ದೂರವಿದ್ದರಿಂದ ಅವನಿಗೆ ಕಷ್ಟವಾಗುತಿತ್ತು. ಆದರೂ ಎಲ್ಲರೂ ಉಳಿದುಕೊಳ್ಳಲು ಪ್ರಾರಂಭಿಸಿದರು. ಆದರೆ ಕೆಲವು ದಿವಸಗಳಾದ ನಂತರ ತುಂಬಾ ಚಿಕ್ಕ ಬಹುಮಾನ ಕೊಡುತ್ತಾರೇನೋ ಎಂದು ಯೋಚಿಸಿ ಉಳಿಯುವದು ಬೇಡ ಎಂಬದಾಗಿ ಆಲೋಚಿಸಿಕೊಂಡರು. ಆದರೆ ಮಾರ್ಕನು ಮಾತ್ರ ಎಲ್ಲಾ ವಿಷಯಗಳಲ್ಲಿಯೂ ಟೀಚರ್ ಗೆ ಸಹಾಯ ಮಾಡುತ್ತಿದ್ದನು. ಅವನು ಬಹುಮಾನದ ಬಗ್ಗೆ ಯೋಚನೆ ಮಾಡದೆ ಯಾವಾಗಲೂ ಸಹಾಯ ಮಾಡುತ್ತಿದ್ದನು.

## ಮುಖ್ಯ ಪಾಠ ೬

ಮತ್ತೊಮ್ಮೆ ಸ್ವಾಗತ! ನ್ಯಾಯಸ್ಥಾಪಕರ ಕಾಲದಲ್ಲಿ, ಯೆಫ್ತಾಹನು ಮತ್ತು ಸಂಸೋನನ ಹಾಗೆ, ಮತ್ತೊಂದು ಸುಂದರವಾದ ಕಥೆಯನ್ನು ನೋಡಬಹುದಾಗಿದೆ. ಬರಗಾಲದ ನಿಮಿತ್ತ ಒಬ್ಬ ಇಸ್ರಾಯೇಲ್ಯನು ತನ್ನ ಕುಟುಂಬದವರನ್ನು ಕರೆದುಕೊಂಡು ಮೋವಾಬ್ ದೇಶಕ್ಕೆ ಹೋದನು. ಹತ್ತು ವರ್ಷದೊಳಗೆ ಅವನು ಮತ್ತು ಅವನ ಇಬ್ಬರು ಗಂಡು ಮಕ್ಕಳು ಮೃತಪಟ್ಟರು. ನಾವು ಪಾಪದಿಂದ ಮಲಿನಗೊಂಡಿರುವ ಲೋಕದೊಳಗೆ ಜೀವಿಸುತ್ತಿದ್ದೇವೆ, ಕೆಟ್ಟ ಘಟನೆಗಳು ಕ್ರೈಸ್ತರು ಹಾಗೂ ಕ್ರೈಸ್ತರಲ್ಲದವರ ಜೀವಿತಗಳಲ್ಲಿ ಸಮಾನವಾಗಿ ಸಂಭವಿಸುತ್ತವೆ. ನಿಮ್ಮ ತೊಂದರೆಗಳು ಎದುರಾಗುವವು ಆದರೂ ನಿಮ್ಮ ಕಷ್ಟದ ಸಮಯಗಳಲ್ಲಿ ನಾನು ನಿಮ್ಮ ಜೊತೆಯಲ್ಲಿರುವೆನು ಎಂಬದಾಗಿ ಯೇಸು ಕ್ರಿಸ್ತನು ಹೇಳಿದ್ದಾನೆ. ವಿಧವೆಯಾದ ನವೋಮಿ ತನ್ನಿಬ್ಬರು ಸೊಸೆಯಂದಿರಾದ ರೂತಳು

ಮತ್ತು ಓರ್ಫಳ ಜೊತೆ ಇಸ್ರಾಯೇಲಿಗೆ ಹೊರಟಳು. ಮಾರ್ಗಮಧ್ಯದಲ್ಲಿ ನವೋಮಿ ತನ್ನಿಬ್ಬರು ಸೊಸೆಯಂದಿರ ಹಿತಕ್ಕಾಗಿ ನೀವು ನಿಮ್ಮ ಸ್ವಂತ ದೇಶಕ್ಕೆ ಹಿಂದಿರುಗಿ ಹೋಗಿರಿ ಎಂದು ಹೇಳಿದಳು. ಅವರು ಒಬ್ಬರನ್ನೊಬ್ಬರು ಬಹಳವಾಗಿ ಪ್ರೀತಿಸುತ್ತಿದ್ದರು, ಆದ್ದರಿಂದ ಅಗಲುವಿಕೆಯು ಅವರಿಗೆ ಬಹಳ ಕಷ್ಟವಾಗಿತ್ತು. ಓರ್ಫಳು ಮೋವಾಬಿಗೆ ಹಿಂದಿರುಗಿ ಹೋದಳು ಆದರೆ ರೋತಳು ನವೋಮಿಯನ್ನು ಬಿಟ್ಟು ಹೋಗಲು ಬಯಸದೆ, ನವೋಮಿಗೆ ನಿನ್ನ ದೇವರೇ ನನ್ನ ದೇವರು, ನಿನ್ನ ಜನರೇ ನನ್ನ ಜನರು ಎಂದು ಹೇಳಿದಳು. ನವೋಮಿ ಬೆತ್ಲೆಹೇಮಿಗೆ ಹೋದ ನಂತರ

ಅಲ್ಲಿನವರೊಂದಿಗೆ ತನ್ನ ಜೀವಿತ ಕಷ್ಟ ನಷ್ಟಗಳಿಂದ ಕೂಡಿದೆ ಎಂದು ಹೇಳಿದಳು. ನಮ್ಮ ಜೀವಿತದಲ್ಲಿ ಕೆಟ್ಟ ಕಾರ್ಯಗಳು ಸಂಭವಿಸುವಾಗ, ಸಹಜವಾಗಿ ನಮಗೆ ಬಹಳ ನಿರಾಸೆಯಾಗುತ್ತದೆ. ಆದರೆ ರೂತಳು ನವೋಮಿಯೊಂದಿಗೇ ಇದ್ದು ಬುದ್ದಿವಂತಿಕೆಯಿಂದ ಬೋವಜನ ಹೊಲದಲ್ಲಿ ಕೆಲಸ ಮಾಡುತ್ತಿದ್ದಳು, ನಂತರ ರೂತಳಿಗೆ ಆಕೆಯ ಅತ್ತೆ ಏನು ಮಾಡಬೇಕೆಂದು ಹೇಳಿದಾಗ ಯಾವುದೇ ಪ್ರಶ್ನೆಯಿಲ್ಲದೆ ಆಕೆ ವಿಧೇಯಳಾದಳು. ಸುಂದರವಾದ ಬಟ್ಟೆಗಳು, ಕೇಶ ವಿನ್ಯಾಸ, ಮೇಕಪ್ ಅಥವಾ ಇತರೆ ಸಾಧನಗಳಿಗಿಂತ ಪ್ರಾಮಾಣಿಕತೆ, ಬುದ್ದಿವಂತಿಕೆ ಮತ್ತು ವಿಧೇಯತೆ ಹೆಚ್ಚು ಸುಂದರವಾದವುಗಳಾಗಿವೆ. ಬೋವಜನು ಸಹ ಈ ಎಲ್ಲಾ ಗುಣಗಳನ್ನು ಗಮನಿಸಿದನು. ಆಕೆಯನ್ನು ಸಂರಕ್ಷಿಸುವ ಸಲುವಾಗಿ ತನ್ನ ಹೊಲದಲ್ಲಿಯೇ ಕೆಲಸ ಮಾಡುವಂತೆ ಅವನು ರೂತಳಿಗೆ ಹೇಳಿದನು. ಆತನು ದಯೆಯುಳ್ಳವನು ಮತ್ತು ಉದಾರಿಯಾಗಿದ್ದು, ತನ್ನ ಕೆಲಸಗಾರರೊಂದಿಗೆ ಆಕೆಯನ್ನು ಊಟಕ್ಕೆ ಕರೆದು ಆಕೆಗೆ ಹೆಚ್ಚಿನ ಪಾಲು ಕೊಡುತ್ತಿದ್ದನು. ಮದುವೆ ಮಾಡಿಕೊಳ್ಳುವ ಸಮಯ ಬಂದಾಗ, ಎಲ್ಲವನ್ನು ಯುಕ್ತವಾಗಿ ದೇವರಿಗೆ ಮೆಚ್ಚಿಕೆಯಾಗುವ ರೀತಿಯಲ್ಲಿ ಬೋವಜನೇ ನೋಡಿಕೊಂಡನು. ಒಳ್ಳೇತನ, ಉದಾರತೆ ಮತ್ತು ನೀತಿವಂತಿಕೆ ಯೇಸು ಕ್ರಿಸ್ತನನ್ನು ಪ್ರತಿಬಿಂಬಿಸುತ್ತವೆ ಮತ್ತು ಬಲ ಹಾಗೂ ಜ್ಞಾನವಿವೇಕಗಳಿಗಿಂತ ಹೆಚ್ಚು ಪ್ರಾಮುಖ್ಯವಾದವುಗಳಾಗಿವೆ. ಸತ್ಯವೇದವು ಹೇಳುವದೇನೆಂದರೆ ನಾವು ಕರ್ತನಲ್ಲಿ ಹೆಚ್ಚಳಪಡವಾಗ, ನಮ್ಮ ಜೀವಿತಗಳಲ್ಲಿ ಆತನಿಗೆ ಪ್ರಾಮುಖ್ಯತೆಯನ್ನು ಕೊಡುವಾಗ, ನಮ್ಮ ಹೃದಯದ ಬಯಕೆಗಳನ್ನು ಆತನು ಪೂರೈಸುತ್ತಾನೆ (ಕೀರ್ತನೆ 37:4). ಯೇಸು ಕ್ರಿಸ್ತನು ಹೇಳಿರುವದೇನೆಂದರೆ ನಾನು ಜೀವವನ್ನು ಕೊಡಲು ಸಮೃದ್ಧವಾದ ಜೀವವನ್ನು ಕೊಡಲು ಬಂದಿದ್ದೇನೆ (ಯೋಹಾನ 10:10). ಯೇಸು ಕ್ರಿಸ್ತನು ಇನ್ನೂ ಹೇಳಿರುವದೇನೆಂದರೆ ನಾವು ಎಲ್ಲವನ್ನೂ ಆತನಿಗೆ ಕೊಡುವಾಗ, ಅದಕ್ಕೆ ಬದಲಾಗಿ 100 ರಷ್ಟು ಹೆಚ್ಚು ನಮಗೆ ಬಹುಮಾನ ಕೊಡುತ್ತಾನೆ, ಅವುಗಳಲ್ಲಿ ಕೆಲವು ಈ ಲೋಕದಲ್ಲಿ ಇನ್ನೂ ಕೆಲವು ಪರಲೋಕದಲ್ಲಿ ದೊರೆಯುತ್ತವೆ! (ಮತ್ತಾಯ 19:28-30) ದೇವರು ನಮ್ಮನ್ನು ಆಶೀರ್ವದಿಸಲು ಬಯಸುತ್ತಾನೆ. ಬೋವಜನು ಮತ್ತು ರೂತಳು ಮದುವೆ ಮಾಡಿಕೊಂಡರು ಹಾಗೂ ಅವರಿಗೆ ಒಬ್ಬ ಗಂಡು ಮಗು ಜನಿಸಿದನು, ಆದ್ದರಿಂದ ನವೋಮಿ ಬಹಳ ಸಂತೋಷಿಸಿದಳು. ಕೆಲವೊಮ್ಮೆ ದೇವರು ನಮಗೆ ಕೊಡುವ ಆಶೀರ್ವಾದಗಳು ಇತರರಿಗೂ ಸಹಾಯ ಮಾಡುತ್ತದೆ. ಬೋವಜನು ಮತ್ತು ರೂತಳು ಭವಿಷ್ಯದ ಅರಸನಾದ ದಾವೀದನಿಗೆ ಮೂಲಪಿತೃಗಳಾದರು ಮತ್ತು ಯೇಸು ಕ್ರಿಸ್ತನಿಗ ಪೂರ್ವಜರಾದರು. ನಮ್ಮ ಜೀವಿತದಲ್ಲಿ ದೇವರ ಆಶೀರ್ವಾದವು ಭವಿಷ್ಯದಲ್ಲಿ ದೊರೆಯಬಹುದು, ಅಥವಾ ನೀವು ಪ್ರೀತಿಯ ಸ್ನೇಹಿತನ ಜೀವಿತದಲ್ಲಿ ನೆರವೇರಬಹುದು ಅಥವಾ ಉದ್ಯೋಗ ದೊರೆಯಬಹುದು ಅಥವಾ ಕರ್ತನ ಸೇವೆ ಮಾಡುವ ದೊಡ್ಡ ಅವಕಾಶ ದೊರೆಯಬಹುದು. ಇಂದು ಮಾರ್ಕನು ಆಶೀರ್ವಾದ ಹೊಂದುವದನ್ನು ನಾವು ನೋಡಿಕೊಳ್ಳೋಣ. ದೇವರು ನಮ್ಮ ಮೇಲಿನ ತನ್ನ ಪ್ರೀತಿಯನ್ನು ಪ್ರಕಟಪಡಿಸಲು ಸಣ್ಣಪುಟ್ಟ ವಿಷಯಗಳನ್ನೂ ಉಪಯೋಗಿಸಿಕೊಳ್ಳುತ್ತಾನೆ. ದೇವರು ನಿಮ್ಮನ್ನು ಆಶೀರ್ವದಸಲು ಬಯಸುತ್ತಿದ್ದಾನೆ ಮತ್ತು ನೀವು ದೇವರಿಗೆ ಆದ್ಯತೆಯನ್ನು ಕೊಟ್ಟು ಆತನಲ್ಲಿ ಸಂತೋಷಿಸುವಾಗ ಹಾಗೂ ಕಷ್ಟದ ಸಮಯದಲ್ಲಿಯೂ ಆತನು ಬಯಸಿದ ಹಾಗೆ ಜೀವಿಸುವಾಗ, ದೇವರು ಸಂತೋಷವಾಗಿ ನಿಮ್ಮನ್ನು ಆಶೀರ್ವದಿಸುತ್ತಾನೆ.

ದೇವರು ನನ್ನನ್ನು ಆಶೀರ್ವದಿಸಲು ಬಯಸುತ್ತಾನೆ ಎಂದು ನಾನು ನಂಬುತ್ತೇನೆ, ಮತ್ತು ಏನೇ ಆದರೂ ಆತನನ್ನು ಹಿಂಬಾಲಿಸಲು ಸಾಧ್ಯವಾದಷ್ಟು ಉತ್ತಮವಾಗಿ ಪ್ರಯತ್ನಿಸುತ್ತೇನೆ.

## ವಿಶ್ಲೇಷಣ ೬

ಆ ದಿನ ಬಂದಿತು ಮತ್ತು ಟೀಚರ್ ಮಾರ್ಕನಿಗೆ ಆಶ್ಚರ್ಯ ನೀಡಿದರು ಯಾಕಂದರೆ ಅವನು ಮಾತ್ರವೇ ಪ್ರತಿದಿನ ಇದ್ದು ಸಹಾಯ ಮಾಡುತ್ತಿದ್ದನು. ಅವನಿಗೆ ದೊರೆತ ಆಶ್ಚರ್ಯಕರವಾದ ಬಹುಮಾನ ಏನೆಂದು ನಿಮಗೆ ಅನ್ನಿಸುತ್ತದೆ?




ಅಬ್ಬಾ, ಬೈಸಕಲ್! ಅದು ಮಾರ್ಕನಿಗೆ ಉತ್ತಮವಾದ ಬಹುಮಾನವಾಗಿತ್ತು, ಯಾಕಂದರೆ ಅದರಿಂದ ಅವನು ಮನೆಗೆ ಬೇಗ ಹೋಗಬಹುದಾಗಿತ್ತು ಮತ್ತು ಅವನಿಗೆ ಹೆಚ್ಚು ಆಯಾಸವಾಗುತ್ತಿರಲಿಲ್ಲ.

## ಚಟುವಟಿಕೆ ೬

ಜ್ಞಾಪಕಾರ್ಥ

ದೇವರು ತಮ್ಮನ್ನು ಆಶೀರ್ವದಿಸಿರುವ ಕಾರ್ಯವನ್ನು ಮಕ್ಕಳು ನೆನಪಿಸಿಕೊಳ್ಳಲು ಇದು ಸಹಾಯ ಮಾಡುತ್ತದೆ.

ಪತ್ರದ ಅಳತೆಯ ಅಥವಾ ಎ-4 ಅಳತೆಯ ಹಾಳೆಯನ್ನು ತೆಗೆದುಕೊಳ್ಳಿರಿ ಮತ್ತು ಚಿತ್ರದಲ್ಲಿ ತೋರಿಸಿರುವ ಪ್ರಕಾರ ಅದನ್ನು ಮಡಚಿರಿ. ಚಿತ್ರವನ್ನು ಅಥವಾ ಚಿತ್ರ ಬಿಡಿಸಲು ಸ್ಥಳವೇನಾದರೂ ಇದೆಯೇ ಎಂಬದನ್ನು ಗಮನಿಸಿರಿ. ಒಂದುವೇಳೆ ಮನೆಯಲ್ಲಿ ಚಿತ್ರ ಇರುವದಾದರೆ, ಅಲ್ಲಿ ಅಂಟಿಸಲು ಅದನ್ನು ಕತ್ತರಿಸಿರಿ. ಪೋಟೋಗಳು ಅಥವಾ ಬಿಡಿಸಿದ ಚಿತ್ರಗಳು ನಿಮ್ಮ ಕುಟುಂಬದ ಸದಸ್ಯರದ್ದಾಗಿರಬಹುದು ಅಥವಾ ನಿಮ್ಮಲ್ಲಿರುವ ಮತ್ತು ನಿಮಗೆ ಬಹಳವಾಗಿ ಇಷ್ಟವಿರುವ ವಸ್ತುಗಳದ್ದಾಗಿರಬಹುದು.




## ಟೈಮ್ ಲೈನ್ ೬

ರೂತಳು ಕಥೆ ಯಾವ ಇಸವಿಯಲ್ಲಿ ಸಂಭವಿಸಿತು? ಉ. ನಮಗೆ ನಿಖರವಾಗಿ ಗೊತ್ತಿಲ್ಲ, ಆದರೆ ಕ್ರಿ.ಪೂ 1230 ರಲ್ಲಿ ಸಂಭವಿಸಿರಬಹುದು ಎಂದು ನಮಗೆ ಕಲಿಸಲಾಗಿದೆ.

## ಒಗಟಿನ ಉತ್ತರಗಳು ೬








## ಪ್ರಶ್ನೆಗಳು ಮತ್ತು ಉತ್ತರಗಳು ೬

(ಹಿರಿಯ ವಿದ್ಯಾರ್ಥಿಗಳಿಗೆ)

1. ಆದ್ದರಿಂದ, ನನಗೇನು ಸಿಗುತ್ತದೆ? (ದೇವರು ಧಾರಾಳತೆಯುಳ್ಳವನಾಗಿದ್ದಾನೆ ಮತ್ತು ನಮ್ಮನ್ನು ಆಶೀರ್ವದಿಸಲು ಬಯಸುತ್ತಾನೆ. ನಿಮ್ಮ ಅತೀ ದೊಡ್ಡ ಕನಸು ಏನು? ದೇವರು ಅದನ್ನು ನೆರವೇರಿಸಲು ನೋಡಲು ಕಾಯಬೇಕು! ನಿಮ್ಮ ವಿದ್ಯಾರ್ಥಿಗಳು ಏನನ್ನು ಬಯಸುತ್ತಿದ್ದಾರೆ ಎಂಬದನ್ನು ಎಚ್ಚರಿಕೆಯಿಂದ ಗಮನಿಸಿರಿ, ಅದು ಹೊಸ ಕಾರು, ಹೊಸ ಮೊಬೈಲ್ ಇತ್ಯಾದಿ ಆಗಿರಬಾರದು ಮತ್ತು ಉತ್ತಮವಾಗಿ ಮತ್ತು ಅತ್ಯಂತ ಪ್ರಾಮುಖ್ಯವಾದ ವಸ್ತುಗಳ ಬಗ್ಗೆ ಕನಸು ಕಾಣಲು ಅವರಿಗೆ ಸಹಾಯ ಮಾಡಿರಿ.)
2. ಒಂದುವೇಳೆ ದೇವರು ನಮ್ಮನ್ನು ಆಶೀರ್ವದಿಸಲು ಬಯಸುವದಾದರೆ, ಆತನು ಕೆಟ್ಟ ಕಾರ್ಯಗಳು ಸಂಭವಿಸಲು ಯಾಕೆ ಅನುಮತಿಸುತ್ತಾನೆ? (ನಾವು ಅತಿಯಾದ ಪಾಪ ತುಂಬಿರುವ ಲೋಕದಲ್ಲಿ ಜೀವಿಸುತ್ತಿದ್ದೇವೆ ಆದ್ದರಿಂದ ಪ್ರತಿಯೊಬ್ಬರಿಗೂ ಕೆಟ್ಟ ಕಾರ್ಯಗಳು ಸಂಭವಿಸುತ್ತವೆ. ಹಾಗೆಯೇ ದೇವರು ನಮ್ಮ ದೇಹಗಳಿಗಿಂತ ಹೆಚ್ಚಾಗಿ ನಮ್ಮ ಹೃದಯಗಳ ಬಗ್ಗೆ ಚಿಂತಿಸುತ್ತಾನೆ. ನಮ್ಮ ಪ್ರಾಣ ಮತ್ತು ಆತ್ಮ ನಿತ್ಯವಾಗಿದೆಯೇ ಹೊರತು ದೇಹ ನಿತ್ಯವಲ್ಲ. ನಮ್ಮ ಹೃದಯಗಳನ್ನು ಬದಲಾಯಿಸಲು ಹಾಗೂ ಪರಿಪಕ್ವತೆಯನ್ನು ಹೆಚ್ಚಿಸಲು ದೇವರು ವೇದನೆ ಮತ್ತು ಕಷ್ಟಕರವಾದ ಪರಿಸ್ಥಿತಿಗಳನ್ನು ಉಪಯೋಗಿಸಿಕೊಳ್ಳುತ್ತಾನೆ.
3. ಸಭೆಯಲ್ಲಿ ಎಲ್ಲರೂ "ದೇವರು ನಿಮ್ಮನ್ನು ಆಶೀರ್ವದಿಸಲಿ" ಎಂದು ಯಾಕೆ ಹೇಳುತ್ತಾರೆ? (ಅದು ಅಭ್ಯಾಸವಾಗಿರಬಹುದು, ವಂದನೆ ಆಗಿರಬಹುದು ಆದರೂ ಪ್ರತಿಯೊಬ್ಬರು ಅದಕ್ಕೆ ಹೊಂದಿಕೊಂಡಿರುವದರಿಂದ ಯಾಕೆ ಮುಂದುವರೆಸಬಾರದು?)

## ಆಟ ೬

ಆಶೀರ್ವಾದಗಳ ದೃಢತೆ



ಒಬ್ಬ ವ್ಯಕ್ತಿ ಮಾರುವವನು, ಮತ್ತೊಬ್ಬನು ಕೊಂಡುಕೊಳ್ಳುವವನು ಮತ್ತು ಉಳಿದವರು ಆಶೀರ್ವಾದಗಳು. ಟೀಚರ್ ಮಕ್ಕಳಿಗೆ ಆಶೀರ್ವಾದದ ಹೆಸರುಗಳನ್ನು ಒಪ್ಪಿಸಬೇಕು (ಉದಾಹರಣೆಗಳು ಕೆಳಗೆ ಕೊಡಲಾಗಿದೆ). ಕೊಂಡುಕೊಳ್ಳುವವನು ಬರುವಾಗ, ಹೇಳಬೇಕಾದದ್ದು: ನನಗೆ ಆಶೀರ್ವಾದ ಬೇಕು. ಮಾರುವವನು ಹೇಳುವದೇನೆಂದರೆ: ನೀವು ಯಾವ ಆಶೀರ್ವಾದ ಬಯಸುತ್ತಿದ್ದೀರಿ? ಮತ್ತು ಇವುಗಳಲ್ಲಿ ಬೇಕಾದ್ದನ್ನು ಆರಿಸಿಕೊಳ್ಳಿರಿ. ಕೊಳ್ಳುವವನು, ಇದರ ಬೆಲೆ ಎಷ್ಟು ಎಂದು ಕೇಳಬೇಕು? ಒಂದುವೇಳೆ ಆ ಆಶೀರ್ವಾದ ಇದ್ದರೆ, ಅದನ್ನು ಪ್ರತಿನಿಧಿಸುತ್ತಿರುವ ಮಗು ತನ್ನ ವಯಸ್ಸನ್ನು ಹೇಳಬೇಕು ಮತ್ತು ಸಿಕ್ಕಿಕೊಳ್ಳದಂತೆ ತಪ್ಪಿಸಿಕೊಂಡು ಓಡಬೇಕು. ಮಗು ಹೇಳಿದ ವಯಸ್ಸಿನಷ್ಟು ಕೊಳ್ಳುವವನು ಮಾರುವವನಿಗೆ ಚಪ್ಪಾಳೆ ತಟ್ಟಿ ಅದನ್ನು ಹಣವಾಗಿ ಪಾವತಿಸಬೇಕು ನಂತರ ಇಬ್ಬರೂ ಆಶೀರ್ವಾದವನ್ನು ಪ್ರತಿನಿಧಿಸುತ್ತಿರುವ ಮಗುವನ್ನು ಹಿಡಿಯಲು ಪ್ರಯತ್ನಿಸಬೇಕು. ಒಂದುವೇಳೆ ಅವನೇನಾದರೂ ಸಿಕ್ಕಿಬಿದ್ದರೆ, ಓಡುವ ಮಗು ಸೋತು ಹೋಗುವನು ಮತ್ತು ಒಂದುವೇಳೆ ಸಿಗಲಿಲ್ಲವೆಂದರೆ, ಆತನು ಹಿಂದಿರುಗುತ್ತಾನೆ ಹಾಗೂ ಮತ್ತೊಂದು ಹೆಸರು ಅವನಿಗೆ ಕೊಡಲಾಗುತ್ತದೆ. ಆಶೀರ್ವಾದಗಳು ಯಾವುವೆಂದರೆ:

1. ಆಹಾರ
2. ರಕ್ಷಣೆ
3. ಆರೋಗ್ಯ
4. ಸಮಾಧಾನ
5. ಬಟ್ಟೆಗಳು
6. ಸಿಹಿ ಪದಾರ್ಥಗಳು
7. ಕೇಕ್
8. ಆಟದ ವಸ್ತುಗಳು
9. ತಾಳ್ಮೆ

10. ಜ್ಞಾನ
11. ಸಂತೋಷ
12. ಕುಟುಂಬ
13. ಪ್ರೀತಿ
14. ಸ್ನೇಹಿತರು
15. ನಿತ್ಯಜೀವ

ಆಯ್ಕೆಗಳು: ನೀವು ಸಣ್ಣ ಅಂಗಡಿಯನ್ನು ಪ್ರತಿನಿಧಿಸಲು ಟೇಬಲ್, ಚೇರ್ ಅಥವಾ ಕಲ್ಲುಗಳನ್ನು ಉಪಯೋಗಿಸಬಹುದು.

## ಹಾಜರಾತಿ ೭




ತರಗತಿಯಲ್ಲಿ ಭಾಗವಹಿಸಿದ್ದಕ್ಕೆ ಮಕ್ಕಳಿಗೆ ಇಂದಿನ ಕಾರ್ಡ್ ಕೊಡಿರಿ. ವೀರರ ಆಟವನ್ನು ಆಡಲು ಮತ್ತೊಂದು ಕಾರ್ಡ್ ಪಡೆಯುವ ಸಲುವಾಗಿ ಮುಂದಿನ ವಾರ ತರಗತಿ ಬರುವಂತೆ ಅವರನ್ನು ಪ್ರೋತ್ಸಾಹಪಡಿಸಿರಿ ಮತ್ತು ಅಭಿನಂದಿಸಿರಿ.
ಇಂದಿನ ಕಾರ್ಡ್ ಯಾವುದೆಂದರೆ:
ರೂತಳು

## ಹೋಮ್ ವರ್ಕ್ ೭

ನಿಮಗಿಷ್ಟವಿರುವದು ನಿಮ್ಮ ಬಳಿ ಇರುವದಾದರೆ ಉದಾಹರಣೆಗೆ ನಿಮ್ಮ ಕುಟುಂಬ, ಸ್ನೇಹಿತ, ನಿಮ್ಮ ಮನೆ ಅಥವಾ ಹಾಸಿಗೆ, ಆಟದ ವಸ್ತು, ಶಾಲೆಯಲ್ಲಿ ನಿಮ್ಮ ಮೆಚ್ಚಿನ ತರಗತಿ ಇತ್ಯಾದಿಗಳ ಬಗ್ಗೆ ಆಲೋಚಿಸುವದು ಈ ವಾರದ ಹೋಮ್ ವರ್ಕ್ ಆಗಿದೆ. ಈ ವಾರದ ಪ್ರತಿದಿನ ಅದಕ್ಕಾಗಿ ದೇವರಿಗೆ ಕೃತಜ್ಞತೆ ಸಲ್ಲಿಸಿರಿ.

ಓದಿರಿ
ದಿನ 1: 1 ಸಮುವೇಲ 1:1-8
ದಿನ 2: 1 ಸಮುವೇಲ 1:9-20
ದಿನ 3: 1 ಸಮುವೇಲ 3:1-6
ದಿನ 4: 1 ಸಮುವೇಲ 3:7-14
ದಿನ 5: 1 ಸಮುವೇಲ 3:15-21

# ೭. ದೇವರು ನಿಮ್ಮನ್ನು ನೇಮಿಸುತ್ತಾನೆ



**ಸತ್ಯವೇದ ಕಥೆ: ಸಮುವೇಲನು**

**1 ಸಮುವೇಲ 1:1-28, 3:1-21**

## ಕಂಠಪಾಠ ವಚನ ೭

"ನೀವು ನನ್ನನ್ನು ಆರಿಸಿಕೊಳ್ಳಲಿಲ್ಲ, ನಾನೇ ನಿಮ್ಮನ್ನು ಆರಿಸಿಕೊಂಡಿದ್ದೇನೆ. ನೀವು ಲೋಕಕ್ಕೆ ಹೋಗಬೇಕು, ಸಫಲರಾಗಬೇಕು; ಆ ಫಲ ಶಾಶ್ವತವಾಗಿರಬೇಕೆಂದೇ ನಿಮ್ಮನ್ನು ನೇಮಿಸಿದ್ದೇನೆ. ಹೀಗಿರಲಾಗಿ ನೀವು ನನ್ನ ಹೆಸರಿನಲ್ಲಿ ಪಿತನಿಂದ ಏನು ಕೇಳಿದರೂ ನಿಮಗೆ ಅದು ಸಿಗುವುದು." ಯೊವಾನ್ನ 15:16

## ಕಥೆಯ ಅವಶ್ಯಕತೆ ೭



ಮಾರ್ಕನ ಸಭೆಯಲ್ಲಿ ರಜಾದಿನಗಳ ಸತ್ಯವೇದ ತರಭೇತಿ ಶಾಲೆಯನ್ನು ಏರ್ಪಡಿಸಲಾಗಿತ್ತು. ಮಕ್ಕಳೆಲ್ಲರಿಗೆ ನಾಟಕ ಮತ್ತು ಇತರೆ ಕಾರ್ಯಗಳನ್ನು ಮಾಡಲು ನೇಮಿಸಲಾಗಿತ್ತು. ಸಂಡೇ ಸ್ಕೂಲ್ ಟೀಚರ್ ಎಲ್ಲರಿಗೂ ಮಾರ್ಗದರ್ಶನ ಕೊಡುತ್ತಿದ್ದರು, ಆದರೆ ಮಾರ್ಕನಿಗೆ ಮಾತ್ರ ಯಾವ ಕಾರ್ಯಕ್ರಮದಲ್ಲಿಯೂ ಭಾಗವಹಿಸುವ ಅವಕಾಶ ಸಿಗಲಿಲ್ಲ. ಅವನಿಗೆ ಬಹಳ ದುಃಖವಾಯಿತು ಮತ್ತು ತಾನು ಯಾವ ಕೆಲಸಕ್ಕೂ ಬಾರದವನು ಎಂಬದಾಗಿ ಯೋಚಿಸಿದನು, ದೇವರು ತನ್ನನ್ನು ಉಪಯೋಗಿಸಿಕೊಳ್ಳುತ್ತಿಲ್ಲ ಅಥವಾ ದೇವರಿಗೆ ತನ್ನನ್ನು ಉಪಯೋಗಿಸಿಕೊಳ್ಳಲು ಮನಸ್ಸಿಲ್ಲ ಎಂಬದಾಗಿ ಅಂದುಕೊಂಡನು.

## ಮುಖ್ಯ ಪಾಠ ೭

ನಂಬಿಕೆಯ ವೀರರಿಗೆ ಮತ್ತೊಮ್ಮೆ ಸ್ವಾಗತ! ಇಸ್ರಾಯೇಲಿನ ಕಡೆಯ ನ್ಯಾಯಾಧಿಪತಿಯಾದ ಸಮುವೇಲನ ಬಗ್ಗೆ ಹಾಗೂ ಆತನನ್ನು ದೇವರು ಹೇಗೆ ಕರೆದನು ಎಂಬದರ ಬಗ್ಗೆ ಇಂದು ಕಲಿತುಕೊಳ್ಳೋಣ. ಇಲ್ಲಿಯ ತನಕ ನಾವು ಕಲಿತುಕೊಂಡಿರುವ ಎಲ್ಲಾ ನಂಬಿಕೆಯ ವೀರರನ್ನು ನೆನಪಿಸಿಕೊಳ್ಳಿರಿ. ಸಮುವೇಲನು ಯಾವ ರೀತಿಯ ವ್ಯಕ್ತಿಯಾಗಿದ್ದನು: ರಣವೀರನು, ಐಶ್ವರ್ಯವಂತನು, ಅಥವಾ ಯಾಜಕನು? ದೇವರು ಅವನನ್ನು ಯಾವ ರೀತಿ ಕರೆದನು ಎಂಬದನ್ನು ತಿಳಿದುಕೊಳ್ಳೋಣ. ಇಸ್ರಾಯೇಲಿನಲ್ಲಿ ಒಂದುವೇಳೆ ಸ್ತ್ರೀಯರು ಬಂಜೆಯರಾದರೆ ಬಹಳ ದುಃಖಪಡುತ್ತಿದ್ದರು. ಒಮ್ಮೆ ಆಕೆ ತನ್ನ ಗಂಡನೊಂದಿಗೆ ದೇವರ ಆರಾಧನೆಗೆಂದು ಆಲಯಕ್ಕೆ ಹೋದಳು, ಅಲ್ಲಿ ಆಕೆ ಮೌನವಾಗಿ ದೇವರು ನನಗೊಬ್ಬ ಮಗನನ್ನು ಕೊಡು, ನಾನು ಅವನನ್ನು ನಿನಗೇ ಒಪ್ಪಿಸುತ್ತೇನೆ ಎಂಬದಾಗಿ ಪ್ರಾರ್ಥನೆ ಮಾಡಿದಳು. ಆಕೆ ಮನೆಗೆ ಹಿಂದಿರುಗಿನ ನಂತರ, ದೇವರು ಆಕೆಯ ಪ್ರಾರ್ಥನೆಗೆ ಉತ್ತರಿಸಿದನು, ಆಕೆ ಆ ಹುಡುಗನಿಗೆ ಸಮುವೇಲನು ಎಂದು ಹೆಸರಿಟ್ಟಳು. ಆಕೆ ಅವನನ್ನು ಆಲಯಕ್ಕೆ ಕರೆದುಕೊಂಡು ಬಂದಳು, ಅವನು ಆಲಯದಲ್ಲಿಯೇ ಯಾಜಕನಾದ ಏಲಿಯ ಪರಾಂಬರಿಕೆಯಲ್ಲಿ ಬೆಳೆದನು. ಒಂದುದಿನ ಸಮುವೇಲನು ಇನ್ನೂ ಬಾಲಕನಾಗಿರುವಾಗಲೇ, ಅವನು ಆಲಯದೊಳಗೆ ಮಲಗಿದ್ದನು. ರಾತ್ರಿಯ ಸಮಯದಲ್ಲಿ ಯಾರೋ "ಸಮುವೇಲನೇ, ಸಮುವೇಲನೇ" ಎಂಬದಾಗಿ ಅವನನ್ನು ಕರೆಯುವದನ್ನು ಕೇಳಿಸಿಕೊಂಡನು. ಅವನು ಕೂಡಲೇ ಎದ್ದು ಏಲಿಯ ಬಳಿಗೆ ಓಡಿ ಹೋಗಿ, "ಇಗೋ ಇದ್ದೇನೆ" ಎಂದು ಹೇಳಿದನು. ಆದರೆ ಏಲಿ ಅವನನ್ನು ಕರೆದಿರಲಿಲ್ಲ. ಮೂರು ಸಲ ಹಾಗೆಯೇ ಆದ ನಂತರ, ದೇವರು ಅವನನ್ನು ಕರೆಯುತ್ತಿದ್ದಾನೆ ಎಂಬದು ಏಲಿಗೆ ಅರ್ಥವಾಯಿತು.
ಅವನು ಸಮುವೇಲನಿಗೆ ನೀನು ಹಿಂದಿರುಗಿ ಹೋಗಿ ದೇವರ ಮಾತನ್ನು ಕೇಳು ಎಂದು ಹೇಳಿದನು. ಮುಂದಿನ ಸಲ ದೇವರು ಅವನನ್ನು ಕರೆದಾಗ ಸಮುವೇಲನು, ""ಇಗೋ ಇದ್ದೇನೆ" ಎಂದು ಹೇಳಿದನು. ದೇವರು ತನ್ನ ರಾಜ್ಯದಲ್ಲಿ ಅದ್ಭುತಕಾರ್ಯಗಳನ್ನು ಮಾಡಲು ಬಯಸುವಾಗ, ದೇವರು ತನ್ನ ದೂತರನ್ನು ಉಪಯೋಗಿಸಿಕೊಳ್ಳುತ್ತಾನೆ ಮತ್ತು ಗಟ್ಟಿಯಾದ ಸ್ವರದಲ್ಲಿ ಮಾತನಾಡುತ್ತಾನೆ ಎಂಬದಾಗಿ ನಾವು ಅಂದುಕೊಳ್ಳುತ್ತೇವೆ. ದೇವರು ಈ ಎರಡೂ ಕಾರ್ಯಗಳನ್ನು ಮಾಡಿದ್ದಾನೆ, ಆದರೆ ಬಹುತೇಕ ಸಮಯಗಳಲ್ಲಿ, ದೇವರು ಸಹಜವಾಗಿ ನಮ್ಮಂಥ ಸಾಧಾರಣ ಜನರನ್ನು

ಉಪಯೋಗಿಸಿಕೊಳ್ಳುತ್ತಾನೆ. ದೇವರು ಕೇವಲ ಸಭಾಪಾಲಕರು, ಮಿಷನರಿಗಳು ಅಥವಾ ಟೀಚರ್ಸ್ ಗಳನ್ನು ಮಾತ್ರವೇ ಉಪಯೋಗಿಸಿಕೊಳ್ಳಲು ಬಯಸುವದಿಲ್ಲ. ನೀವು ಚಿಕ್ಕ ಮಕ್ಕಳಾಗಿದ್ದರೂ ದೇವರು ನಿಮ್ಮನ್ನು ಸಹ ಉಪಯೋಗಿಸಿಕೊಳ್ಳಲು ಬಯಸುವವನಾಗಿದ್ದಾನೆ. ಈಗಾಗಲೇ ನಾವು ಓದಿರುವ ಇಂದಿನ ಕಥೆಯಲ್ಲಿ ದೇವರು ಮಾರ್ಕನನ್ನು ಹೇಗೆ ನೇಮಿಸುತ್ತಾನೆ ಎಂಬದನ್ನು ನೋಡಿಕೊಳ್ಳೋಣ. ಯೇಸು ಕ್ರಿಸ್ತನು ಹೇಳಿರುವದೇನೆಂದರೆ ನನ್ನ ಕುರಿಗಳು (ನೀವು) ನನ್ನ ಸ್ವರಕ್ಕೆ ಕಿವಿಗೊಡುತ್ತವೆ ಮತ್ತು ನನ್ನ ಹಿಂದೆ ಬರುತ್ತವೆ (ಯೋಹಾನ 10:27). ದೇವರು ಸಮುವೇಲನ ಹಾಗೆ ನಿಮ್ಮನ್ನು ಕರೆಯಬೇಕೆಂದರೆ, ಸಭೆಯಲ್ಲಿ ಸಮಯ ಕಳೆಯಿರಿ ಮತ್ತು ಸಾಧ್ಯವಾಗು ಕಡೆಗಳಲ್ಲಿ ಸಹಾಯ ಮಾಡಿರಿ. ಆತನ ಸ್ವರ ಕೇಳಿಸಿಕೊಳ್ಳುವದನ್ನು ಕಲಿತುಕೊಳ್ಳಲು ನಿಮ್ಮ ತಂದೆತಾಯಿಗಳು, ಟೀಚರ್ಸ್ ಗಳು ಮತ್ತು ಸಭಾಪಾಲಕರ ಸಲಹೆಗಳನ್ನು ಕೇಳಿರಿ. ನಂತರ ದೇವರು ನಿಮ್ಮನ್ನು ಕರೆಯುವಾಗ "ಇಗೋ ಇದ್ದೇನೆ" ಎಂದು ಹೇಳಿರಿ ಮತ್ತು ಆತನು ನಿಮಗೆ ಏನು ಹೇಳುವನೋ ಅದನ್ನೆಲ್ಲಾ ಮಾಡಿರಿ. ಸಮುವೇಲನು ದೇವರ ಸಂದೇಶವನ್ನು ಕೇಳಿಸಿಕೊಂಡ ನಂತರ, ರಾತ್ರಿ ನಿದ್ದೆ ಮಾಡಿದನು ಮತ್ತು ಮುಂಜಾನೆ ನಡೆದ ಕಾರ್ಯವನ್ನು ಏಲಿಗೆ ತಿಳಿಸಿದನು. ನೀವು ಊಟಮಾಡುತ್ತಿರುವ ಸಮಯದಲ್ಲಿ ಒಂದುವೇಳೆ ದೇವರು ನಿಮ್ಮನ್ನು ಕರೆದರೆ, ಉದಾಹರಣೆಗೆ, ನೀವು ಬಹಳ ಆತ್ಮೀಕರೆಂದು ತೋರಿಸಿಕೊಳ್ಳಲು ಇತರರಿಗೆ ತೊಂದರೆ ಕೊಡಬೇಡಿರಿ. ನೀವು ಸಮಯ ಮಾಡಿಕೊಂಡು ಪ್ರಾರ್ಥನೆ ಮಾಡಲು ಏಕಾಂತವಾದ ಸ್ಥಳಕ್ಕೆ ಹೋಗಿರಿ. ಇದು ತಮಾಷೆ ಎನಿಸಬಹುದು, ಆದರೆ ದೇವರು ಯಾವ ಸ್ಥಳದಲ್ಲಿ ಬೇಕಾದರೂ ತನ್ನವರೊಂದಿಗೆ ಮಾತನಾಡುತ್ತಾನೆ. ನಂತರ ನೀವು ತಕ್ಕ ಸಮಯದಲ್ಲಿ ನಡೆದ ಕಾರ್ಯಗಳನ್ನು ನಿಮ್ಮ ತಂದೆತಾಯಿಗಳಿಗೆ ಅಥವಾ ಟೀಚರ್ ಗೆ ಹೇಳಬಹುದು. ಸಮುವೇಲನು ತನ್ನ ಜೀವನಪರ್ಯಂತರ ನಂಬಿಗಸ್ತನಾಗಿ ದೇವರ ವಾಕ್ಯಗಳನ್ನು ಜನರಿಗೆ ತಿಳಿಸುತ್ತಿದ್ದನು. ಅವನು ಇಸ್ರಾಯೇಲ್ಯರ ಕಡೆಯ ನ್ಯಾಯಾಧಿಪತಿ ಮತ್ತು ಇಸ್ರಾಯೇಲಿನ ಮೊದಲನೆಯ ಅರಸನನ್ನು ಅಭಿಷೇಕಿಸಲು ದೇವರು ಸಮುವೇಲನನ್ನು ಉಪಯೋಗಿಸಿಕೊಂಡನು.

ದೇವರು ನನ್ನನ್ನು ಕರೆಯುವಾಗ ಸಿದ್ಧನಾಗಿರುವ ಆಯ್ಕೆಯನ್ನು ನಾನು ಮಾಡಿಕೊಳ್ಳುತ್ತೇನೆ.

## ವಿಶ್ಲೇಷಣ ೭



ಅವನು ರಜಾದಿನಗಳ ಸತ್ಯವೇದ ಶಾಲೆಗೆ ಪಾಠಗಳನ್ನು ಕೇಳಿಸಿಕೊಳ್ಳಲು ಹೋಗಿದ್ದನು. ಆದರೆ ಒಂದುದಿನ ಅಲ್ಲಿ ಬಂದ ಒಬ್ಬ ಹುಡುಗ ನಾನು ಯಾರಿಗೂ ಬೇಡವಾದವನಾಗಿದ್ದೇನೆ ಎಂಬದಾಗಿ ಅಳುತ್ತಾ ಮಾತನಾಡುವದನ್ನು ಕೇಳಿಸಿಕೊಂಡನು. ಮಾರ್ಕನು ಆ ಹುಡುಗನಿಗೆ ದೇವರ ವಾಕ್ಯಗಳನ್ನು ತಿಳಿಸಲು ಪ್ರಾರಂಭಿಸಿದನು ಮತ್ತು ದೇವರು ನಿನ್ನನ್ನು ಪ್ರೀತಿಸುತ್ತಾನೆ ಹಾಗು ಯಾವಾಗಲೂ ನಿನ್ನೊಂದಿಗಿರುತ್ತಾನೆ ಎಂದು ಹೇಳಿದನು. ಮಾರ್ಕನು ಆ ಹುಡುಗನನ್ನು ತನ್ನ ಸಭೆಗೆ ಆಹ್ವಾನಿಸಿದನು ಮತ್ತು ಅಂದಿನಿಂದ ಆ ಹುಡುಗ ಮತ್ತು ಅವನ ತಾಯಿ ತಪ್ಪದೆ ಸಭೆಗೆ ಹೋಗುತ್ತಿದ್ದಾರೆ. ದೇವರು ನಿಜವಾಗಿಯೂ ನನ್ನನ್ನು ತನ್ನ ಸೈನ್ಯದಲ್ಲಿ ಸೇರಿಸಿಕೊಂಡಿದ್ದಾನೆ ಎಂಬದು ಮಾರ್ಕನಿಗೆ ಅರ್ಥವಾಯಿತು.

## ಚಟುವಟಿಕೆ ೭

ಕರೆಯುವಿಕೆ



ಸೇವೆ ಮಾಡಲು ದೇವರು ನಿಮ್ಮನ್ನು ಯಾವ ರೀತಿ ಕರೆಯಬಹುದು ಅಥವಾ ನಿಮ್ಮ ವಯಸ್ಸಿನ ಹಾಗೂ ಪರಿಸ್ಥಿತಿಯ ಆಧಾರದ ಮೇರೆಗೆ ಯಾವ ವಿಧದಲ್ಲಿ ದೇವರು ನಿಮ್ಮನ್ನು ಕರೆಯಬಹುದು ಎಂಬದು ನಿಮ್ಮ ಆಲೋಚನೆಯಾಗಿದೆ ಎಂಬದನ್ನು ಒಂದು ಹಾಳೆಯ ಮೇಲೆ ಬರೆಯಿರಿ. ಉದಾಹರಣೆಗಳು: ಸತ್ಯವೇದದ ಮೂಲಕ, ಟೀಚರ್ ಮೂಲಕ ಮಾತನಾಡುವದು, ಸಭೆಯ ಚಟುವಟಿಕೆಯಲ್ಲಿ ಸಹಾಯ ಮಾಡುವದು, ಕಣ್ಣೀರಿನಲ್ಲಿರುವ ಅಥವಾ ತನಗೆ ಯಾವುದೇ ಆದ್ಯತೆಯಿಲ್ಲ ಎಂದು ನೆನೆಸುವ ಅಥವಾ ಯಾರಿಗೂ ನಾನೆಂದರೆ ಇಷ್ಟವಿಲ್ಲ ಎಂದು ಯೋಚಿಸುವ ನಿಮ್ಮ ಜೊತೆಯವರಿಗೆ ಸಹಾಯ ಮಾಡಿರಿ.


## ಟೈಮ್ ಲೈನ್ ೭

**ಸಮುವೇಲನು ಯಾವ ಇಸವಿಯಲ್ಲಿ ಇಸ್ರಾಯೇಲ್ಯರನ್ನು ಮುನ್ನಡೆಸಲು ಪ್ರಾರಂಭಿಸಿದನು? ಉ. ನಮಗೆ ನಿಖರವಾಗಿ ಯಾವ ಇಸವಿ ಎಂದು ಗೊತ್ತಿಲ್ಲ ಆದರೆ ಕ್ರಿ.ಪೂ. 1143 ಎಂದು ಕಲಿಸಲಾಗಿದೆ.**

**ಸಮುವೇಲನು ಯಾವಾಗ ಮೃತಪಟ್ಟನು? ಉ. ನಮಗೆ ನಿಖರವಾದ ವರ್ಷ ಗೊತ್ತಿಲ್ಲ, ಆದರೆ ಕ್ರಿ.ಪೂ 1055 ರಲ್ಲಿ ಮೃತಪಟ್ಟಿರಬಹುದು ಎಂದು ನಮಗೆ ಕಲಿಸಲಾಗಿದೆ.**

## ಒಗಟಿನ ಉತ್ತರಗಳು ೭

| | | | | | | | | | |
|---|---|---|---|---|---|---|---|---|---|
| ಧೇ | ನಂ | ಬಿ | ಗ | ಸ್ತ | ನು | ಳಿ | ದ | ತ್ರಿ | ಸ್ತ |
| ನು | ಯ | ದೇ | ಕ | ಸ್ವ | ತ್ರಿ | ಪ್ರ | ಸಂ | ಇ | ನಿ |
| ಸ್ವ | ರ | ಸ್ರಾ | ಶ | ನು | ವಾ | ದ್ದೆ | ಧೇ | ಸ್ರಾ | ಸಂ |
| ಕ | ತ್ರಿ | ಧೇ | ದ | ದಿ | ಪ | ನ್ಯಾ | ರಾ | ಯೇ | ಡ |
| ರೆ | ದ್ದೆ | ಸ | ಧೇ | ಳಿ | ನಿ | ಯ | ಸ್ವ | ಲ್ | ನು |
| ದ | ರಾ | ಯ | ಮು | ಸ್ರಾ | ಸಂ | ಸ್ಥಾ | ಯ | ಏ | ಕ |
| ನು | ನಿ | ದೇ | ನಿ | ವೇ | ಕ | ಪ | ಲಿ | ಮು | ದೇ |
| ಧೇ | ಳಿ | ಸಂ | ಡ | ಧೇ | ಲ | ಕ | ಧೇ | ದ | ವ |
| ಸ್ತೆ | ಕೇ | ಳಿ | ಸಿ | ಕೊಂ | ಡ | ಮು | ತ್ರಿ | ದ್ದೆ | ರು |
| ತ್ರಿ | ಕ | ನಿ | ಮು | ತೆ | ಯ | ಧೇ | ವಿ | ಯ | ನಿ |
| ಸ | ರಾ | ಧೇ | ನು | ನಿ | ಳಿ | ಪ | ತ್ರಿ | ನು | ಸಿ |





## ಪ್ರಶ್ನೆಗಳು ಮತ್ತು ಉತ್ತರಗಳು ೭


**(ಹಿರಿಯ ವಿದ್ಯಾರ್ಥಿಗಳಿಗೆ)**

1. **ಆದರೆ ನನ್ನಿಂದ ಯಾವ ವ್ಯತ್ಯಾಸ ಸಾಧ್ಯ? (ಒಬ್ಬ ವ್ಯಕ್ತಿ ಏನನ್ನು ಸಾಧಿಸಬಹುದು ಎಂಬದೇ ಅದ್ಭುತವಾದ ವಿಷಯವಾಗಿದೆ. ನಾವು ಚಿಕ್ಕವರಾಗಿ ಕಂಡು ದೊಡ್ಡ ಕಾರ್ಯಗಳನ್ನು ಮಾಡಬಹುದಾಗಿದೆ. ದೊಡ್ಡ ಸಂಖ್ಯೆಗಳು, ಹಸಿವೆಯಲ್ಲಿರುವ ಲಕ್ಷಾಂತರ ಜನರನ್ನು ಮರೆತು ಒಬ್ಬ ವ್ಯಕ್ತಿಯ ಮೇಲೆ ಗಮನಹರಿಸಲು ನಮಗೆ ಸಹಾಯವಾಗುತ್ತದೆ. ನಿಮ್ಮ ಸುತ್ತಮುತ್ತಲಿನಲ್ಲಿರುವವರು ಯಾರಾದರೂ ಅವಶ್ಯಕತೆಯಲ್ಲಿದ್ದಾರೋ? ಒಬ್ಬ ವ್ಯಕ್ತಿಗೆ ಸಹಾಯ ಮಾಡುವದು ಪ್ರಾರಂಭಿಸಲು ನಮಗೆ ಸಹಾಯ ಮಾಡುತ್ತದೆ . . . ನಂತರ ಇನ್ನೊಬ್ಬನು ಮತ್ತು ಇನ್ನೊಬ್ಬನು . . . ಬಹುಬೇಗನೇ ನೀವು ದೊಡ್ಡ ವ್ಯತ್ಯಾಸದ ಭಾಗವಾಗುವಿರಿ!)**

2. ಲೋಕದಲ್ಲಿ ಎಲ್ಲರಿಗೂ ಯಾಕೆ ಹೊಟ್ಟೆ ತುಂಬಾ ಊಟ ಮತ್ತು ಕೈ ತುಂಬಾ ದುಡ್ಡು ಇಲ್ಲ? (ಪರಿಸ್ಥಿತಿಗಳ ಬಗ್ಗೆ ಯೋಚಿಸಲು ನಿಮ್ಮ ವಿದ್ಯಾರ್ಥಿಗಳಿಗೆ ಸಹಾಯ ಮಾಡಿರಿ. ನಾವು ಒಬ್ಬರೊಂದಿಗೊಬ್ಬರು ಹಂಚಿಕೊಳ್ಳುವದನ್ನು ಕಲಿತುಕೊಳ್ಳಬೇಕೆಂದು ದೇವರು ಬಯಸುತ್ತಿರಬಹುದು? ಅದು ಆದಾಮನೊಂದಿಗೆ ಲೋಕದೊಳಗೆ ಪ್ರವೇಶಿಸಿರುವ ಪಾಪದ ಒಂದು ಭಾಗವಾಗಿರಬಹುದು.)
3. ಒಂದುವೇಳೆ ಯಾರಾದರೂ ನನ್ನನ್ನು ದ್ವೇಷಿಸಿದರೆ ಏನು ಮಾಡಬೇಕು? (ನಾವು ಯಾರೊಂದಿಗೂ ಸ್ನೇಹ ಬೆಳೆಸುವದಿಲ್ಲ, ಆದರೆ ದೇವರು ನಮಗೆ ನಿಮ್ಮ ವೈರಿಗಳನ್ನೂ ಪ್ರೀತಿಸಿರಿ ಎಂದು ಹೇಳಿದ್ದಾನೆ. ಯಾರಿಗೆ ಗೊತ್ತು? ದೇವರು ಪ್ರತಿಯೊಬ್ಬನ ವಿಷಯದಲ್ಲಿಯೂ ದೊಡ್ಡ ಆಲೋಚನೆಗಳನ್ನು ಹೊಂದಿದ್ದಾನೆ ಮತ್ತು ನಿಮ್ಮನ್ನು ಉಪಯೋಗಿಸಿಕೊಳ್ಳಲು ಸಹ ಆತನು ಆಲೋಚನೆ ಮಾಡಿದ್ದಾನೆ!)


## ಆಟ ೭

ತೋಳ ಮತ್ತು ಕುರಿ



ಮಕ್ಕಳು ಒಬ್ಬರ ಕೈಗಳನ್ನೊಬ್ಬರು ಹಿಡಿದುಕೊಂಡು ವೃತ್ತವನ್ನು ನಿರ್ಮಿಸಬೇಕು. ಒಂದು ಮಗುವನ್ನು ತೋಳ ಮತ್ತು ಇನ್ನೊಂದು ಮಗುವನ್ನು ಕುರಿ ಎಂದು ನೇಮಿಸಿರಿ. ಕುರಿ ವೃತ್ತದ ಒಳಗೆ ಇರಬೇಕು ಮತ್ತು ತೋಳ ಹೊರಗೆ ಇರಬೇಕು, ಕೈಗಳನ್ನು ಹಿಡಿದುಕೊಂಡಿರುವ ಮಕ್ಕಳು ಕುರಿಯನ್ನು ಹಿಡಿದುಕೊಳ್ಳಲು ತೋಳಕ್ಕೆ ಅವಕಾಶ ಕೊಡಬಾರದು. ವೃತ್ತದೊಳಗೆ ಪ್ರವೇಶಿಸುವ ಮೂಲಕ, ಕೆಳಗಿಂದ ನುಗ್ಗುವ ಮೂಲಕ ಅಥವಾ ಸರಪಣಿಯನ್ನು ಕಡಿಯುವ ಮೂಲಕ ಕುರಿಯನ್ನು ಹಿಡಿಯಲು ತೋಳ ಪ್ರಯತ್ನಿಸುವದು. ಸರಣಿ ಮುರಿಯಲು ಅಥವಾ ತೋಳವನ್ನು ಒಳಗೆ ಅಥವಾ ಹೊರಗೆ ಬಿಡುವ ಇಬ್ಬರು ಮಕ್ಕಳು ವೃತ್ತದಿಂದ ಹೊರಗೆ ಹೋಗಬೇಕು. ಕುರಿ ಮತ್ತು ತೋಳ ವೃತ್ತದೊಳಗೆ ಹೋಗಬಹುದು ಅಥವಾ ಹೊರಗೆ ಬರಬಹುದು.

## ಹಾಜರಾತಿ ೭




ತರಗತಿಯಲ್ಲಿ ಭಾಗವಹಿಸಿದ್ದಕ್ಕೆ ಮಕ್ಕಳಿಗೆ ಇಂದಿನ ಕಾರ್ಡ್ ಕೊಡಿರಿ. ವೀರರ ಆಟವನ್ನು ಆಡಲು ಮತ್ತೊಂದು ಕಾರ್ಡ್ ಪಡೆಯುವ ಸಲುವಾಗಿ ಮುಂದಿನ ವಾರ ತರಗತಿ ಬರುವಂತೆ ಅವರನ್ನು ಪ್ರೋತ್ಸಾಹಪಡಿಸಿರಿ ಮತ್ತು ಅಭಿನಂದಿಸಿರಿ.
ಇಂದಿನ ಕಾರ್ಡ್ ಯಾವುದೆಂದರೆ:
ಸಮುವೇಲನು

## ಹೋಮ್ ವರ್ಕ್ ೭

ಈ ವಾರದ ಹೋಮ್ ವರ್ಕ್ ಏನೆಂದರೆ ಪ್ರತಿದಿನ ಕರುಣೆಯುಳ್ಳ ಕಾರ್ಯವನ್ನು ಮಾಡುವದು, ಉದಾಹರಣೆಗೆ ರಸ್ತೆ ದಾಟಲು ಹಿರಿಯ ನಾಗರೀಕರಿಗೆ ಸಹಾಯ ಮಾಡುವದು, ದಿನಸಿ ಸಾಮಾನುಗಳನ್ನು ಸೂಪರ್ ಮಾರ್ಕೆಟ್ ನಿಂದ ತರುವದು, ಶಾಲೆಯಲ್ಲಿ ಇತರೆ ಮಕ್ಕಳಿಗೆ ಹೋಮ್ ವರ್ಕ್ ಮಾಡಲು ಸಹಾಯ ಮಾಡುವದು, ಇತ್ಯಾದಿ. ಮುಂದಿನ ತರಗತಿಯಲ್ಲಿ ನಿಮ್ಮ ಟೀಚರ್ ಗೆ ನೀವು ಮಾಡಿದ ಕಾರ್ಯಗಳನ್ನು ವಿವರಿಸಿರಿ.

ಓದಿರಿ
ದಿನ 1: 1 ಸಮುವೇಲ 5:1-6
ದಿನ 2: 1 ಸಮುವೇಲ 5:7-12
ದಿನ 3: 1 ಸಮುವೇಲ 6:1-6
ದಿನ 4: 1 ಸಮುವೇಲ 6:7-12
ದಿನ 5: 1 ಸಮುವೇಲ 6:13-16, 7:1

# ೮. ದೇವರು ಸರ್ವಶಕ್ತನು



**ಸತ್ಯವೇದ ಕಥೆ: ಒಡಂಬಡಿಕೆಯ ಮಂಜೂಷ**

**1 ಸಮುವೇಲ 4:1-11, 5:1-6:21**

## ಕಂಠಪಾಠ ವಚನ ೮

"ನಿಮ್ಮ ದೇವರಾದ ಸರ್ವೇಶ್ವರ ದೇವಾದಿದೇವರು, ಸರ್ವೇಶ್ವರಾಧಿ ಸರ್ವೇಶ್ವರ. ಅವರು ಪರಮ ದೇವರೂ ಪರಾಕ್ರಮಿಯೂ ಭಯಂಕರರೂ ಆಗಿದ್ದಾರೆ. ಅವರು ಮುಖದಾಕ್ಷಿಣ್ಯ ನೋಡುವವರಲ್ಲ, ಲಂಚ ತೆಗೆದುಕೊಳ್ಳುವವರಲ್ಲ." ಧರ್ಮೋಪದೇಶಕಾಂಡ 10:17

## ಕಥೆಯ ಅವಶ್ಯಕತೆ ೮



ಯೋಹಾನನು ಒಂದು ದಿನ ಸಭೆಯಲ್ಲಿ ತನ್ನ ಸ್ನೇಹಿತನೊಂದಿಗಿದ್ದನು, ಅವನ ಸ್ನೇಹಿತನು ತಲೆಗೆ ಏಟು ಬಿದ್ದದ್ದರಿಂದ ಬಹಳವಾಗಿ ಅಳುವವನಾಗಿದ್ದನು. ಆಗ ಯೋಹಾನನು ಅವನ ತಲೆನೋವು ಹೋಗಲೆಂದು ಪ್ರಾರ್ಥನೆ ಮಾಡೋಣ ಎಂಬದಾಗಿ ಅಂದುಕೊಂಡನು. ಅವನು ಸ್ವಲ್ಪ ಹೊತ್ತು ಪ್ರಾರ್ಥನೆ ಮಾಡಿದನು, ಆಗ ಏನಾಗಿರಬಹುದು ಹೇಳಿರಿ?

ಅವನ ಸ್ನೇಹಿತನಿಗೆ ತಲೆನೋವು ಸಂಪೂರ್ಣವಾಗಿ ವಾಸಿಯಾಯಿತು! ಆ ದಿನದಿಂದ ಅನಾರೋಗ್ಯದಲ್ಲಿರುವವರನ್ನು ಗುಣಪಡಿಸುವ ಶಕ್ತಿ ತನಗಿದೆ ಎಂಬದಾಗಿ ಅಂದುಕೊಳ್ಳಲು ಯೋಹಾನನು ಪ್ರಾರಂಭಿಸಿದನು ಆದರೆ ಗುಣಪಡಿಸಿದನು ತಾನಲ್ಲ ಬದಲಾಗಿ ದೇವರು ಎಂಬದನ್ನೇ ಮರೆತುಹೋದನು. ಅವನು ಶಾಲೆಯಲ್ಲಿ ತನ್ನನ್ನು ಬಹಳವಾಗಿ ಹೆಚ್ಚಿಸಿಕೊಳ್ಳುತ್ತಿದ್ದನು.

## ಮುಖ್ಯ ಪಾಠ ೮

ದೇವರು ಅದ್ಭುತ ಕಾರ್ಯಗಳನ್ನು ಮಾಡಲು ಜನರನ್ನು ಉಪಯೋಗಿಸಿಕೊಳ್ಳಲು ಬಯಸುತ್ತಾನೆ ಎಂಬದನ್ನು ನಾವು ಕಳೆದ ವಾರ ಕಲಿತುಕೊಂಡೆವು. ಆತನಿಗೆ ಜನರು ಅವಶ್ಯವಿಲ್ಲ ಎಂಬದನ್ನು ಈ ವಾರ ಕಲಿತುಕೊಳ್ಳೋಣ. ಹಳೆಯ ಕಾಲದಲ್ಲಿ ದೇವರ ಪ್ರಸನ್ನತೆಯು ಮಂಜೂಷ ಎಂಬ ದೊಡ್ಡ ಪೆಟ್ಟಿಗೆಯಲ್ಲಿ ಇಸ್ರಾಯೇಲ್ ಜನರ ಮಧ್ಯದಲ್ಲಿ ವಾಸವಾಗಿತ್ತು. ಮಂಜೂಷದ ಒಳಗೆ ದಶಾಜ್ಞೆಗಳಿದ್ದ ಹಲಗೆಗಳು, ಆರೋನನ ಕೋಲು ಮತ್ತು ಇಸ್ರಾಯೇಲ್ಯರು ಅರಣ್ಯದಲ್ಲಿ ಸೇವಿಸಿದ ಪರಲೋಕದ ರೊಟ್ಟಿ ಅಥವಾ ಮನ್ನಾ ತುಂಬಿದ ಬಟ್ಟಲು ಇತ್ತು. ಕಳೆದ ವಾರ ನಾವು ಕಲಿತುಕೊಂಡ ಸಮುವೇಲನನ್ನು ದೇವರು ಕರೆದ ನಂತರ, ಇಸ್ರಾಯೇಲ್ಯರು ಫಿಲಿಷ್ಟಿಯರಿಗೆ ವಿರುದ್ಧ ದೊಡ್ಡ ಯುದ್ಧದಲ್ಲಿ ಕಾಣಿಸಿಕೊಂಡರು. ಇಸ್ರಾಯೇಲ್ಯರು ಮೊದಲನೆಯ ಯುದ್ಧವನ್ನು ಸೋತುಹೋದರು, ಆದ್ದರಿಂದ ದೇವರ ಪ್ರಸನ್ನತೆಯಿರುವ ಮಂಜೂಷವನ್ನು ಜೊತೆಯಲ್ಲಿ ತೆಗೆದುಕೊಂಡು ಬಂದರೆ ತಮಗೆ ಜಯ ದೊರೆಯುವದೆಂದು ಅದನ್ನು ತೆಗೆದುಕೊಂಡು ಬಂದರು. ಇಂದಿನ ಕಥೆಯಲ್ಲಿ ಓದಿದ ಪ್ರಕಾರ ಯೋಹಾನನ ಹಾಗೆ ಕೆಲವೊಮ್ಮೆ ನಾವು ನಾವಂದುಕೊಳ್ಳುವ ರೀತಿಯಲ್ಲಿಯೇ ದೇವರು ಕಾರ್ಯಮಾಡಬೇಕೆಂದು ಆಲೋಚಿಸುತ್ತೇವೆ.

ಆದರೆ ದೇವರು ಸೂಚನೆಗಳಿಗಾಗಿ ಕಾಯುತ್ತಾ ಬಾಟಲಿಯೊಳಗೆ ಕುಳಿತುಕೊಂಡಿಲ್ಲ. ದೇವರು ಸರ್ವಶಕ್ತನು, ಆತನು ಎಲ್ಲಾ ಕಡೆಗಳಲ್ಲಿಯೂ ಇದ್ದಾನೆ ಮತ್ತು ಎಲ್ಲವನ್ನೂ ಬಲ್ಲವನಾಗಿದ್ದಾನೆ ಹಾಗೂ ತನ್ನ ಉದ್ದೇಶಗಳನ್ನು
ನೆರವೇರಿಸುತ್ತಾನೆ. ಯುದ್ಧದ ಎರಡನೆಯ ದಿನದಲ್ಲಿ, ಇಸ್ರಾಯೇಲ್ಯರು ಮತ್ತೆ ಯುದ್ಧದ್ಲಲಿ ಸೋತುಹೋದರು ಮತ್ತು ಫಿಲಿಷ್ಟಿಯರು ಮಂಜೂಷವ್ವನು ವಶಪಡಿಸಿಕೊಂಡರು. ಇಸ್ರಾಯೇಲ್ಯರು ಬಹಳವಾಗಿ ಹೆದರಿಕೊಂಡರು. ಕೆಲವೊಮ್ಮೆ ನಾವು ದೇವರ ಮರ್ಯಾದೆಯ ಬಗ್ಗೆ ಚಿಂತಿಸುತ್ತೇವೆ, ಆದರೆ ದೇವರು ಉನ್ನತನಾಗಿದ್ದಾನೆ ಮತ್ತು ತನ್ನ ಘನತೆಯನ್ನು ತಾನೇ ಕಾಪಾಡಿಕೊಳ್ಳುತ್ತಾನೆ. ಫಿಲಿಷ್ಟಿಯರು ಮಂಜೂಷವನ್ನು ತೆಗೆದುಕೊಂಡು ಹೋಗಿ

ತಮ್ಮ ದಾಗೋನ್ ದೇವರ ವಿಗ್ರಹದ ಪಾದದ ಬಳಿಗೆ ಇಟ್ಟರು. ಆದರೆ ಮುಂಜಾನೆ ವಿಗ್ರಹವು ಮಂಜೂಷದ ಮುಂದೆ ಶಿರಬಾಗಿಸಿ ಬಿದ್ದುಹೋಗಿತ್ತು. ಅವರು ಮತ್ತೆ ಅದನ್ನು ನಿಲ್ಲಿಸಿದರು, ಆದರೆ ಮಾರಣೆಯ ದಿನ ನೋಡುವಾಗ ಅದು ಹಾಗೆಯೇ ಮಂಜೂಷದ ಎದುರು ಬಿದ್ದು ಹೋಗಿತ್ತು, ಈ ಸಲ ಅದರ ಕೈಕಾಲುಗಳನ್ನು ಕಡಿದು ಹೋಗಿದ್ದವು. ಆ ಪಟ್ಟಣದಲ್ಲಿಯೂ ದೊಡ್ಡ ಕಳವಳವುಂಟಾಯಿತು. ದೇವರು ಸರ್ವಶಕ್ತನಾಗಿದ್ದಾನೆ ಮತ್ತು ತನ್ನ ಯುದ್ಧಗಳನ್ನು ತಾನೇ ಹೋರಾಡುತ್ತಾನೆ. ಫಿಲಿಷ್ಟಿಯರು ಮಂಜೂಷವನ್ನು ಮೂರು ವಿವಿಧ ಪಟ್ಟಣಗಳಿಗೆ ತೆಗೆದುಕೊಂಡು ಬಂದರು ಆದರೆ ಆ ಮೂರು ಸ್ಥಳಗಳಲ್ಲಿ ಜನರು ಹೆದರಿಕೊಂಡರು. ನಂತರ ಅವರು ಮಂಜೂಷದ ಜೊತೆಯಲ್ಲಿ ಸ್ವಲ್ಪ ಬಂಗಾರವನ್ನು ಎತ್ತಿನ ಗಾಡಿಯಲ್ಲಿ ಇಟ್ಟರು, ಎತ್ತುಗಳು ಮಂಜೂಷವಿದ್ದ ಬಂಡಿಯನ್ನು ಇಸ್ರಾಯೇಲಿಗೆ ತೆಗೆದುಕೊಂಡು ಬಂದವು. ಜನರ ಸಹಾಯವಿಲ್ಲದೆ ದೇವರೇ ಎತ್ತುಗಳಿಗೆ ಮಾರ್ಗದರ್ಶನ ನೀಡಿದನು. ಮಂಜೂಷವು ಇಸ್ರಾಯೇಲಿಗೆ ಹಿಂದಿರುಗಿದಾಗ, ಜನರು ಸಂತೋಷಿಸಿದರು ಆದರೆ ಕೆಲವು ಅದರೊಳಗೆ ಇಣಿಕಿ ನೋಡಿದ್ದರಿಂದ ತಮ್ಮ ಪ್ರಾಣ ಕಳೆದುಕೊಂಡರು. ಯೇಸು ಕ್ರಿಸ್ತನು ಹೇಳಿರುವದೇನೆಂದರೆ ನಾವು ದೇವರೊಬ್ಬನಿಗೆ ಮಾತ್ರವೇ ಭಯಪಡುವವರಾಗಿರಬೇಕು-ಆ ದೇವರು ನಮಗೆ ತಂದೆಯಾಗಿದ್ದು ನಮ್ಮ ಕುರಿತು ಆತನು ಸಂಪೂರ್ಣವಾದ ಮಾಹಿತಿಯುಳ್ಳವನಾಗಿದ್ದಾನೆ, ನಮ್ಮ ತಲೆ ಕೂದಲು ಎಷ್ಟಿವೆ ಎಂಬದೂ ಆತನಿಗೆ ಗೊತ್ತಿದೆ. ಆತನು ನಮ್ಮನ್ನು ಪ್ರೀತಿಸುತ್ತಾನೆ ಮತ್ತು ಪೋಷಿಸುತ್ತಾನೆ. ನಾವು ಯಾವುದರ ಬಗ್ಗೆಯೂ ಚಿಂತಿಸುವ ಅವಶ್ಯಕತೆಯಿಲ್ಲ. ಹಳೆಯ ಒಡಂಬಡಿಕೆಯಲ್ಲಿ ದೇವರ ಪ್ರಸನ್ನತೆಯು ಮಂಜೂಷ ಎಂಬದಾಗಿ ಕರೆಯಲ್ಪಡುವ ಪೆಟ್ಟಿಗೆಯಲ್ಲಿ ನೆಲೆಯಾಗಿತ್ತು. ಈಗ ಯೇಸು ಕ್ರಿಸ್ತನ ನಿಮಿತ್ತ, ದೇವರ ಪ್ರಸನ್ನತೆ ನಮ್ಮ ಹೃದಯಗಳನ್ನು ತುಂಬಿಕೊಳ್ಳುತ್ತದೆ **(1 ಕೊರಿಂಥ 6:19)** ಯೇಸು ಕ್ರಿಸ್ತನು ಮಂಜೂಷದ ಒಳಗಿರುವ ಕಾರ್ಯಗಳನ್ನು ನೋಡಿಕೊಳ್ಳುವವನಾಗಿದ್ದಾನೆ-ಯೇಸು ಕ್ರಿಸ್ತನು ಆ ಹಲಿಗೆಗಳ ಹಾಗೆ ಧರ್ಮಶಾಸ್ತ್ರವನ್ನು ನೆರವೇರಿಸಿದನು, ಆರೋನನ ಕೋಲು ಪ್ರತಿನಿಧಿಸಿದ ಹಾಗೆ ಆತನು ನಮ್ಮ ಶಾಶ್ವತವಾದ ಯಾಜಕನಾಗಿದ್ದಾನೆ ಮತ್ತು ಪರಲೋಕದ ಮನ್ನಾದಂತೆ ಆತನು ನಮ್ಮ ಅನುದಿನದ ಆಹಾರವಾಗಿದ್ದಾನೆ. ನಿಮ್ಮ ಹೃದಯವನ್ನು ಪರೀಕ್ಷಸಕೊಳ್ಳಿರಿ. ನೀವು ಯೇಸು ಕ್ರಿಸ್ತನಲ್ಲಿ ನಂಬಿಕೆಯನ್ನಿಡುವಾಗ, ನೀವು ದೇವರ ಮಂಜೂಷದ ಹಾಗಾಗುವಿರಿ! ನಮ್ಮ ಸರ್ವಶಕ್ತನಾದ ದೇವರು ಬಂದು ನಿಮ್ಮೊಳಗೆ ವಾಸಿಸತ್ತಾನೆ ಮತ್ತು ನೀವು ಹೋಗುವ ಸ್ಥಳಗಳಿಗೆಲ್ಲಾ ಬರುತ್ತಾನೆ.

ದೇವರು ಸರ್ವಶಕ್ತನಾಗಿದ್ದಾನೆ ಎಂದು ನಾನು ನಂಬುತ್ತೇನೆ ಮತ್ತು ಆತನಲ್ಲಿ ಭಯಭಕ್ತಿಯುಳ್ಳವನಾಗಿ ನಡೆದುಕೊಳ್ಳುತ್ತೇನೆ. ಯೇಸು ಕ್ರಿಸ್ತನನ್ನು ನನ್ನ ಅರಸನನ್ನಾಗಿ ಮಾಡಿಕೊಳ್ಳುವ ಆಯ್ಕೆ ಮಾಡಿಕೊಳ್ಳುತ್ತೇನೆ ಮತ್ತು ಆತನಲ್ಲಿ ಭರವಸೆಯಿಡುತ್ತೇನೆ ಹಾಗೂ ಯಾವುದರ ಬಗ್ಗೆಯೂ ಚಿಂತಿಸುವದಿಲ್ಲ.

## ವಿಶ್ಲೇಷಣ ಲ

ಒಂದುದಿನ ಅವನ ಶಾಲೆಯಲ್ಲಿದ್ದ ಹುಡುಗನಿಗೆ ಕಿವಿ ನೋವು ಉಂಟಾಯಿತು. ನಾನು ನಿನಗಾಗಿ ಪ್ರಾರ್ಥಿಸುತ್ತೇನೆ, ನಿನಗೆ ಕೂಡಲೇ ಗುಣವಾಗುವದು ಎಂಬದಾಗಿ ಯೋಹಾನನು ಅವನಿಗೆ ಹೇಳಿದನು. ಯೋಹಾನನು ಅವನಿಗಾಗಿ ಪ್ರಾರ್ಥಿಸಿದನು ಆದರೆ ಗುಣವಾಗಲಿಲ್ಲ. ಯೋಹಾನನಿಗೆ ಬಹಳ ಬೇಸರವಾಯಿತು; ಅವನು ತನ್ನ ಸಂಡೇ ಸ್ಕೂಲ್ ಟೀಚರ್ ಜೊತೆಯಲ್ಲಿ ಮಾತನಾಡಿದನು ಮತ್ತು ಏನಾಯಿತು ಎಂಬದನ್ನು ಹೇಳಿದನು. ಬಿಡುಗಡೆಯ ಶಕ್ತಿ ದೇವರಿಂದ ಮಾತ್ರವೇ ಬರುತ್ತದೆ ಎಂಬದನ್ನು ಟೀಚರ್ ಅವನಿಗೆ ವಿವರಿಸಿದರು.



## ಚಟುವಟಿಕೆ ಲ

ವಚನಗಳು

ಕೆಳಗಿನ ಚಿತ್ರದಲ್ಲಿ ಕೊಡಲಾಗಿರುವಂಥ ಹಾಳೆಯನ್ನು ಪ್ರತಿಯೊಬ್ಬ ಮಗುವಿಗೆ ಕೊಡಿರಿ. ಹಾಳೆಯನ್ನು ಐದು ತುಂಡಾಗಿ ಕತ್ತರಿಸಿರಿ ಮತ್ತು ದೇವರ ಪ್ರಸನ್ನತೆ ಹಾಗೂ ಶಕ್ತಿಯ ಬಗ್ಗೆ ಮಾತನಾಡುವ ವಾಕ್ಯಗಳನ್ನು ಬರೆದು ಕೊಡಿರಿ, ಉದಾಹರಣೆಗೆ ಕೀರ್ತನೆ **23:1; ಮಾರ್ಕ 10:27** ಇತ್ಯಾದಿ.


| 1 | 2 | 3 | 4 | 5 |
|---|---|---|---|---|
| | | | | |

## ಟೈಮ್ ಲೈನ್ ಲ

**ಫಿಲಿಷ್ಟಿಯರು ಯಾವ ಇಸವಿಯಲ್ಲಿ ಒಡಂಬಡಿಕೆಯ ಮಂಜೂಷವನ್ನು ವಶಪಡಿಸಿಕೊಂಡರು? ಉ. ನಮಗೆ ನಿಖರವಾದ ವರ್ಷ ಗೊತ್ತಿಲ್ಲ, ಆದರೆ ಕ್ರಿ.ಪೂ. 1142 ಎಂದು ನಮಗೆ ಕಲಿಸಲಾಗಿದೆ.**

## ಒಗಟಿನ ಉತ್ತರಗಳು ಲ

| | | | | | | | | | | |
|---|---|---|---|---|---|---|---|---|---|---|
| ಜ್ಞೆ | ಫಿ | ಳು | ಗ | ಸು | ಹ | ಟ್ಟಿ | ಜ್ಞೆ | ಲಿ | ಮಂ | ಳು |
| ಹ | ಸ | ವಿ | ಸು | ಫಿ | ಚಂ | ಯ | ನ್ನಾ | ಜೂ | ಬ | ಎ |
| ತ | ರ್ವ | ಚಂ | ಳು | ಯ | ಕೋ | ಳು | ಪ | ಗ | ಸು | ತ್ತಿ |
| ಚಂ | ಶ | ಶ | ರ್ವ | ಲು | ಪ | ಗ | ಮ | ವಿ | ಜ್ಞೆ | ನ |
| ಲಿ | ಕ್ತ | ಫಿ | ಟ್ಟಿ | ಕ್ತ | ಶ | ಜ್ಞೆ | ರ್ವ | ರಿ | ಬ | ಗಾ |
| ಯ | ನು | ಜ್ಞೆ | ಲಿ | ನು | ಹ | ಆ | ಸ | ದೇ | ಜ್ಞೆ | ಡಿ |
| ಸು | ಜ್ಞೆ | ಪ | ಫಿ | ಷ್ಟಿ | ಗಾ | ಯ | ಬ | ವ | ಚಂ | ಫಿ |
| ಬ | ಟ್ಟಿ | ಅ | ವಿ | ಧೇ | ಯ | ತ | ಳು | ಟ್ಟಿ | ರ | ಯ |
| ಗ | ಳು | ಟ್ಟಿ | ಚಂ | ವಿ | ತ್ತಿ | ರು | ವ | ದೇ | ಶ | ಭ |
| ನ್ನಾ | ಯ | ದ | ಹೃ | ರ್ವ | ಜ್ಞೆ | ಹ | ಗ | ನ್ನಾ | ಮ | ಲಿ |





## ಪ್ರಶ್ನೆಗಳು ಮತ್ತು ಉತ್ತರಗಳು ಲ

(ಹಿರಿಯ ವಿದ್ಯಾರ್ಥಿಗಳಿಗೆ)


1. ಸರ್ವಶಕ್ತನು, ಉನ್ನತನು ಆಗಿರುವ ದೇವರು ನನ್ನ ಸ್ನೇಹಿತನಾಗಲು ಹೇಗೆ ಸಾಧ್ಯ? (ದೇವರು ಅನೇಕ ಆಯಾಮಗಳನ್ನು ಹೊಂದಿದ್ದಾನೆ. ನಾವು ಆತನಲ್ಲಿ ಭಯಭಕ್ತಿಯುಳ್ಳವರಾಗಿರಬೇಕು, ಆತನು ನಮ್ಮನ್ನು ಪ್ರೀತಿಸುತ್ತಾನೆ ಎಂದು ತಿಳಿಯುವದು ಉತ್ತಮವಾದ ಕಾರ್ಯವಾಗಿದೆ. ದೇವರು ನಮ್ಮ ತಲೆಯಲ್ಲಿ ಎಷ್ಟು ಕೂದಲಿವೆ ಎಂಬದು ಗೊತ್ತಿದೆ ಎಂದು ಸತ್ಯವೇದ ಹೇಳುತ್ತದೆ; ಆತನು ನಮ್ಮ ಕುರಿತು ಪ್ರತಿಯೊಂದು ಮಾಹಿತಿಯನ್ನೂ ಬಲ್ಲವನಾಗಿದ್ದಾನೆ.)
2. ದೇವರು ದೂರ ಇದ್ದಾನೆ ಎಂದು ನನಗೆ ಯಾಕೆ ಅನ್ನಿಸುತ್ತದೆ? (ಪ್ರಾರಂಭದಿಂದಲೂ, ನಂಬಿಕೆ ದೇವರಿಗೆ ಬಹಳ ಪ್ರಾಮುಖ್ಯವಾದ ಸಂಗತಿಯಾಗಿದೆ. ದೇವರನ್ನು ನೋಡಲು ಆಗದಿದ್ದರೂ ನಾವು ಆತನಲ್ಲಿ ನಂಬಿಕೆಯಿಡಬೇಕೆಂದು ಆತನು ಬಯಸುತ್ತಾನೆ. ನಾವು ನಮ್ಮ ಕುರಿತು ಯಾವುದೇ ಯೋಚನೆಯಿಲ್ಲದೆ ಸರಿಯಾದ ಕಾರ್ಯಗಳನ್ನು ಮಾತ್ರವೇ ಮಾಡುವವರಾಗಿರಬೇಕು ಎಂಬ ಯೋಚನೆಯಿಂದಲೇ ಆತನು ನಮ್ಮನ್ನು ರೋಬೋಟ್ ಗಳಾಗಿ ಮಾಡಲಿಲ್ಲ ಅನ್ನಿಸುತ್ತದೆ. ದೇವರು ಯಾರಾಗಿದ್ದಾನೆ ಎಂಬದನ್ನು ಒಂದುವೇಳೆ ನಾವು ತಿಳಿದುಕೊಂಡರೆ ನಾವೆಲ್ಲರೂ ಆತನೆದುರಿನಲ್ಲಿ ಮೊಣಕಾಲೂರುತ್ತೇವೆ. ಕೆಲವೊಮ್ಮೆ ದೇವರನ್ನು ನೋಡಲು ಆಗುವದಿಲ್ಲ, ಆತನು ಬಹಳ ದೂರದಲ್ಲಿದ್ದಾನೆ ಎಂದು ನಮಗೆ ಅನ್ನಿಸುತ್ತದೆ, ಆದರೆ ದೇವರು ನಮ್ಮ ಹೃದಯಗಳನ್ನು ನೋಡುತ್ತಾನೆ ಮತ್ತು ನಿಜವಾಗಿಯೂ ಯಾರಲ್ಲಿ ನಂಬಿಕೆಯಿದೆ ಎಂದು ತಿಳಿದುಕೊಳ್ಳುತ್ತಾನೆ.)
3. ಲೋಕ ಖಂಡಿತವಾಗಿಯೂ ಕೊನೆಗೊಳ್ಳುತ್ತದೆಯೇ? (ಈ ವಿಷಯದ ಬಗ್ಗೆ ನಿಮ್ಮ ವಿದ್ಯಾರ್ಥಿಗಳೊಂದಿಗ ಮಾತನಾಡುತ್ತಾ, ಹೌದು ಎಂಬದಾಗಿ ಮುಕ್ತಾಯಗೊಳಿಸಿರಿ. ಒಂದುವೇಳೆ ನಾವು ನಿಜವಾಗಿಯೂ ಸತ್ಯವೇದವನ್ನು ನಂಬುವದಾದರೆ, ಲೋಕವು ಖಂಡಿತವಾಗಿಯೂ ಕೊನೆಗೊಳ್ಳುತ್ತದೆ ಎಂದು ಅದರಂದ ತಿಳಿದುಕೊಳ್ಳಬಹುದು.)



## ಆಟ ಲ

ಬಿಸಿ ಆಲೂಗಡ್ಡೆ

ವಿಧಾರ್ಥಿಗಳೆಲ್ಲರೂ ಸೇರಿ ವೃತ್ತವನ್ನು ಮಾಡಬೇಕು. ಹಾಡು ಪ್ರಾರಂಭವಾಗುವಾಗ ಚೆಂಡನ್ನು ಒಬ್ಬರಿಂದ ಒಬ್ಬರಿಗೆ ಕೊಡುತ್ತಾ ಹೋಗಬೇಕು. ಹಾಡು ನಿಲ್ಲುವಾಗ ಯಾವ ಮಗುವಿನ ಕೈಯಲ್ಲಿ ಚೆಂಡು ಇರುತ್ತದೆಯೋ ಆ ಮಗು ದೇವರು ತನ್ನ ಜೀವಿತದಲ್ಲಿ ಮಾಡಿರುವ ಕಾರ್ಯಗಳ ಬಗ್ಗೆ ಸಾಕ್ಷಿ ಹೇಳಬೇಕು. (ಉದಾಹರಣೆಗೆ, ತನಗೆ ತೊಂದರೆ ಕೊಡುತ್ತಿದ್ದ ಮಗುವಿನಿಂದ ದೇವರು ಅವನನ್ನು ಕಾಪಾಡಿರಬಹುದು ಅಥವಾ ದೇವರು ಆಹಾರ, ಹಣ ಇತ್ಯಾದಿ ವಿಷಯಗಳನ್ನು ಒದಗಿಸಿರಬಹುದು.)




## ಹಾಜರಾತಿ ಲ

ತರಗತಿಯಲ್ಲಿ ಭಾಗವಹಿಸಿದ್ದಕ್ಕೆ ಮಕ್ಕಳಿಗೆ ಇಂದಿನ ಕಾರ್ಡ್ ಕೊಡಿರಿ. ವೀರರ ಆಟವನ್ನು ಆಡಲು ಮತ್ತೊಂದು ಕಾರ್ಡ್ ಪಡೆಯುವ ಸಲುವಾಗಿ ಮುಂದಿನ ವಾರ ತರಗತಿ ಬರುವಂತೆ ಅವರನ್ನು ಪ್ರೋತ್ಸಾಹಪಡಿಸಿರಿ ಮತ್ತು ಅಭಿನಂದಿಸಿರಿ.
ಇಂದಿನ ಕಾರ್ಡ್ ಯಾವುದೆಂದರೆ:
ಒಡಂಬಡಿಕೆಯ ಮಂಜೂಷ

## ಹೋಮ್ ವರ್ಕ್ ಲ

ಇಂದಿನ ನಿಮ್ಮ ಹೋಮ್ ವರ್ಕ್ ಏನೆಂದರೆ ಖಾಲಿಯಾಗಿರುವ ಬೆಂಕಿ ಪಟ್ಟಣ ಅಥವಾ ಬೇರೆ ಯಾವುದಾದರೂ ಚಿಕ್ಕ ಡಬ್ಬಿಯನ್ನು ನೀವು ಹುಡುಕಬೇಕು. ಅದನ್ನು ಅಲಂಕರಿಸಬೇಕು. ಹಾಳೆಯನ್ನು ತುಂಡಾಗಿ ಕತ್ತರಿಸಿ ಅವುಗಳ ಮೇಲೆ ದೇವರ ವಾಕ್ಯಗಳನ್ನು ಬರೆಯಿರಿ, ಅದನ್ನು ಚಿಕ್ಕ ಡಬ್ಬಿಯೊಳಗೆ ಹಾಕಿರಿ ಮತ್ತು ನಿಮ್ಮ ಜೇಬಿನೊಳಗ ಇಟ್ಟುಕೊಳ್ಳಿರಿ. ನಿಮಗ ಯಾವಾಗಲಾದರೂ ತೊಂದರೆಗಳು ಎದುರಾದರೆ, ಆ ವಾಕ್ಯಗಳನ್ನು

ಓದಬಹುದು. ಆಗ ದೇವರ ವಾಕ್ಯವು ನಿಮಗೆ ಸಹಾಯ ಮಾಡುತ್ತದೆ ಮತ್ತು ನಿಮಗೆ ಬೇಕಾದ ಆದರಣೆಯನ್ನು ಕೊಡುತ್ತದೆ. ಮುಂದಿನ ತರಗತಿಗೆ ಬರುವಾಗ ಆ ಚಿಕ್ಕ ಡಬ್ಬಿಯನ್ನು ತೆಗೆದುಕೊಂಡು ಬನ್ನಿರಿ ಮತ್ತು ನಿಮ್ಮ ಟೀಚರ್ ಗೆ ತೋರಿಸಿರಿ.

ಓದಿರಿ

ದಿನ **1: 1** ಸಮು **8:4-11,17-22**

ದಿನ **2: 1** ಸಮು **9:1-9**

ದಿನ **3: 1** ಸಮು **9:25-10:2**

ದಿನ **4: 1** ಸಮು **10:9-11,17-25**

ದಿನ **5: 1** ಸಮು **13:1-14**

# ೯. ದೇವರ ಚಿತ್ತ



**ಸತ್ಯವೇದ ಕಥೆ: ಅರಸನಾದ ಸೌಲನು**

**1 ಸಮುವೇಲ 8:4-21, 9:15-10:1, 10:20-25, 13:5-14, 15:1-31**

## ಕಂಠಪಾಠ ವಚನ ೯

"ನೀನೆನ್ನ ದೇವರು; ಕಲಿಸೆನಗೆ ನಡೆಯಲು ನಿನ್ನ ಚಿತ್ತದಂತೆ। ನಿನ್ನ ಶುಭಾತ್ಮ ನೆರವಾಗಲಿ ನಾ ಸಮಹಾದಿಯಲಿ ನಡೆವಂತೆ ॥" ಕೀರ್ತನೆಗಳು 143:10

## ಕಥೆಯ ಅವಶ್ಯಕತೆ ೯



ರಾಜು ಬಹಳ ಬೇಸರದಲ್ಲಿದ್ದಾನೆ ಯಾಕಂದರೆ ಅವನ ತಂದೆ ಅವನಿಗೆ ಹೊರಗೆ ಹೋಗಲು ಬಿಡುವದಿಲ್ಲ ಮತ್ತು ಒಂದುವೇಳೆ ಅವನೇನಾದರೂ ಅಕ್ಕಪಕ್ಕದ ಮನೆಯ ಹುಡುಗರೊಂದಿಗೆ ಆಡಲು ಹೋದರೆ ಶಿಕ್ಷೆ ಕೊಡುತ್ತಿದ್ದರು. ಪಕ್ಕದ ಮನೆಯ ಹುಡುಗರ ಸ್ವಭಾವ ಸರಿ ಇಲ್ಲ ಎಂಬದು ರಾಜುವಿಗೆ ಚೆನ್ನಾಗಿ ಗೊತ್ತಿತ್ತು. ನಂತರ ಒಂದು ದಿನ ರಾಜು ತನ್ನ ಸಭಾಪಾಲಕರ ಜೊತೆ ಮಾತನಾಡುತ್ತಾ, ನನ್ನ ಅಪ್ಪ ಒಳ್ಳೆಯವರಲ್ಲ ಅವರಿಗೆ ವಿಧೇಯನಾಗಲು ನನಗೆ ಇಷ್ಟವಿಲ್ಲ ಎಂಬದಾಗಿ ಹೇಳಿದನು. ಆಗ ಸಭಾಪಾಲಕರು ಅವನಿಗೆ ಕೇಳಿದ್ದೇನೆಂದರೆ, "ನೀನು ಯಾಕೆ ಹೀಗೆ ಹೇಳುತ್ತಿರುವೆ?" ಅದಕ್ಕೆ ರಾಜು ಹೇಳಿದ್ದೇನೆಂದರೆ, "ಅವರು ನನ್ನನ್ನು ಹೊರಗೆ ಆಡಲು ಬಿಡುವದಿಲ್ಲ, ಒಂದುವೇಳೆ ಹೋದರೆ ಶಿಕ್ಷೆ ಕೊಡುತ್ತಾರೆ."

## ಮುಖ್ಯ ಪಾಠ ೯

ದೇವರು ಸರ್ವಶಕ್ತನು ಮತ್ತು ತನ್ನ ಚಿತ್ತದಂತೆ ಕಾರ್ಯಮಾಡಲು ಆತನು ಯೋಜನೆಯುಳ್ಳವನಾಗಿದ್ದಾನೆ ಎಂಬದನ್ನು ನಾವು ಕಳೆದ ವಾರ ಕಲಿತುಕೊಂಡಿದ್ದೇವೆ. ಇಂದು ನಾವು ಸೌಲ ಎಂಬ ವ್ಯಕ್ತಿಯ ಬಗ್ಗೆ ಮತ್ತು ದೇವರ ಚಿತ್ತವನ್ನು ಬದಲಾಯಿಸಲು ಅಥವಾ ಅದಕ್ಕೆ ಅವಿಧೇಯರಾಗಿ ನಡೆದುಕೊಳ್ಳುವಾಗ ಏನಾಗುತ್ತದೆ ಎಂಬದರ ಬಗ್ಗೆ ಕಲಿತುಕೊಳ್ಳೋಣ. ಆಗಿನ ಕಾಲದಲ್ಲಿ ಇಸ್ರಾಯೇಲ್ಯರಿಗೆ ಅರಸನಿರಲಿಲ್ಲ ಮತ್ತು ಸಮುವೇಲನು ಇಸ್ರಾಯೇಲ್ಯರ ನಾಯಕನಾಗಿದ್ದನು. ಇಸ್ರಾಯೇಲ್ಯರು ಸಮುವೇಲನ ಬಳಿಗೆ ಬಂದು ತಮ್ಮ ಸುತ್ತಮುತ್ತಲ ಜನಾಂಗಗಳ ಹಾಗೆ ತಮಗೂ ಅರಸನು ಬೇಕೆಂದು ಕೇಳಿಕೊಂಡರು. ನಾವು ಸುಲಭವಾಗಿ ನಮ್ಮ ಸುತ್ತಮುತ್ತಲ ಜನರನ್ನು ಗಮನಿಸಿ ಅವರಿಗಿರುವದು ನಮಗೂ ಬೇಕೆಂದು ಬಯಸುವವರಾಗುತ್ತೇವೆ. ನಾವು ಹೋಲಿಕೆಗಳನ್ನು ಮಾಡುವಾಗ, ದೇವರು ಕೊಟ್ಟಿರುವವಗಳಲ್ಲಿ ಸಮಾಧಾನವಿಲ್ಲದವರಾಗುತ್ತೇವೆ. ತಮಗೆ ಅರಸನನ್ನು ಕೊಡುವಂತೆ ಇಸ್ರಾಯೇಲ್ಯರು ದೇವರನ್ನು ಬಹಳವಾಗಿ ಪೀಡಿಸಿದರು. ಅರಸನು ಬಂದ ನಂತರ ನಿಮಗೆ ಇಷ್ಟವಾಗುವದಿಲ್ಲ ಆದರೆ ಆಗ ಬೇಡವೆಂದರೂ ಯಾವ ಪ್ರಯೋಜನವೂ ಇರುವದಿಲ್ಲ ಎಂಬದಾಗಿ ದೇವರು ಅವರಿಗೆ ಹೇಳಿದನು. ದೇವರು ನಮ್ಮನ್ನು ಪ್ರೀತಿಸುತ್ತಾನೆ ಮತ್ತು ನಮಗಾಗಿ ಹಿತರಕರವಾದ ಆಲೋಚನೆಯನ್ನು ಹೊಂದಿದ್ದಾನೆ, ಆದರ

ಬೇರೆಯವುಗಳನ್ನು ಕೊಡುವಂತೆ ನಾವು ದೇವರನ್ನು ಎಂದಿಗೂ ಒತ್ತಾಯಪಡಿಸಬಾರದು. ದೇವರು ಅವರಿಗೆ ಕೊಟ್ಟ ಎಚ್ಚರಿಕೆಯನ್ನು ಅವರು ನಿರ್ಲಕ್ಷಸಿದಾಗ, ಸೌಲನೆಂಬ ವ್ಯಕ್ತಯನ್ನು ಅಭಿಷೇಕಿಸಲು ದೇವರು ಸಮುವೇಲನನ್ನು ಕಳುಹಿಸಿದನು. ಆದರ ಕಾಲಕ್ರಮೇಣ ಸೌಲನು ನಿಧಾನವಾಗಿ ದೇವರಿಗೆ ಅವಿಧೇಯನಾಗ ನಡೆದಕೊಳ್ಳಲು ಪ್ರಾರಂಭಿಸಿದನು. ಇಂದು ನಾವು ರಾಜುವಿನ ಕಥೆಯನ್ನು ನೋಡಿದ್ದೇವೆ ಅದರಂತೆಯೇ, ಅವಿಧೇಯತೆ ನಮ್ಮನ್ನು ನಿಧಾನವಾಗಿ ವಶಪಡಿಸಿಕೊಳ್ಳಲಾರಂಭಿಸುತ್ತದೆ. ನಾವು ಶೋಧನೆಗೆ ಒಳಗಾಗದಂತೆ ಎಚ್ಚರವಾಗಿದ್ದು ಪ್ರಾರ್ಥಿಸಬೇಕೆಂದು ಯೇಸು ಕ್ರಿಸ್ತನು ನಮಗೆ ಹೇಳಿದ್ದಾನೆ (ಮತ್ತಾಯ 26:14). ಒಂದು ಯುದ್ಧದ ಸಮಯದಲ್ಲಿ, ಸಮುವೇಲನು ಬಂದು ದೇವರಿಗೆ ಯಜ್ಞ ಅರ್ಪಿಸುವ ತನಕ

ಸೌಲನು ಕಾಯಬೇಕಾಗಿತ್ತು. ಯಾಕಂದರೆ ಯಜ್ಞ ಅರ್ಪಿಸುವ ಅಧಿಕಾರ ಸಮುವೇಲನಂಥ ಲೇವಿಯರಿಗೆ ಮಾತ್ರವೇ ಇತ್ತು. ಅವರು ಬಹುತೇಕ ಒಂದು ವಾರಗಳ ಕಾಲ ಕಾಯುತ್ತಿದ್ದರು, ಆದ್ದರಿಂದ ತಾಳ್ಮೆ ಕಳೆದುಕೊಂಡರು. ಸೌಲನಿಗೆ ನಾನು ನನ್ನ ಸೈನ್ಯವನ್ನು ಕಳೆದುಕೊಳ್ಳುತ್ತೇನೆ ಎಂಬ ಭಯ ಉಂಟಾಯಿತು – ಯುದ್ಧವನ್ನು ಗೆಲ್ಲಲು ದೇವರಿಗಿಂತ ಜನರೇ ಮುಖ್ಯ ಎಂಬದಾಗಿ ಅವನು ನೆನೆಸಿದನು. ಅವನು ನಿಯಮವನ್ನು ಉಲ್ಲಂಘಿಸಿ ತಾನೇ ಯಜ್ಞ ಅರ್ಪಿಸಿದನು. ನಿನಗೆ ಬದಲಾಗಿ ಉತ್ತಮನನ್ನು ದೇವರು ಈಗಾಗಲೇ ಅರಸನನ್ನಾಗಿ ಆರಿಸಿಕೊಂಡಿದ್ದಾನೆ ಎಂದು ಸಮುವೇಲನು ಅವನಿಗೆ ಹೇಳಿದನು. ಒಂದುವೇಳೆ ನೀನು ದೇವರ ಚಿತ್ತ ಮಾಡುವದನ್ನು ನಿಲ್ಲಿಸುವದಾದರೆ, ದೇವರು ನಿಮಗಾಗಿ ಇಟ್ಟಿರುವ ಅದ್ಭುತವಾದವುಗಳನ್ನು ಕಳೆದುಕೊಳ್ಳುವವರಾಗಿದ್ದೀರಿ. ಯೇಸು ಕ್ರಿಸ್ತನು ಶಿಲುಬೆಯ ಮೇಲೆ ಮಾಡಿದ ಕಾರ್ಯದಿಂದಾಗಿ, ಎಲ್ಲಾ ಸಮಯಗಳಲ್ಲಿ ದೇವರ ಕೃಪೆ ನಮಗೆ ಸಹಾಯ ಮಾಡುತ್ತದೆ. ಅವಿಧೇಯರಾಗುವ ಬದಲು, ಸಹಾಯಕ್ಕಾಗಿ ದೇವರನ್ನು ಬೇಡಿಕೊಳ್ಳಿರಿ. ಸೌಲನು ಅಮಾಲೇಕ್ಯರನ್ನು ಕೊಲ್ಲಬೇಕೆಂಬ ದೇವರ ಆಜ್ಞೆಗೆ ಅವಿಧೇಯನಾಗಿ, ಅವರ ಅರಸನನ್ನು ಮತ್ತು ಉತ್ತಮ ಪಶುಗಳನ್ನು ಉಳಿಸಿಕೊಂಡನು. ಅವುಗಳನ್ನು ದೇವರಿಗೆ ಯಜ್ಞವಾಗಿ ಅರ್ಪಿಸಲು ಉಳಿಸಿಕೊಂಡಿದ್ದೇನೆ ಎಂದು ಸೌಲನು ಹೇಳಿದನು, ಆದರೆ ಸಮುವೇಲನು ಅವನಿಗೆ ಯಜ್ಞಹೋಮಗಳಿಗಿಂತ ವಿಧೇಯತೆಯು ಉತ್ತಮ ಎಂದು ಹೇಳಿದನು. ನಮ್ಮ ಜೀವಿತದಲ್ಲಿಯೂ, ನಾವು ನಮ್ಮ ಸಮಯ, ಹಣ, ಉಡುಗೊರೆ ಇತ್ಯಾದಿಗಳನ್ನು ಕೊಡುವ ಮೂಲಕ ದೇವರಿಗೆ ಯಜ್ಞ ಅರ್ಪಿಸುವದು ಉತ್ತಮವಾಗಿದೆ. ದೇವರು ಯಾವಾಗಲೂ ವಿಧೇಯತೆಯನ್ನು ಬಯಸುವವನಾಗಿದ್ದಾನೆ. ದೇವರ ಚಿತ್ತದಂತೆ ನಡೆಯುವವನು ನನಗೆ ಸಹೋದರನು ಅಥವಾ ಸಹೋದರಿಯೂ ಆಗಿದ್ದಾರೆ ಎಂದು ಯೇಸು ಕ್ರಿಸ್ತನು ಹೇಳಿದ್ದಾನೆ (ಮತ್ತಾಯ 12:50). ಪ್ರವಾದನೆ ಹೇಳುವದು, ದುರಾತ್ಮಗಳನ್ನು ಓಡಿಸುವದು ಅಥವಾ ಯಾವುದೇ ಅದ್ಭುತಕಾರ್ಯಗಳನ್ನು ಮಾಡುವದಕ್ಕಿಂತ ಹೆಚ್ಚಾಗಿ ಆತನ ಚಿತ್ತದಂತೆ ನಡೆಯುವವರನ್ನು ದೇವರು ಬಯಸುತ್ತಾನೆ ಎಂಬದಾಗಿಯೂ ಯೇಸು ಕ್ರಿಸ್ತನು ಹೇಳಿದ್ದಾನೆ (ಮತ್ತಾಯ 7:21-23). ಸೌಲನ ಅವಿಧೇಯತೆಯಿಂದ, ದೇವರು ಅವನನ್ನು ಅರಸುತನದಿಂದ ಕೆಳಗಿಳಿಸಿದನು! ಸೌಲನ ಜೀವನಪರ್ಯಂತರ, ಅವಿಧೇಯತೆ ಹೆಚ್ಚಾಗುತ್ತಲೇ ಹೋಯಿತು ಕಡೆಯದಾಗಿ ಅವನು ಯುದ್ಧದಲ್ಲಿ ಕೊಲ್ಲಲ್ಪಟ್ಟನು. ಮುಂದಿನ ಸಲ ಸೌಲನಿಗೆ ಬದಲಾಗಿ ಅರಸನಾದ ವ್ಯಕ್ತಿಯ ಬಗ್ಗೆ ಕಲಿತುಕೊಳ್ಳೋಣ, ಅವನು ಯಾವುದೇ ಪರಿಸ್ಥಿತಿಯಿದ್ದರೂ ದೇವರ ಚಿತ್ತದನುಸಾರ ಜೀವಿಸುತ್ತಿದ್ದನು.

ದೇವರಿಗೆ ವಿಧೇಯನಾಗುವ ಮತ್ತು ಆತನು ಬಯಸುವ ಕಾರ್ಯಗಳನ್ನೇ ಮಾಡುವ ಆಯ್ಕೆಯನ್ನು ನಾನು ಮಾಡಿಕೊಳ್ಳುತ್ತೇನೆ.

## ವಿಶ್ಲೇಷಣ ೬



ಸಭಾಪಾಲಕರು ರಾಜುವಿನೊಂದಿಗೆ ಮಾತನಾಡಿದರು ಮತ್ತು ನಿಮ್ಮ ಅಪ್ಪ ಯಾವಾಗಲೂ ನಿನ್ನ ಹಿತವನ್ನೇ ಬಯಸುತ್ತಾರೆ ಎಂದು ಹೇಳಿದರು. ಅಲ್ಲದೆ ನೀನು ಅವರಿಗೆ ವಿಧೇಯನಾಗಬೇಕು ಯಾಕಂದರೆ ದೇವರು ಆತನನ್ನು ನಿನ್ನ ಮೇಲೆ ಅಧಿಕಾರಿಯಾಗಿ ನೇಮಿಸಿದ್ದಾನೆ ಎಂಬದಾಗಿಯೂ ಹೇಳಿದರು. ಆಗ ರಾಜು ಸಭಾಪಾಲಕರು ಹೇಳಿದ ಮಾತುಗಳ ಬಗ್ಗೆ ಯೋಚಿಸಲು ಪ್ರಾರಂಭಿಸಿದನು ಮತ್ತು ತನ್ನ ತಂದೆ ತನ್ನನ್ನು ಕೆಟ್ಟವರ ಸಹವಾಸದಿಂದ ಕಾಪಾಡಲು ಪ್ರಯತ್ನಿಸುವ ಮೂಲಕ ತನಗೆ ಹಿತವನ್ನೇ ಮಾಡುತ್ತಿದ್ದಾರೆ ಎಂಬದನ್ನು ತಿಳಿದುಕೊಂಡನು.

## ಚಟುವಟಿಕೆ ೬

ಕನ್ನಡಿ

ಮಕ್ಕಳು ಎಲ್ಲರೊಂದಿಗೆ ಬೆರೆಯಲು ಈ ಚಟುವಟಿಕೆ ಸಹಾಯ ಮಾಡುತ್ತದೆ. ಸೂಚನೆಗಳು:

1. ಚಟುವಟಿಕೆಯ ಮೇಲ್ವಿಚಾರಕನಾಗಿರುವ ವ್ಯಕ್ತಿ ಎಲ್ಲರನ್ನು ಜೊತೆಜೊತೆಯಾಗಿ ನಿಲ್ಲಿಸಬೇಕು.
2. ಜೊತೆಯಾಗಿ ನಿಂತಿರುವರಲ್ಲಿ ಇರುವ ಇಬ್ಬರು ಮಕ್ಕಳು ಒಬ್ಬರಿಗೊಬ್ಬರು ಎದುರುಬದುರಾಗಿ ನಿಂತುಕೊಳ್ಳಬೇಕು.
3. ಮೊದಲನೆಯದಾಗಿ ಮಗು ತನ್ನೆದುರಿನಲ್ಲಿ ನಿಂತಿರುವ ಮಗು ಮಾಡುವ ಕಾರ್ಯಗಳನ್ನು ನೋಡಿ ಹಾಗೆಯೇ ಮಾಡಬೇಕು (ಕ್ರಿಯೆಗಳನ್ನು ಮಾಡುವ ಮಗು ಮುಖ ಭಾವನೆಯನ್ನು ವ್ಯಕ್ತಪಡಿಸಬೇಕು, ಕೈಕಾಲುಗಳು ಆಡಿಸಬೇಕು, ಇತ್ಯಾದಿ).
4. ನಂತರ ಮತ್ತೊಂದು ಮಗುವಿನ ಸರದಿ ಬರುತ್ತದೆ ಆಗ ಆ ಮಗುವೂ ಹಾಗೆಯೇ ಮಾಡಬೇಕು.




## ಟೈಮ್ ಲೈನ್ ೯

**ಸೌಲನು ಯಾವ ಇಸವಿಯಲ್ಲಿ ಹುಟ್ಟಿದನು? ಉ. ನಮಗೆ ನಿಖರವಾಗಿ ಗೊತ್ತಿಲ್ಲ, ಆದರೆ ಕ್ರಿ.ಪೂ 1082 ಎಂದು ಕಲಿಸಲಾಗಿದೆ.**
**ಸೌಲನು ಯಾವ ಇಸವಿಯಲ್ಲಿ ಮೃತಪಟ್ಟನು? ಉ. ನಮಗೆ ನಿಖರವಾಗಿ ಗೊತ್ತಿಲ್ಲ, ಆದರೆ ಕ್ರಿ.ಪೂ 1010 ಎಂದು ಕಲಿಸಲಾಗಿದೆ.**

## ಒಗಟಿನ ಉತ್ತರಗಳು ೯

| | | | | | | | | | | |
|---|---|---|---|---|---|---|---|---|---|---|
| ಜ್ಞ | ರಿ | ಧೇ | ಕೆ | ವೇ | ಲು | ಪಾ | ಪ | ವಿ | ಯ | ಧೇ |
| ಧೇ | ಕಾ | ಸ | ಲಿ | ತೆ | ಯ | ಧೇ | ವಿ | ಅ | ತೆ | ಜ್ಞ |
| ರಿ | ಯು | ವಿ | ಹೋ | ಶಿ | ಜ್ಞ | ರಿ | ನು | ರ | ವೇ | ಕಾ |
| ಕು | ವಿ | ತ್ಯ | ತೆ | ಸೌ | ದ | ವೇ | ತ್ಯ | ಸ | ಶಿ | ಲು |
| ಲು | ಕೆ | ಪಾ | ಸ | ತ್ಯ | ರ | ಧ | ಧೇ | ನು | ವಿ | ಪ |
| ವಿ | ರಿ | ಲ | ವಿ | ಮು | ಪ | ಕ್ಷ | ಕ್ರಿ | ಲ | ಶಿ | ತ್ತಾ |
| ಕಾ | ಸ | ಧೇ | ಶ್ಚಾ | ಧೇ | ವೇ | ನು | ಣ | ಶ್ಚಾ | ಜ್ಞ | ಶ್ಚಾ |
| ತೆ | ಯ | ನು | ಕಾ | ವ | ವೇ | ಲ | ಧೇ | ಸೌ | ಸೌ | ಪ |
| ತೆ | ಜ್ಞ | ಲಿ | ಯೇ | ಸು | ಕ್ರಿ | ಸ್ತ | ನು | ಲ | ಪಾ | ಧೇ |
| ವೇ | ಶಿ | ಲು | ಬೆ | ಶಿ | ವಿ | ಕಾ | ನು | ತ್ಯ | ಸ | ರಿ |





## ಪ್ರಶ್ನೆಗಳು ಮತ್ತು ಉತ್ತರಗಳು ೯


**(ಹಿರಿಯ ವಿದ್ಯಾರ್ಥಿಗಳಿಗೆ)**

1. **ದೇವರು ಒಂದುವೇಳೆ ನನಗೆ ಅಸಾಧ್ಯವಾದ ಕಾರ್ಯ ಮಾಡಲು ಹೇಳಿದರೆ ಏನು ಮಾಡಬೇಕು? (ಅನೇಕ ಸಮಯ, ದೇವರು ನಮ್ಮ ಜೀವಿತಗಳಲ್ಲಿ ಅದ್ಭುತಕಾರ್ಯ ಮಾಡಲು ಬಯಸುತ್ತಾನೆ. ಕರ್ತನು ಏನೇ ಮಾಡಲು ಹೇಳಿದರೂ ಅವುಗಳಿಗೆ ವಿಧೇಯರಾಗಿ ನಾವು ಒಂದೊಂದೇ ಹೆಜ್ಜೆ ಇಟ್ಟು ಮುಂದೆ ಸಾಗಬೇಕು.)**

2. ದೇವರು ಎಲ್ಲಿಂದ ಬಂದಿದ್ದಾನೆ? (ಸತ್ಯವೇದವು ಹೇಳುವದೇನೆಂದರೆ ದೇವರು ಅನಾದಿ ಕಾಲದಿಂದಲೇ ಇದ್ದಾನೆ. ಲೋಕವು ಉಂಟಾಗುವ ಮೊದಲೇ, ನಮಗಿಂತ ಮೊದಲೇ ಮತ್ತು ನಮಗೆ ಎಲ್ಲವೂ ಗೊತ್ತಾಗುವದಕ್ಕಿಂತ ಮುಂಚೆಯೇ ಆತನು ಇದ್ದಾನೆ. ದೇವರು ಇದ್ದನು, ಇದ್ದಾನೆ ಮತ್ತು ಯಾವಾಗಲೂ ಇರುವನು. ದೇವರು ನಿತ್ಯನಾಗಿದ್ದಾನೆ.)
3. ಎಲ್ಲರೂ ಯಾಕೆ ದೇವರನ್ನು ನಂಬುವದಿಲ್ಲ? (ಸೈತಾನನು ನಮ್ಮನ್ನು ವಿವಿಧ ದಿಕ್ಕುಗಳಿಗೆ ನಡೆಸುತ್ತಾನೆ, ನಮ್ಮನ್ನು ದೇವರಿಂದ ದೂರ ಮಾಡುತ್ತಾನೆ. ನಾವು ದೇವರನ್ನು ನಂಬುತ್ತೇವೆ ಎಂಬದಾಗಿ ಹೇಳಿಯೂ ತಮ್ಮ ಜೀವಿತದ ಮೂಲಕ ಆತನು ಇಲ್ಲ ಎಂಬದನ್ನು ನಿರೂಪಿಸಲು ಪ್ರಯತ್ನಿಸುವ ಜನರ ಗೊತ್ತಿದೆಯೇ ಎಂದು ನಿಮ್ಮ ವಿದ್ಯಾರ್ಥಿಗಳೊಂದಿಗ ಚರ್ಚಿಸಿರಿ. ನಮ್ಮ ಕ್ರಿಯೆಗಳ ಬಗ್ಗೆ ನಮ್ಮ ನಂಬಿಕೆಯ ಬಗ್ಗೆ ಏನು ಹೇಳುತ್ತದೆ?)

## ಆಟ ೬

ಚೆಂಡನ್ನು ಎಸೆಯುವದು



ದಾರ, ರಿಬ್ಬನ್ ಅಥವಾ ಕುರ್ಚಿಗಳನ್ನು ಸಾಲಾಗಿ ಜೋಡಿಸುವ ಮೂಲಕ ನೆಲದ ಮೇಲೆ ಚೌಕಾಕಾರವನ್ನು ರಚಿಸಿರಿ, ಅದರೊಳಗೆ ಎರಡೂ ತಂಡದ ಮಕ್ಕಳು ಸೇರುವಷ್ಟು ಸ್ಥಳ ಇರಬೇಕು. ಎರಡೂ ತಂಡದಿಂದ ಒಬ್ಬೊಬ್ಬ ವ್ಯಕ್ತಿಯನ್ನು ಶೂಟರ್ ಆಗಿ ಆಯ್ಕೆ ಮಾಡಲಾಗುವದು ಮತ್ತು ಚೌಕಾಕಾರದ ವಿರುದ್ಧ ದಿಕ್ಕುಗಳಲ್ಲಿ ನಿಲ್ಲಿಸಲಾಗುವದು. ಆಟ ಪ್ರಾರಂಭಿಸಲು, ವಿರುದ್ಧ ತಂಡದಲ್ಲಿರುವ ಮಕ್ಕಳಿಗೆ ಹೊಡೆಯಲು ಶೂಟರ್ ಗಳು ಚೆಂಡನ್ನು ಎಸೆಯಬೇಕು ಆದರೆ ವೃತ್ತದ ಒಳಗಿರುವ ಮಕ್ಕಳು ಅವರಿಗೆ ಚೆಂಡು ತಾಗದಂತೆ ತಪ್ಪಿಸಿಕೊಳ್ಳಬೇಕು. ಯಾವ ಮಗುವಿಗೆ ಚೆಂಡು ತಗಲುತ್ತದೋ ಆ ಮಗು ಆಟದಿಂದ ಹೊರಗೆ ಹೋಗಬೇಕು. ಕಡೆಯದಾಗಿ ಯಾವ ತಂಡದ ಮಕ್ಕಳು ಚೌಕದ ಒಳಗಿರುತ್ತಾರೋ ಆ ತಂಡ ಗೆಲ್ಲುತ್ತದೆ.

## ಹಾಜರಾತಿ ೬




ತರಗತಿಯಲ್ಲಿ ಭಾಗವಹಿಸಿದ್ದಕ್ಕೆ ಮಕ್ಕಳಿಗೆ ಇಂದಿನ ಕಾರ್ಡ್ ಕೊಡಿರಿ. ವೀರರ ಆಟವನ್ನು ಆಡಲು ಮತ್ತೊಂದು ಕಾರ್ಡ್ ಪಡೆಯುವ ಸಲುವಾಗಿ ಮುಂದಿನ ವಾರ ತರಗತಿ ಬರುವಂತೆ ಅವರನ್ನು ಪ್ರೋತ್ಸಾಹಪಡಿಸಿರಿ ಮತ್ತು ಅಭಿನಂದಿಸಿರಿ. ಇಂದಿನ ಕಾರ್ಡ್ ಯಾವುದೆಂದರೆ:
ದೊಡ್ಡ ಪ್ರವಾದಿಗಳು

## ಹೋಮ್ ವರ್ಕ್ ೬

ಈ ವಾರದ ನಿಮ್ಮ ಹೋಮ್ ವರ್ಕ್, ನಿಮಗೆ ಶೋಧನೆಯಾಗುವ ಪ್ರತಿಯೊಂದು ಸಮಯದಲ್ಲಿಯೂ, ದೇವರಿಗೆ ಪ್ರಾರ್ಥನೆ ಮಾಡಿರಿ ಮತ್ತು ಸರಿಯಾದ ಕಾರ್ಯ ಮಾಡಲು ಸಹಾಯ ಮಾಡುವಂತೆ ಆತನನ್ನು ಬೇಡಿಕೊಳ್ಳಿರಿ. ನೀವು ಪಾಪ ಮಾಡಿದರೆ, ದೇವರ ಎದುರಿನಲ್ಲಿ ಕ್ಷಮಾಪಣೆ ಕೇಳಿರಿ ಮತ್ತು ಪಶ್ಚಾತ್ತಾಪಪಡಿರಿ. ಹಾಗೆಯೇ ಈ ವಾರವೆಲ್ಲಾ ಒಳ್ಳೆಯ ಕಾರ್ಯಗಳನ್ನು ಮಾಡಲು ಸಹಾಯ ಮಾಡುವಂತೆ ದೇವರನ್ನು ಬೇಡಿಕೊಳ್ಳಿರಿ ಮತ್ತು ಪ್ರತಿ ಬಾರಿ ಒಳ್ಳೆಯ ಕಾರ್ಯ ಮಾಡುವ ಬಗ್ಗೆ ಯೋಚಿಸುವಾಗಲೂ, ಉದಾಹರಣೆಗೆ ಇತರರಿಗೆ ಸಹಾಯ ಮಾಡಬೇಕು ಅಥವಾ ಪ್ರೋತ್ಸಾಹಪಡಿಸಬೇಕು ಎಂಬದಾಗಿ ಅನ್ನಿಸಿದರೆ ಕೂಡಲೇ ಮಾಡಿರಿ.

ಓದಿರಿ

ದಿನ **1: 2** ಸಮು **11:1-13**

ದಿನ **2: 2** ಸಮು **11:14-27**

ದಿನ **3: 2** ಸಮು **12:1-10**

ದಿನ **4: 2** ಸಮು **12:11-19**

ದಿನ **5: 2** ಸಮು **12:20-25**

# ೧೦. ದೇವರು ನಮ್ಮನ್ನು ಕ್ರಮಪಡಿಸುತ್ತಾನೆ



**ಸತ್ಯವೇದ ಕಥೆ: ಅರಸನಾದ ದಾವೀದನು**

**1 ಸಮುವೇಲ 16:1-13, 2 ಸಮುವೇಲ 5:1-5, 11:1-15, 12:1-23**

## ಕಂಠಪಾಠ ವಚನ ೧೦

“ದೇವರು ಯಾರನ್ನು ತಿದ್ದುತ್ತಾನೋ ಅವನು ಧನ್ಯನು ಅಲಕ್ಷ್ಯ ಮಾಡಬೇಡ ನೋಡು, ಸರ್ವಶಕ್ತನ ದಂಡನೆಯನು.” ಯೋಬನು ಗ್ರಂಥ 5:17

## ಕಥೆಯ ಅವಶ್ಯಕತೆ ೧೦



ಆಶಾಳಿಗೆ ತನ್ನದಲ್ಲದ ವಸ್ತುಗಳನ್ನು ತೆಗೆದುಕೊಳ್ಳವದು ತಪ್ಪು, ಅದು ದೇವರು ಇಷ್ಟವಾಗದ ಕಾರ್ಯ ಎಂಬದನ್ನು ಗೊತ್ತಿದೆ. ಸಂಡೇ ಸ್ಕೂಲ್ ಗೆ ಒಬ್ಬ ಹುಡುಗಿ ಬರುತ್ತಾಳೆ ಅವಳು ಯಾವಾಗಲೂ ನೆಲದ ಮೇಲೆ ಅಥವಾ ಕುರ್ಚಿಯ ಮೇಲೆ ಹಣ ಬಿಟ್ಟು ಹೋಗುತ್ತಾಳೆ. ಮೂರು ವಾರಗಳಿಂದ ಆ ಹುಡುಗಿ ಬಿಟ್ಟು ಹೋಗುವ ಹಣ ತೆಗೆದುಕೊಳ್ಳಬೇಕೆಂಬ ಶೋಧನೆ ಆಶಾಳಿಗೆ ಆಗುತ್ತಿತ್ತು. “ನಾನು ಆ ಹಣ ತೆಗೆದುಕೊಂಡರೆ ಯಾರಿಗೂ ಗೊತ್ತಾಗುವದಿಲ್ಲ – ಇಲ್ಲ, ನಾನು ಹಾಗೆ ಮಾಡಬಾರದು” ಎಂದು ತನ್ನೊಳಗೇ ಅಂದುಕೊಳ್ಳುತ್ತಿದ್ದಳು. ಕಡೆಗೆ ಒಂದು ವಾರ ಶೋಧನೆ ತಡೆಯಲಾಗದೆ ಆಶಾ ಹಣ ತೆಗೆದುಕೊಂಡೇ ಬಿಟ್ಟಳು. ಮುಂದಿನ ವಾರ ಸಂಡೇ ಸ್ಕೂಲ್ ನಲ್ಲಿ ಒಬ್ಬ ಹುಡುಗ ಯಾರಿಗೂ ಗೊತ್ತಾಗದಂತೆ ಮತ್ತೊಬ್ಬನ ಬಣ್ಣದ ಬಳಪ ತೆಗೆದುಕೊಳ್ಳುವದನ್ನು ಆಶಾ ನೋಡಿದಳು. ಆಕೆಗೆ ಬಹಳ ಬೇಸರವಾಯಿತು ಮತ್ತು ತರಗತಿಯಲ್ಲಿಯೇ ಗಟ್ಟಿಯಾಗಿ, “ಏಯ್! ನೀನು ಅವನ ಬಣ್ಣದ ಬಳಪಗಳನ್ನು ತೆಗೆದುಕೊಳ್ಳುತ್ತಿದ್ದೀಯಾ! ಅದು ತಪ್ಪು ಎಂದು ನಿನಗೆ ಗೊತ್ತಿಲ್ಲವೇ?” ಎಂದು ಕೂಗಿದಳು. ಆ ಹುಡುಗ ಕ್ಷಮಾಪಣೆ ಕೇಳಿ, ಬಳಪಗಳನ್ನು ಹಿಂದಿರುಗಿಸಿದನು ಆದರೂ ಆಶಾ ತರಗತಿಯಲ್ಲಿ ಅದರ ಬಗ್ಗೆಯೇ ಮಾತನಾಡುತ್ತಿದ್ದಳು, ಟೀಚರ್ ಗಳಿಗೆ ಹೇಳುತ್ತಿದ್ದಳು, ಆ ಹುಡುಗನನ್ನೇ ನೋಡುತ್ತಾ, ಅವನಿಗೆ ಮಾನಸಿಕವಾಗಿ ನೋವು ಕೊಡುತ್ತಿದ್ದಳು.

## ಮುಖ್ಯ ಪಾಠ ೧೦

ಕಳೆದ ವಾರ ನಾವು ಅರಸನಾದ ಸೌಲನು ಹೇಗೆ ಮತ್ತೆಮತ್ತೆ ದೇವರಿಗೆ ಅವಿಧೇಯನಾದನು ಎಂಬದನ್ನು ಕಲಿತುಕೊಂಡೆವು. ಇಂದು ಅತ್ಯಂತ ವಿಶೇಷ ಗುಣವಿದ್ದ ಒಬ್ಬ ವ್ಯಕ್ತಿಯ ಬಗ್ಗೆ ನಾವು ಕಲಿತುಕೊಳ್ಳೋಣ. ಮುಂದಿನ ಅರಸನನ್ನು ಅಭಿಷೇಕಿಸಲು ದೇವರು ಸಮುವೇಲನನ್ನು ಬೆತ್ಲೆಹೇಮಿಗೆ ಕಳುಹಿಸಿದನು. ಅವನ ದೊಡ್ಡ ಅಣ್ಣನನ್ನು ನೋಡಿ ಸಮುವೇಲನು ಮೆಚ್ಚಿಕೊಂಡನು. ಆದರೆ ದೇವರು ಅವನಿಗೆ ಹೊರಗಿನ ತೋರಿಕೆಯನ್ನು ನೋಡಬೇಡ ನಾನು ಹೃದಯವನ್ನು ನೋಡುತ್ತೇನೆ ಎಂದು ಹೇಳಿದನು. ದೇವರು ಚಿಕ್ಕ ತಮ್ಮನಾಗಿದ್ದ ದಾವೀದನನ್ನು ಅರಸನನ್ನಾಗಿ ಆರಿಸಿಕೊಂಡನು. ಒಂದುವೇಳೆ ನೀವು ಚಿಕ್ಕವರಾಗಿದ್ದರೆ ಅಥವಾ ಯಾರೂ ನಿಮ್ಮನ್ನು ಗಮನಕ್ಕೆ ತಂದುಕೊಳ್ಳದೆ ಇದ್ದರೆ ಚಿಂತಿಸಬೇಡಿರಿ. ದೇವರು ಯಾವಾಗಲೂ ತನ್ನ ವಿಷಯದಲ್ಲಿ ಆಸಕ್ತರಾಗಿರುವ ಜನರನ್ನೇ ಎದುರುನೋಡುವವನಾಗಿದ್ದಾನೆ (ಕೀರ್ತನೆ 14:2). ದೇವರು ಯಾವಾಗಲೂ ನಿಮ್ಮನ್ನು ನೋಡುತ್ತಾನೆ. ನಾವು ದಾವೀದನಿಂದ ಅನೇಕ ವಿಷಯಗಳನ್ನು ಕಲಿತುಕೊಳ್ಳಬಹುದಾಗಿದೆ. ಅವನು ರಣವೀರನಾಗಿದ್ದನು ಮತ್ತು ಅರಸನಾದ ಸೌಲನನ್ನು ಕೊಂದು ಸುಲಭವಾಗಿ ಅವನ ರಾಜ್ಯವನ್ನು ವಶಪಡಿಸಿಕೊಳ್ಳುವ ಸಾಮರ್ಥ್ಯ ಅವನಿಗಿತ್ತು ಆದರೆ ಅವನು ದೇವರ ಚಿತ್ತವನ್ನು ಗೌರವಿಸಿದನು ಮತ್ತು ನ್ಯಾಯಬದ್ಧವಾಗಿ ನಡೆದುಕೊಂಡನು. ಯೇಸು ಕ್ರಿಸ್ತನು ಹೇಳಿರುವದೇನೆಂದರೆ ತನ್ನ ಪ್ರಾಣವನ್ನು ಉಳಿಸಿಕೊಳ್ಳಬೇಕೆಂದಿರುವವನು ಅದನ್ನು ಕಳಕೊಳ್ಳುವನು ಆದರೆ ಯೇಸು ಕ್ರಿಸ್ತನಿಗಾಗಿ ತನ್ನ ಪ್ರಾಣವನ್ನು ಕೊಡುವವನು ಅದನ್ನು ಪಡೆದುಕೊಳ್ಳುವನು (ಲೂಕ 9:24). ದಾವೀದನು ಅರಸುತನವನ್ನು ಬಯಸದೆ ತನ್ನ ಪ್ರಾಣವನ್ನು “ಕಳಕೊಂಡನು.” ಕೆಲವು ವರ್ಷಗಳಾದ ನಂತರ

ದೇವರು ದಾವೀದನಿಗೆ ವಾಗ್ದಾನ ಮಾಡಿದಂತೆಯೇ ಅವನನ್ನು ಇಸ್ರಾಯೇಲಿನ ಅರಸನನ್ನಾಗಿ ಮಾಡಿದನು. ಅದೇ ಪ್ರಕಾರ, ಯೇಸು ಕ್ರಿಸ್ತನು ಸಹ ಅರಸುತನವನ್ನು ಬಯಸಲಿಲ್ಲ ಬದಲಾಗಿ ದೇವರೇ ಆತನಿಗೆ ಅರಸುತನವನ್ನು ಕೊಟ್ಟನು (ಫಿಲಿಪ್ಪಿ 2:6-11). ಒಮ್ಮೆ ಅರಸನಾದ ಸೌಲನು ಅವನನ್ನು ಕೊಲ್ಲಬೇಕೆಂದಿದ್ದನು, ದಾವೀದನು ಆಗ ಅತ್ಯಂತ ವಿಶೇಷವಾದ ಮಾತನ್ನು ಹೇಳಿದನು: ಯೆಹೋವನ ಸಾನಿಧ್ಯವಿಲ್ಲದಿರುವ ದೇಶದಲ್ಲಿ ನನ್ನ ರಕ್ತವು ಸುರಿಸಲ್ಪಡದಿರಲಿ (1 ಸಮುವೇಲ 26:20). ಬೇರೆ ಮಾತುಗಳಲ್ಲಿ ಹೇಳುವದಾದರೆ: ಒಂದುವೇಳೆ ನೀನು ನನ್ನನ್ನು ಕೊಂದರೂ ಪರವಾಗಿಲ್ಲ, ಯಾಕಂದರೆ ಜೀವದಿಂದಿರುವದಕ್ಕಿಂತಲೂ ದೇವರೊಂದಿಗೆ ಇರುವದೇ ಪ್ರಾಮುಖ್ಯವಾದ ಕಾರ್ಯವಾಗಿದೆ. ದೇವರು ದಾವೀದನ ವಿಷಯದಲ್ಲಿ ನನ್ನ ಹೃದಯಕ್ಕೆ ಒಪ್ಪುವ ಮನುಷ್ಯನು ಎಂದು ಹೇಳಿದನು (1 ಸಮುವೇಲ 13:14; ಅಪೊ 13:22). ದೇವರು ಒಬ್ಬರ ಬಗ್ಗೆ ಇಂಥಾ ಮಾತುಗಳನ್ನು ಹೇಳುವದು ನಿಜವಾಗಿಯೂ ವಿಶೇಷವಾದದ್ದಾಗಿದೆ! ಯಾರೂ ಪರಿಪೂರ್ಣರಲ್ಲ, ಮತ್ತು ದೇವರು ಯಾರನ್ನು ಪ್ರೀತಿಸುತ್ತಾನೋ ಅವರನ್ನು ಕ್ರಮಪಡಿಸುತ್ತಾನೆ (ಇಬ್ರಿಯ 11:26). ಒಂದುದಿನ ದಾವೀದನು ವಿವಾಹಿತಳಾಗಿದ್ದ ಬತ್ಷೆಬ ಎಂಬಾಕೆಯನ್ನು ತೆಗೆದುಕೊಂಡನು ಮತ್ತು ಆಕೆಯ ಗಂಡನನ್ನು ಸಾಯಲು ಯುದ್ಧಕ್ಕೆ ಕಳುಹಿಸಿದನು. ಎಂಥಾ ಘೋರ ಕಾರ್ಯ! ಅವನನ್ನು ಗದರಿಸಲು ದೇವರು ಪ್ರವಾದಿಯಾದ ನಾತಾನನನ್ನು ಕಳುಹಿಸಿದನು. ಅವನು ಅಮೂಲ್ಯವಾದ ಕುರಿಮರಿಯನ್ನು ಹೊಂದಿದ್ದ ಒಬ್ಬ ಬಡವನ ಕಥೆಯನ್ನು ಹೇಳಿದನು. ಆ ಬಡವನ ಪಕ್ಕದ ಮನೆಯವನು ತನ್ನ ಬಳಿ ನೂರಾರು ಕುರಿಗಳಿದ್ದರೂ ಪಕ್ಕದವನ ಕುರಿಯನ್ನು ಕೊಯಿಸಿ ತಿಂದುಬಿಟ್ಟನು. ದಾವೀದನು ಕೋಪಗೊಂಡು, ಅವನು ಸಾಯಬೇಕು ಎಂದು ಹೇಳಿದನು. ಇಂದು ನಾವು ನೋಡಿದ ಕಥೆಯಲ್ಲಿ ಬರುವ ಆಶಾಳ ಸ್ವಭಾವದಂತೆಯೇ, ಯಾರಾದರು ತಪ್ಪು ಮಾಡುತ್ತಿರುವದನ್ನು ನೋಡಿದ ಕೂಡಲೇ ನಿಮಗೆ ಕೋಪ ಬಂದರೆ ನೀವೂ ಅದೇ ತಪ್ಪು ಮಾಡುವವರು ಎಂಬದು ಗೊತ್ತಾಗುತ್ತದೆ (ರೋಮಾ 2:1). ನಿಮ್ಮ ಹೃದಯವನ್ನು ಪರೀಕ್ಷಿಸಿಕೊಳ್ಳಲು ಸಹಾಯ ಮಾಡುವಂತೆ ದೇವರನ್ನು ಬೇಡಿಕೊಳ್ಳಿರಿ ಮತ್ತು ಪಶ್ಚಾತ್ತಾಪಪಡಿರಿ. ಸೌಲನಿಗೆ ಬುದ್ಧಿ ಹೇಳಿದಾಗ, ಅವನು ತನ್ನ ತಪ್ಪನ್ನು ಒಪ್ಪಿಕೊಳ್ಳಲಿಲ್ಲ ಮತ್ತು ಇನ್ನಷ್ಟು ಅವಿಧೇಯನಾದನು. ಆದರೆ ದಾವೀದನಿಗೆ ಬುದ್ಧಿ ಹೇಳಿದಾಗ, ಅವನು ತನ್ನ ತಪ್ಪನ್ನು ಒಪ್ಪಿಕೊಂಡನು, ಇದು ಪಶ್ಚಾತ್ತಾಪದ ಮೊದಲನೆಯ ಗುರುತಾಗಿದೆ. ಅವನ ಮೂಲಕ ಬೆತ್ಷೇಬಳಲ್ಲಿ ಹುಟ್ಟಿದ ಮಗುವನ್ನು ಸಾಯಿಸುವದು ದೇವರ ಶಿಕ್ಷಯಾಗಿತ್ತು. ಆದರೆ ಮಗುವನ್ನು ಉಳಿಸುವಂತೆ ದಾವೀದನು ಬೇಡಿಕೊಂಡನು. ಪಾಪದ ಪರಿಣಾಮಗಳು ಎದುರಾಗದಂತೆ ನಾವು ದೇವರನ್ನು ಬೇಡಿಕೊಳ್ಳಬಹುದು. ಕೆಲವೊಮ್ಮೆ ಆತನು ಅವುಗಳು ಬಾರದಂತೆ ಮಾಡುತ್ತಾನೆ ಮತ್ತು ಕೆಲವೊಮ್ಮೆ ಅವುಗಳ ಮೂಲಕವೇ ನಾವು ಉತ್ತಮವಾದ ಪಾಠವನ್ನು ಕಲಿತುಕೊಳ್ಳುತ್ತೇವೆ. ಮಗು ಸತ್ತು ಹೋಯಿತು, ಆದರ ಅದು ನಿರೀಕ್ಷಯಿಲ್ಲದ ಕಾರ್ಯವಾಗಿರಲಿಲ್ಲ. ದೇವರು ಒಳ್ಳೆಯ ಕಾರ್ಯಗಳನ್ನು ಜಾರಿಗೆ ತರುವ ಸಲುವಾಗಿ ಕೆಲವೊಮ್ಮೆ ಪಶ್ಚಾತ್ತಾಪ ಹಾಗೂ ಪುನರ್ ಸ್ಥಾಪನೆಯನ್ನು ಉಪಯೋಗಿಸಿಕೊಳ್ಳುತ್ತಾನೆ. ದಾವೀದ ಮತ್ತು ಬತ್ಷೇಬಳಿಗ ಸೊಲೊಮೋನನೆಂಬ ಇನ್ನೊಬ್ಬ ಮಗ ಹುಟ್ಟಿದನು. ದೇವರ ಸೊಲೊಮೋನನನ್ನು ಪ್ರೀತಿಸಿದನು, ಅವನು ಇಸ್ರಾಯೇಲ್ಯರ ಮುಂದಿನ ಅರಸನು ಮತ್ತು ಯೇಸು ಕ್ರಿಸ್ತನ ಮೂಲಪಿತೃವಾದನು.

ನಾನು ಹೃದಯದ ಕಡೆಗೆ ಗಮನಹರಿಸುವ ಮತ್ತು ದೇವರ ಕ್ರಮಶಿಕ್ಷಣವನ್ನು ಅಂಗೀಕರಿಸಿಕೊಳ್ಳುವ ಆಯ್ಕೆ ಮಾಡಿಕೊಳ್ಳುತ್ತೇನೆ.

## ವಿಶ್ಲೇಷಣ ೧೦



ತರಗತಿಯ ಕೊನೆಯಲ್ಲಿ, ಹಣ ಕಳೆದುಕೊಂಡ ಹುಡುಗಿ ಟೀಚರ್ ಬಳಿ ಹೇಳುವದನ್ನು ಆಶಾ ನೋಡಿದಳು. ಆಶಾಗೆ ಕೂಡಲೇ ತನ್ನ ತಪ್ಪಿನ ಅರಿವಾಯಿತು ಮತ್ತು ಕೂಡಲೇ ತಾನು ಅರಿಕೆಮಾಡಿಕೊಳ್ಳಬೇಕು ಎಂಬದಾಗಿ ಅನ್ನಿಸಿತು ಆದರೆ ಎಲ್ಲದಕ್ಕಿಂತ ಹೆಚ್ಚಾಗಿ ಆ ಹುಡುಗನಿಗೆ ನೋವನ್ನುಂಟು ಮಾಡಿದ್ದಕ್ಕೆ ಹೆಚ್ಚು ಬೇಸರವಾಯಿತು. ಅಂತಿಮವಾಗಿ, ತಾನು ಮಾಡಿದ ಕಾರ್ಯವನ್ನು ಟೀಚರ್ ಗೆ ತಿಳಿಸಿದಳು ಮತ್ತು ಆ ಹುಡುಗಿಯ ಬಳಿ ಕ್ಷಮಾಪಣೆ ಕೇಳಿ ಹಣವನ್ನು ಸಹ ಹಿಂದಿರುಗಿಸಿದಳು. ನಂತರ ಬಣ್ಣದ ಬಳಪಗಳ ವಿಷಯದಲ್ಲಿ ಆ ಹುಡುಗನನ್ನು ದಿನವೆಲ್ಲಾ ನೋಯಿಸಿದ್ದರಿಂದ ಅವನ ಬಳಿಯೂ ಕ್ಷಮಾಪಣೆ ಕೇಳಿದಳು.

## ಚಟುವಟಿಕೆ ೧೦

**ಹೃದಯ**



ವಿದ್ಯಾರ್ಥಿಗಳು ಹೃದಯಾಕಾರದ ಬುಕ್ ಮಾರ್ಕ್ ಮಾಡಬೇಕು. ನೀವು ಗಟ್ಟಿಯಾದ ಹಾಳೆಯನ್ನು ಹೃದಯದ ಆಕಾರದಂತೆ ಕತ್ತರಿಸಬೇಕು ಮತ್ತು ಅದಕ್ಕೆ ಕೆಂಪು ಬಣ್ಣವನ್ನು ಹಚ್ಚಬೇಕು. ಬೇಕಿದ್ದರೆ ಹೆಚ್ಚು ಕಾಲ ಉಳಿಯುವ ಸಲುವಾಗಿ ಅದನ್ನು ಲ್ಯಾಮಿನೇಟ್ ಮಾಡಿಸಬಹುದು. ಮೇಲ್ಭಾಗದಲ್ಲಿ ಚಿಕ್ಕ ರಂಧ್ರ ಮಾಡಿ ಅದನ್ನು ದಾರ ಅಥವಾ ರಿಬ್ಬನ್ ಕಟ್ಟಿರಿ. ದೇವರು ತಾನು ಪ್ರೀತಿಸುವವರನ್ನು ಕ್ರಮಪಡಿಸುತ್ತಾನೆ ಎಂಬದನ್ನು ನೀವು ನೆನಪಿನಲ್ಲಿಟ್ಟುಕೊಳ್ಳಲು ಈ ಬುಕ್ ಮಾರ್ಕ್ ನಿಮಗೆ ಸಹಾಯ ಮಾಡುವದು.


“ದೇವರು ನನ್ನನ್ನು ಪ್ರೀತಿಸುತ್ತಾನೆ ಆದ್ದರಿಂದಲೇ ನನ್ನನ್ನು ಕ್ರಮಪಡಿಸುತ್ತಾನೆ.”

## ಟೈಮ್ ಲೈನ್ ೧೦

ದಾವೀದನು ಯಾವ ಇಸವಿಯಲ್ಲಿ ಜನಿಸಿದನು? ಉ. ನಮಗೆ ನಿಖರವಾಗಿ ಗೊತ್ತಿಲ್ಲ ಆದರೆ ಕ್ರಿ.ಪೂ 1040 ರಲ್ಲಿ ಎಂದು ಕಲಿಸಲಾಗಿದೆ.
ದಾವೀದನು ಯಾವ ಇಸವಿಯಲ್ಲಿ ಮೃತಪಟ್ಟನು? ಉ. ನಮಗೆ ನಿಖರವಾಗಿ ಗೊತ್ತಿಲ್ಲ ಆದರೆ ಕ್ರಿ.ಪೂ 970 ರಲ್ಲಿ ಎಂದು ಕಲಿಸಲಾಗಿದೆ.

## ಒಗಟಿನ ಉತ್ತರಗಳು ೧೦

| | | | | | | | | | | |
|---|---|---|---|---|---|---|---|---|---|---|
| ಪೆ | ಕ್ಷ | ವಿ | ಶ್ಚಾ | ಬೆ | ತ್ಲೆ | ಹೇ | ಮ್ | ರಿ | ದಾ | ತೆ |
| ದಾ | ಕೃ | ನಾ | ತಾ | ನ | ನು | ತ್ಯ | ಸ | ಕೊ | ವಿ | ಯ |
| ಳು | ಸ | ನ | ಧೇ | ಸ | ದ | ಳು | ಪ್ರ | ನಾ | ದ | ಧೇ |
| ಬ | ಕೊ | ತ್ಶೇ | ರ | ಷೇ | ವೀ | ಕೃ | ಧೇ | ಹೃ | ಸ | ವಿ |
| ಹೃ | ತ್ಶೇ | ಅ | ರಿ | ಕೆ | ದಾ | ಗು | ಪ್ರ | ಅ | ಕ್ಷ | ತ್ಯ |
| ನಾ | ರಿ | ಬ | ಸ | ಕೃ | ಶ್ಚಾ | ನಾ | ಮ | ಭಿ | ಗು | ಪ್ರ |
| ವಿ | ಷೇ | ಪ್ರ | ಳು | ನಾ | ತ್ಶೇ | ಕೊ | ಹೇ | ಷೇ | ನ | ಪ್ರ |
| ತ್ಯ | ತ್ಯ | ಆ | ರಿ | ಸಿ | ಕೊ | ಳ್ಳ | ವಿ | ಕೆ | ರ | ಶ್ಚಾ |
| ಕ್ಷ | ಪ್ರ | ಳು | ಕೊ | ಕೃ | ವಿ | ಗು | ರಿ | ಷೇ | ಪಾ | ಸಿ |
| ನ | ದಾ | ಕ್ಷ | ಪ | ಶ್ಚಾ | ತ್ತಾ | ಪ | ಹೇ | ದಾ | ಷೇ | ಪ |





## ಪ್ರಶ್ನೆಗಳು ಮತ್ತು ಉತ್ತರಗಳು ೧೦

**(ಹಿರಿಯ ವಿದ್ಯಾರ್ಥಿಗಳಿಗೆ)**

1. **ದೇವರು ಕುಟುಂಬದ ಎಲ್ಲಾ ಸದಸ್ಯರನ್ನು, ಪಟ್ಟಣದ ಅಥವಾ ದೇಶದ ನಿವಾಸಿಗಳನ್ನು ಕ್ರಮಪಡಿಸುತ್ತಾನೆಯೇ? ಯಾವುದಾದರು ಉದಾಹರಣೆಗಳು ಇವೆಯೇ? (ಹೌದು, ದೇವರು ಅನೇಕ ಸಲ ಇಡೀ ಪಟ್ಟಣವನ್ನು ಕ್ರಮಶಿಕ್ಷಣಕ್ಕೆ ಒಳಪಡಿಸಿರುವದನ್ನು ಸತ್ಯವೇದವು ತಿಳಿಸುತ್ತದೆ. ಉದಾಹರಣೆಗೆ, ದೇವರು ಸೊದೊಮ್ ಗೊಮೋರ ಪಟ್ಟಣಗಳನ್ನು ಶಿಕ್ಷಿಸಿದನು. ಮತ್ತೊಂದು ಉದಾಹರಣೆ ಏನೆಂದರೆ ಇಸ್ರಾಯೇಲ್ ಜನರು ಅರಣ್ಯದಲ್ಲಿ ಬಸವನ ವಿಗ್ರಹವನ್ನು ಮಾಡಿದಾಗ, ದೇವರು ಅವರೆಲ್ಲರನ್ನು ನಾಶ ಮಾಡಬೇಕೆಂದಿದ್ದನು, ಆದರೆ ಮೋಶೆ ಕರುಣೆ ತೋರುವಂತೆ ಬೇಡಿಕೊಂಡನು ಮತ್ತು ದೇವರು ಶಾಂತನಾದನು. ಮೋಶೆ ವಿಗ್ರಹವನ್ನು ಸುತ್ತುಬಿಟ್ಟನು ಮತ್ತು ಅದರ ಬೂದಿಯನ್ನು ನೀರಿಗೆ ಕಲಿಸಿ, ಶಿಕ್ಷೆಯಾಗಿ ಅದನ್ನೇ ಅವರಿಗೆ ಕುಡಿಸಿದನು (ವಿಮೋಚನಕಾಂಡ 32). ಒಮ್ಮೆ ಅವುಗಳು ಸುಮಾರು 3 ಸಾವಿರ ಜನರನ್ನು ಕೊಂದವು, ಇನ್ನೊಮ್ಮೆ ದೇವರು ಅವರಲ್ಲ ವ್ಯಾಧಿಯನ್ನು ಬರಮಾಡಿದನು. ದೇವರು ಸೌಲನಿಂದ ಮಾತ್ರವಲ್ಲ ಬದಲಾಗಿ ಅವನ ಮಕ್ಕಳಿಂದಲೂ ರಾಜ್ಯವನ್ನು ಕಿತ್ತುಕೊಂಡನು. ಈಗಿನ ದಿವಸಗಳಲ್ಲಿ ನಾವು ದೇಶಗಳ ಬಗ್ಗೆ ಅಥವಾ ಪಟ್ಟಣಗಳ ಬಗ್ಗೆ ಅಥವಾ ಕುಟುಂಬಗಳ ಬಗ್ಗೆಯೂ ಮಾತನಾಡಬಹುದಾಗಿದೆ. ಆದರೆ ಎದುರಾಗುವ ಕೆಟ್ಟ ಕಾರ್ಯಗಳೆಲ್ಲವೂ ಶಿಕ್ಷೆಯಾಗಿವೆ ಎಂದು ಹೇಳದಂತೆ ಎಚ್ಚರವಹಿಸಬೇಕು. ಜನರಿಗೆ ಸಂಭವಿಸಿರುವ ಅನೇಕ ಕೆಟ್ಟ ಕಾರ್ಯಗಳ ಬಗ್ಗೆ ಯೇಸು ಕ್ರಿಸ್ತನು ಉದಾಹರಣೆಯಾಗಿ ಹೇಳಿದ್ದಾನೆ, ಆದರೆ ಅವುಗಳಿಗೆಲ್ಲಾ ಜನರ ಪಾಪಗಳೇ ಕಾರಣ ಎಂಬದಾಗಿ ಆತನು ಎಲ್ಲಿಯೂ ಹೇಳಿಲ್ಲ. (ಲೂಕ 13:1-5) ದೇವರು ನಮ್ಮ ಹಿತವನ್ನು ಬಯಸುವವನಾದ್ದರಿಂದ ನಾವು ಆತನ ಕರುಣೆಯನ್ನು ಬೇಡಿಕೊಳ್ಳಬಹುದು, ನಾವು ಕೆಟ್ಟ ಕುಟುಂಬ ಅಥವಾ ಕೆಟ್ಟ ಪಟ್ಟಣದಲ್ಲಿದ್ದರೂ ದೇವರು ನಮಗೆ ಕೃಪೆ ತೋರಿಸುತ್ತಾನೆ ಮತ್ತು ಅವುಗಳಿಂದ ಹೊರಬರಲು ದೇವರು ಸಹಜವಾಗಿಯೇ ನಮಗೆ ಸಹಾಯ ಮಾಡುತ್ತಾನೆ.)**
2. **ಕಡೆಯದಾಗಿ ನಿಮಗೆದುರಾದ ಕ್ರಮಶಿಕ್ಷಣ ಯಾವುದು? ಯಾಕೆ? (ನಿಮ್ಮ ಅನುಭವ ಹಂಚಿಕೊಳ್ಳಿರಿ.)**
3. **ತಪ್ಪು ಮಾಡಿದವರಿಗೆ ಶಿಕ್ಷಿಸಲು ಆರಕ್ಷಕರು ಅಥವಾ ರಾಜಕಾರಣಿಗಳು ಇರುವಾಗ, ಕೆಟ್ಟವರು ಕೆಟ್ಟತನ ಮಾಡಲು ಯಾಕೆ ಬಿಡುತ್ತಾರೆ ಮತ್ತು ಒಳ್ಳೆಯವರನ್ನು ಅವರು ಸುಲುಕೊಳ್ಳುವಾಗ ಯಾಕೆ ಸುಮ್ಮನಿರುತ್ತಾರೆ? (ಇಲ್ಲಿನ ವಿಷಯವೇನೆಂದರೆ ಎಲ್ಲರೂ ಒಟ್ಟಾಗಿ ಇಂದು ಲೋಕದಲ್ಲಿರುವ ಅನ್ಯಾಯದ ಬಗ್ಗೆ ಮಾತನಾಡಬೇಕು ಮತ್ತು ಅನ್ಯಾಯದಿಂದ ತುಂಬಿರುವ ಈ ಲೋಕದಲ್ಲಿ ನಾವು ಜೀವಿಸುವಾಗ ದೇವರು ಮಾತ್ರವೇ ನಮಗೆ ಸಮಾಧಾನ ಕೊಡುತ್ತಾನೆ ಎಂಬ ಮುಕ್ತಾಯಕ್ಕೆ ಬರಬೇಕು. ನಿರ್ದಿಷ್ಟವಾದ ಸಂಗತಿಗಳು ನೀವು ಯಾವ ದೇಶ ಅಥವಾ ಕ್ಷೇತ್ರದಲ್ಲಿ ಇದ್ದೀರಿ ಎಂಬದನ್ನು ದೃಢಪಡಿಸುತ್ತದೆ.)**

## ಆಟ ೧೦

**ಸರಿ ಅಥವಾ ತಪ್ಪು**



ಒಂದು ಮಗು ಗುಂಪಿನ ಎದುರು ನಿಂತು, “ಯೋನ ನಾವೆಯನ್ನು ಕಟ್ಟಿದನು” ಎಂದು ಹೇಳಬೇಕು, ಮಕ್ಕಳು ಅದು ಸರಿಯೋ ಅಥವಾ ತಪ್ಪೋ ಎಂದು ಹೇಳಬೇಕು. ಒಂದುವೇಳೆ ಅದು ಸರಿ ಎಂಬದಾಗಿ ಅವರಿಗೆ ಅನ್ನಿಸಿದರೆ ಅವರು ತಮ್ಮ ಹೆಬ್ಬೆರಳು ತೋರಿಸಬೇಕು ಮತ್ತು ಅದು ತಪ್ಪು ಎಂಬದಾಗಿ ಅವರಿಗೆ ಅನ್ನಿಸಿದರೆ ಅವರು ತಮ್ಮ ಹೆಬ್ಬೆರಳನ್ನು ಕೆಳಗೆ ಮಾಡಬೇಕು. ಉತ್ತರ ಸರಿಯೋ ತಪ್ಪೋ ಎಂದು ಟೀಚರ್ ಕಡೆಯದಾಗಿ ಹೇಳುವರು. ತಪ್ಪು ಉತ್ತರ ಹೇಳಿದವರು ಎದ್ದು ನಿಂತು ಗುಂಪಿನ ಸುತ್ತಲೂ ಒಂದು ಸಾರಿ ಓಡಬೇಕು, ಮತ್ತು ಮುಗಿಸಿದ ಕೂಡಲೇ ಸ್ಥಳವನ್ನು ಹಿಡಿದುಕೊಳ್ಳಬೇಕು, ಯಾರಿಗೆ ಸ್ಥಳ ಸಿಗುವದಿಲ್ಲವೋ ಅವರು ಮುಂದಿನ ಸುತ್ತಿನಲ್ಲಿ ಪ್ರಶ್ನೆ ಕೇಳಬೇಕು.




## ಹಾಜರಾತಿ ೧೦

ತರಗತಿಯಲ್ಲಿ ಭಾಗವಹಿಸಿದ್ದಕ್ಕೆ ಮಕ್ಕಳಿಗೆ ಇಂದಿನ ಕಾರ್ಡ್ ಕೊಡಿರಿ. ವೀರರ ಆಟವನ್ನು ಆಡಲು ಮತ್ತೊಂದು ಕಾರ್ಡ್ ಪಡೆಯುವ ಸಲುವಾಗಿ ಮುಂದಿನ ವಾರ ತರಗತಿ ಬರುವಂತೆ ಅವರನ್ನು ಪ್ರೋತ್ಸಾಹಪಡಿಸಿರಿ ಮತ್ತು ಅಭಿನಂದಿಸಿರಿ.
ಇಂದಿನ ಕಾರ್ಡ್ ಯಾವುದೆಂದರೆ:
ದಾವೀದನು

## ಹೋಮ್ ವರ್ಕ್ ೧೦

“ದೇವರು ನನ್ನನ್ನು ಪ್ರೀತಿಸುತ್ತಾನೆ ಆದ್ದರಿಂದಲೇ ನನ್ನನ್ನು ಕ್ರಮಪಡಿಸುತ್ತಾನೆ” ಈ ವಾಕ್ಯವನ್ನು ಕಂಠಪಾಠ ಮಾಡಿರಿ. ನೀವು ಏನಾದರು ತಪ್ಪು ಮಾಡುವಾಗ ನಿಮ್ಮ ತಂದೆತಾಯಿಗಳು ಅಥವಾ ನಿಮ್ಮ ಟೀಚರ್ ನಿಮ್ಮನ್ನು ಶಿಕ್ಷಿಸುವದಾದರೆ: “ದೇವರು ನನ್ನನ್ನು ಪ್ರೀತಿಸುತ್ತಾನೆ ಆದ್ದರಿಂದಲೇ ನನ್ನನ್ನು ಕ್ರಮಪಡಿಸುತ್ತಾನೆ” ವಾಕ್ಯವನ್ನು ನಿಮ್ಮ ಮನಸ್ಸಿನಲ್ಲಿಯೇ ನೆನಪು ಮಾಡಿಕೊಳ್ಳಿರಿ. ಒಂದುವೇಳೆ “ನಾನು ಯಾವುದೇ ತಪ್ಪು ಮಾಡುವದಿಲ್ಲ! ಅಂಥ ಉದ್ದೇಶವೇ ನನಗೆ ಇಲ್ಲ” ಎಂಬದಾಗಿ ನೀವೇನಾದರೂ ಆಲೋಚಿಸುತ್ತಿರುವದಾದರೆ, ನೀವೇನು ಮಾಡಿದ್ದೀರೋ ಅದನ್ನು ಮತ್ತೊಮ್ಮೆ ನೋಡಿರಿ ಮತ್ತು ನಿಮ್ಮ ಉದ್ದೇಶಗಳನ್ನಲ್ಲ ಬದಲಾಗಿ ನಿಜವಾದ ಕ್ರಿಯೆಗಳನ್ನು ಗಮನಕ್ಕೆ ತಂದುಕೊಳ್ಳಿರಿ. ನಿಮ್ಮನ್ನು ಸಮರ್ಥಿಸಿಕೊಳ್ಳದೆ ಪರಿಣಾಮಗಳನ್ನು ಅಂಗೀಕರಿಸಿಕೊಳ್ಳಿರಿ.

ಓದಿರಿ

ದಿನ 1: 1 ಅರಸು 5:1-5

ದಿನ 2: 1 ಅರಸು 6:1-2,14

ದಿನ 3: 1 ಅರಸು 7:48-51

ದಿನ 4: 1 ಅರಸು 8:22-26

ದಿನ 5: 1 ಅರಸು 8:27-30

# ೧೧. ದೇವರ ಆಲಯ



## ಸತ್ಯವೇದ ಕಥೆ: ಅರಸನಾದ ಸೊಲೊಮೊನನು

**1 ಅರಸು 2:1-4, 3:4-15, 4:29-34, 6:1, 6:37-38, 8:1-8:30**

### ಕಂಠಪಾಠ ವಚನ ೧೧

"ನೀವು ದೇವರ ಆಲಯವಾಗಿದ್ದೀರಿ. ದೇವರ ಆತ್ಮವು ನಿಮ್ಮಲ್ಲಿ ವಾಸಿಸುತ್ತದೆಂದು ನಿಮಗೆ ಚೆನ್ನಾಗಿ ತಿಳಿದಿದೆ." ೧ ಕೊರಿಂಥಿಯರಿಗೆ 3:16



### ಕಥೆಯ ಅವಶ್ಯಕತೆ ೧೧

ಮತ್ತಾಯನಿಗೆ ತನ್ನ ಸ್ನೇಹಿತರಲ್ಲಿ ಒಬ್ಬನು ಧೂಮಪಾನ ಮಾಡುತ್ತಾನೆ ಎಂಬದು ಗೊತ್ತಯಿತು, ಅವನ ಸ್ನೇಹಿತನು ಇವನನ್ನು ಧೂಮಪಾನ ಮಾಡಲು ಆಹ್ವಾನಿಸಿದನು . . .

### ಮುಖ್ಯ ಪಾಠ ೧೧

ಕಳೆದ ವಾರ ನಾವು ನೋಡಿಕೊಂಡ ಅರಸನಾದ ದಾವೀದನು ದೇವರಿಗೆ ಸುಂದರವಾದ ಆಲಯವನ್ನು ನಿರ್ಮಿಸುವ ಮೂಲಕ ಆತನನ್ನು ಘನಪಡಿಸಬೇಕೆಂದು ಬಯಸಿದನು, ಆದರೆ ದಾವೀದನು ರಣವೀರನಾದ್ದರಿಂದ, ಆಲಯವನ್ನು ನಿರ್ಮಿಸಲು ಅವನಿಂದ ಆಗಲಿಲ್ಲ. ಆದ್ದರಿಂದ ದೇವರು ನಿನಗೆ ಬದಲಾಗಿ ನಿನ್ನ ಬಾಧ್ಯಸ್ಥನು ನಿರ್ಮಿಸುವನು ಎಂಬದಾಗಿ ವಾಗ್ದಾನ ಮಾಡಿದನು ಮತ್ತು ಆ ವಾಗ್ದಾನವನ್ನು ಎರಡು ಸಲ ಈಡೇರಿಸಿದನು. ದಾವೀದನ ಮಗನಾದ ಸೊಲೊಮೊನನು ಇಸ್ರಾಯೇಲ್ಯರ ಮುಂದಿನ ಅರಸನಾದನು. ಒಂದುದಿನ ಅವನು ದೇವರಿಗೆ ಸಾವಿರ ಪಶುಗಳನ್ನು ಯಜ್ಞವಾಗಿ ಅರ್ಪಿಸಿದನು. ಯಾಕೋಬ 4:8 ಹೇಳುವದೇನೆಂದರೆ ನಾವು ದೇವರ ಸಮೀಪಕ್ಕೆ ಬರುವಾಗ ಅತನು ನಮ್ಮ ಸಮೀಪಕ್ಕೆ ಬರುತ್ತಾನೆ. ಆ ದಿನ ರಾತ್ರಿ ದೇವರು ಸೊಲೊಮೊನನಿಗೆ ನಿನಗೆ ಏನು ಬೇಕು ಎಂದು ಕೇಳಿದನು. ನೀವು ಕೆಂಪು ಬಣ್ಣದ ಸ್ಪೋರ್ಟ್ಸ್ ಕಾರ್ ಕೇಳಬಹುದು? ಒಳ್ಳೆಯ ಬಟ್ಟೆಗಳನ್ನು ಕೇಳಬಹುದು? ಆದರೆ ಸೊಲೊಮೊನನು ತನ್ನ ಜನರನ್ನು ಮುನ್ನಡೆಸಲು ಜ್ಞಾನವನ್ನು ಬೇಡಿಕೊಂಡನು. ಅಬ್ಬಾ! ದೇವರಿಗೆ ಅವನ ಮನವಿ ಬಹಳ ಇಷ್ಟವಾಯಿತು, ಆದ್ದರಿಂದ ಅವನನ್ನು ಭೂಲೋಕದಲ್ಲಿಯೇ ದೊಡ್ಡ ಜ್ಞಾನಿಯನ್ನಾಗಿ ಮಾಡಿದನು ಮತ್ತು ಅವನಿಗೆ ಐಶ್ವರ್ಯ ಹಾಗೂ ಜಯವನ್ನು ಕೊಟ್ಟನು. ಸೊಲೊಮೊನನು ಒಳಭಾಗದಲ್ಲಿ ಸುಂದರವಾದ ಕೆತ್ತನೆಯುಳ್ಳ ದೊಡ್ಡ ಕಲ್ಲಿನ ಆಲಯವನ್ನು ಕಟ್ಟಿಸಿದನು. ಬಂಗಾರದ ಕೋಣೆಯೊಳಗೆ ಮನುಷ್ಯನಿಗಿಂತ ಎತ್ತರವಾದ ಬಂಗಾರದ ಮೇಣದ ಬತ್ತಿ ಉರಿಯುತ್ತಿದ್ದರೆ ಹೇಗಿರುವದು ಊಹಿಸಿಕೊಳ್ಳಿರಿ. ದೇವಾಲಯವನ್ನು ಪ್ರತಿಷ್ಠಿಸಲು ಸೊಲೊಮೊನನು ಇಸ್ರಾಯೇಲ್ಯರೆಲ್ಲರನ್ನು ಕರಿಸಿ 14 ದಿವಸಗಳ ಕಾಲ ಕೂಟಗಳನ್ನು ನಡೆಸಿದನು. ದೇವರ ಪ್ರಭಾವವು ಗಟ್ಟಿಯಾದ ಮೋಡದ ಹಾಗೆ ದೇವಾಲಯದೊಳಗೆ ಇಳಿದು ಬಂದಿತು. ಅವರು 22,000 ಪಶುಗಳನ್ನು ಮತ್ತು 120,000 ಕುರಿಗಳು ಹಾಗೂ ಆಡುಗಳನ್ನು ಯಜ್ಞವಾಗಿ ಅರ್ಪಿಸಿದರು. ನಂತರ ಸೊಲೊಮೊನನು ತನಗಾಗಿಯಲ್ಲ ಬದಲಾಗಿ ದೇವಜನರಿಗಾಗಿ ಪ್ರಾರ್ಥನೆ ಮಾಡಿದನು.

ಆ ಆಲಯವು ಈಗ ಇಲ್ಲ ಮತ್ತು ಎರಡನೆಯದೂ ಇಲ್ಲ ಆದರ ದೇವರು ತನ್ನ ವಾಗ್ದಾನವನ್ನು ಉತ್ತಮವಾದ ಆಲಯದ ಮೂಲಕ ನೆರವೇರಿಸಿದ್ದಾನೆ. ಭೂಲೋಕದಲ್ಲಿರುವಾಗ ಯೇಸು ಕ್ರಿಸ್ತನು ಹೇಳಿದ್ದೇನಂದರೆ ತಾನು ಆಲಯವನ್ನು ಕೆಡವಿ ಮೂರನೆಯ ದಿನದಲ್ಲಿ ಪುನಃ ಕಟ್ಟುವನು (ಯೋಹಾನ 2:19). ಆತನು ಕಣ್ಣಿಗೆ ಕಾಣುವಂಥ ಕಟ್ಟಡವನ್ನಲ್ಲ ಬದಲಾಗಿ ತನ್ನ ಮರಣ ಹಾಗೂ ಪುನರುತ್ಥಾನದಿಂದ ಉಂಟಾಗುವ ಆತ್ಮೀಕವಾದದ್ದರ ಬಗ್ಗೆ ಹೇಳಿದನು. ಇಂದು ಹೊಸ ಆಲಯವು ನಿಮಗೆ ಕಾಣಿಸುತ್ತಿದೆಯೇ? ಹೌದು, ಆದರೆ ಅದು ಈ ಸಭಾ ಕಟ್ಟಡವಲ್ಲ. ನೀವು ದೇವರ ಆಲಯವಾಗಿದ್ದೀರಿ! (ಎಫೆಸ 2:19-22) ಕ್ರೈಸ್ತರಾದ ನಾವು ಕಲ್ಲುಗಳಾಗಿದ್ದೇವೆ. ದೇವಾಲಯವನ್ನು ಪ್ರತಿಷ್ಠಿಸುವಾಗ ಮೇಘವು ಬಂದ ಹಾಗೆ, ದೇವರಾತ್ಮನು ನಮ್ಮೊಳಗೆ

ಜೀವಿಸುವವನಾಗಿದ್ದಾನೆ, ಮತ್ತು ನಾವೆಲ್ಲರೂ ಒಟ್ಟಾಗಿ ಆತ್ಮೀಕ ಆಲಯವಾಗುವದರಿಂದ ದೇವರು ನಮ್ಮೊಳಗೆ ಶಾಶ್ವತವಾಗಿ ವಾಸಿಸುವವನಾಗಿದ್ದಾನೆ.

ದೇವರು ನಿರ್ಮಾಣ ಕಾರ್ಯವನ್ನು ಮುಂದುವರೆಸಿದ್ದಾನೆ ಮತ್ತು ಅದನ್ನು ಸುಂದರವಾಗಿಸುತ್ತಿದ್ದಾನೆ ಹಾಗೂ ಅದರಲ್ಲಿ ಆತನಿಗೆ ಸಹಾಯ ಮಾಡಲು ನಮ್ಮನ್ನು ಆಹ್ವಾನಿಸುತ್ತಿದ್ದಾನೆ. ನೀವು ನಿಮ್ಮ ತರಗತಿಯಲ್ಲಿ ಓದುವವರಿಗೆ ಯೇಸು ಕ್ರಿಸ್ತನ ಬಗ್ಗೆ ಹೇಳಿದರೆ ಅಥವಾ ಸಭೆಯಲ್ಲಿ ಸಹಾಯ ಮಾಡಿದರೆ, ಅದನ್ನು ನಿರ್ಮಿಸಲು ಸಹಾಯ ಮಾಡುವವರಾಗಿದ್ದೀರಿ. ದೇವರ ಆಲಯವನ್ನು ಉತ್ತಮವಾಗಿ ನಿರ್ಮಿಸಲು ಜ್ಞಾನವಿದ್ದರೆ ಮಾತ್ರವೇ ಸಹಾಯವಾಗುತ್ತದೆ. ಸೊಲೊಮೊನನ ಜ್ಞಾನ ಬಹಳ ಪ್ರಸಿದ್ಧವಾದ್ದರಿಂದ ಶೀಬಾ ದೇಶದ ರಾಣಿ ಬಹುದೂರದಿಂದ ಅವನ ಮಾತುಗಳನ್ನು ಕೇಳಿಸಿಕೊಳ್ಳಲು ಬಂದಳು, ಆದರೆ ಯೇಸು ಕ್ರಿಸ್ತನು ಸೊಲೊಮೊನನಿಗಿಂತಲೂ ಪ್ರಸಿದ್ಧನಾಗಿದ್ದಾನೆ (ಮತ್ತಾಯ 12:42). ಯೇಸು ಕ್ರಿಸ್ತನೇ ನಮ್ಮ ಜ್ಞಾನಕ್ಕೆ ಮೂಲವಾಗಿದ್ದಾನೆ, ಆತನನ್ನು ಬೇಡಿಕೊಳ್ಳುವಾಗ ನಮಗೆ ಆತನೇ ಜ್ಞಾನವನ್ನು ದಯಪಾಲಿಸುತ್ತಾನೆ (ಯಾಕೋಬ 1:5). ನೀವು ಒಬ್ಬರನ್ನೊಬ್ಬರು ಪಾಪಕ್ಕೆ ನಡೆಸುವದಾದರೆ, ದುರ್ಬಲ ಹಾಗೂ ಅಸಹ್ಯವಾದದ್ದು ನಿಮ್ಮಿಂದ ನಿರ್ಮಾಣವಾಗುತ್ತದೆ (1 ಕೊರಿಂಥ 3:10-15). ನಿಮಗೆ ಕೇಡುಮಾಡುವವರಿಗೂ ಒಳ್ಳೇದನ್ನೇ ಮಾಡುವಂತೆ ನೀವು ಒಬ್ಬರನ್ನೊಬ್ಬರು ಪ್ರೇರೇಪಿಸುವಾಗ, ಆತನ ಆಲಯ ಸುಂದರವಾಗುವಂತೆ ಮಾಡುವವರಾಗಿದ್ದೀರಿ. ಯೇಸು ಕ್ರಿಸ್ತನು ನಮ್ಮನ್ನು ಪ್ರೀತಿಸಿರುವ ಹಾಗೆಯೇ ನಾವೂ ಒಬ್ಬರನ್ನೊಬ್ಬರು ಪ್ರೀತಿಸಬೇಕೆಂದು ಹೇಳಿದ್ದಾನೆ (ಯೋಹಾನ 13:34). ಬಂಗಾರದ ಹಾಗೆ, ನಾವು ಇತರರನ್ನು ಯಾವ ರೀತಿ ಕಾಣುತ್ತೇವೆ ಎಂಬದರಲ್ಲಿಯೇ ಅದರ ಸೌಂದರ್ಯ ಅಡಕವಾಗಿದೆ. ಆಲಯವು ಬಂಗಾರವನ್ನು ಪರಿಶುದ್ಧವನ್ನಾಗಿಸುತ್ತದೆ ಎಂದು ಯೇಸು ಕ್ರಿಸ್ತನು ಹೇಳಿದ್ದಾನೆ (ಮತ್ತಾಯ 23:17). ಅವಿಶ್ವಾಸಿಗಳಲ್ಲಿ ಬಂಗಾರದಂಥ ಒಳ್ಳೇತನ ಇರಬಹುದು, ಆದರೆ ಯೇಸು ಕ್ರಿಸ್ತನಲ್ಲಿ ನಂಬಿಕೆಯನ್ನಿಟ್ಟರೆ ಮಾತ್ರವೇ ಅವರು ಆತನ ಆಲಯದ ಭಾಗವಾಗುತ್ತಾರೆ.

ಇತರರನ್ನು ಪ್ರೀತಿಸುವ ಮೂಲಕ ಆತನ ಆಲಯವನ್ನು ನಿರ್ಮಿಸಲು ಸಹಾಯ ಮಾಡುವಂತೆ ನನಗೆ ಜ್ಞಾನ ಕೊಡುವಂತೆ ನಾನು ದೇವರನ್ನು ಬೇಡಿಕೊಳ್ಳುತ್ತೇನೆ.

## ವಿಶ್ಲೇಷಣ ೧೧



ಮತ್ತಾಯನಿಗೆ ಇದು ಸರಿಯಲ್ಲ ಎಂದು ಗೊತ್ತಿತ್ತು ಆದ್ದರಿಂದ, “ಸ್ನೇಹಿತನೇ ದಯವಿಟ್ಟು ಧೂಮಪಾನ ಮಾಡಬೇಡ. ನೀನು ನಿನ್ನ ಆರೋಗ್ಯವನ್ನು ನೋಡಿಕೊಳ್ಳಬೇಕು, ಇದರಿಂದ ನಿನ್ನ ದೇಹದ ಅಂಗಗಳು ಹದಗೆಡುತ್ತವೆ ಮತ್ತು ನಿನ್ನ ಜೀವಿತಾವಧಿ ಅಲ್ಪವಾಗುತ್ತದೆ. ಇದಲ್ಲದೆ ನಿನ್ನ ದೇಹ ಪವಿತ್ರಾತ್ಮನ ಆಲಯವಾಗಿದೆ. ದೇವರು ನಿನ್ನೊಳಗೆ ವಾಸಿಸುತ್ತಾನೆ, ನೀನು ನಿನ್ನ ದೇಹವನ್ನು ಕಾಪಾಡಿಕೊಳ್ಳಬೇಕು ಮತ್ತು ಆತನಿಗೆ ಅಗೌರವವನ್ನು ತರಬಾರದು” ಎಂದು ಹೇಳಿದನು.

## ಚಟುವಟಿಕೆ ೧೧

**ಮಾರ್ಷ್ ಮಾಲೋ ಶೂಟರ್**



ಇದನ್ನು ಮಾಡಲು ನಿಮಗೆ ಪ್ಲಾಸ್ಟಿಕ್ ಬಾಟಲ್ ಅಥವಾ ಕಪ್ಸ್, ಬಲೂನ್ ಮತ್ತು ಮಾರ್ಷ್ ಮಾಲೋ ಅಥವಾ ಪೇಪರ್ ಬಾಲ್ ಗಳು ಬೇಕು. ಮೊದಲನೆಯದಾಗಿ ಕಪ್ಸ್ ಗಳ ಕೆಳಭಾಗವನ್ನು ಕತ್ತರಿಸಿರಿ. ನಂತರ ಬಲೂನಿನ ಮೇಲ್ಭಾಗದಲ್ಲಿ ಚಿಕ್ಕದಾಗಿ ಕತ್ತರಿಸಿರಿ. ಬಲೂನಿನ ಕೆಳಭಾಗದಲ್ಲಿ ಗಂಟು ಹಾಕಿರಿ ಮತ್ತು ಮೇಲ್ಭಾಗದಲ್ಲಿ ಕತ್ತರಿಸಿರುವದನ್ನು ಎಳೆದು ಕಪ್ ನ ಮೇಲೆ ಹಾಕಿ ಮುಚ್ಚಿರಿ. ನಂತರ ಮಾರ್ಷ್ ಮಾಲೋ ಅಥವಾ ಪೇಪರ್ ಬಾಲ್ ಗಳನ್ನು ಕಪ್ ನೊಳಗೆ ಹಾಕಿರಿ ಮತ್ತು ಮಾರ್ಷ್ ಮಾಲೋ ಅಥವಾ ಪೇಪರ್ ಬಾಲ್ ಹೊರಬರಲು ಬಲೂನಿನ ಹಿಂಭಾಗ ಹಿಡಿದು ಎಳೆಯಿರಿ. ಬಲೂನ್ ಎಳೆಯುವಾಗ ಯಾರ ಪೇಪರ್ ಬಾಲ್ ದೂರಕ್ಕೆ ಹೋಗುತ್ತದೆ ಎಂಬದನ್ನು ನೋಡಿರಿ.

## ಟೈಮ್ ಲೈನ್ ೧೧


**ಸೊಲೊಮೊನನು ಯಾವ ಇಸವಿಯಲ್ಲಿ ಜನಿಸಿದನು? ಉ. ನಮಗೆ ನಿಖರವಾಗಿ ಗೊತ್ತಿಲ್ಲ ಆದರೆ ಕ್ರಿ.ಪೂ 989 ರಲ್ಲಿ ಜನಿಸಿದನು ಎಂದು ಕಲಿಸಲಾಗಿದೆ.**

**ಸೊಲೊಮೊನನು ಯಾವ ಇಸವಿಯಲ್ಲಿ ಮೃತಪಟ್ಟನು? ಉ. ನಮಗೆ ನಿಖರವಾಗಿ ಗೊತ್ತಿಲ್ಲ ಆದರೆ ಕ್ರಿ.ಪೂ 931 ರಲ್ಲಿ ಮೃತಪಟ್ಟನು ಎಂದು ಕಲಿಸಲಾಗಿದೆ.**

## ಒಗಟಿನ ಉತ್ತರಗಳು ೧೧

| | | | | | | | | | | |
|---|---|---|---|---|---|---|---|---|---|---|
| ಕ್ರೈ | ದು | ವ | ಟ್ಟು | ಕ | ಟ್ಟು | ಗ | ವಾ | ಸ್ತಿ | ಳು | ಸ |
| ಳು | ಸ | ದು | ವಿ | ನು | ಸ | ರ | ಅ | ಸ್ತ | ನಿ | ಯ |
| ವಾ | ಸ್ತಿ | ದಾ | ಸ್ತ | ಕ್ಷೇ | ಮೊ | ಗಾ | ಗ್ದಾ | ಯ | ಕ್ಷೇ | ದಾ |
| ಯ | ಮೊ | ಕ್ರೈ | ರ | ವಾ | ದು | ಬಂ | ಅ | ನು | ಪ | ರ |
| ಲ | ಜ್ಞ | ದಾ | ಅ | ಯ | ನಿ | ವಾ | ಗ್ದಾ | ನ | ಗ | ಳು |
| ವಾ | ಟ್ಟು | ಲೊ | ದಾ | ಬಂ | ಸ | ವ | ಕ್ರೈ | ಗ | ಳು | ಲೊ |
| ದೇ | ಗ | ಮ | ಗ್ದಾ | ವೀ | ಸೊ | ವಾ | ವೀ | ಆ | ಬಂ | ಕ್ರೈ |
| ಜ್ಞಾ | ನ | ಕ | ಳು | ಸ್ತಿ | ದ | ನು | ತ್ಮ | ನಿ | ಸ್ತಿ | ಮೊ |
| ವಿ | ಕ್ರೈ | ಸೊ | ಲೊ | ಮೊ | ನ | ನು | ನು | ಕ್ಷೇ | ಮೊ | ದು |
| ಸ | ವಿ | ಸ್ತ | ಟ್ಟು | ಮೊ | ದಾ | ವಾ | ನೆ | ರ್ಥ | ಪ್ರಾ | ಯ |





## ಪ್ರಶ್ನೆಗಳು ಮತ್ತು ಉತ್ತರಗಳು ೧೧

**(ಹಿರಿಯ ವಿದ್ಯಾರ್ಥಿಗಳಿಗೆ)**


1. **ನಾವು ಯಾವ ರೀತಿ ನಮ್ಮ ದೇಹಗಳನ್ನು ಹಾಗೂ ಆತ್ಮಗಳನ್ನು ಕಾಪಾಡಿಕೊಳ್ಳಬಹುದು? (ಕೆಲವು ಶಾರೀರಿಕ ಕಾರ್ಯಗಳನ್ನು ಸೂಚಿಸಿರಿ, ಧೂಮಪಾನ ಮಾಡಬಾರದು, ಮಾದಕ ಪದಾರ್ಥ ತೆಗೆದುಕೊಳ್ಳದಿರುವದು, ಮದುವೆಯಾಗುವ ತನಕ ಲೈಂಗಿಕ ಕಾರ್ಯಗಳಲ್ಲಿ ಭಾಗಿಯಾಗದೆ ಕಾಯುವದು, ಮತ್ತು ನೋಡಬಾರದ ದೃಶ್ಯಗಳ ವಿಷಯದಲ್ಲಿ ಎಚ್ಚರಿಕೆಯುಳ್ಳವರಾಗಿರುವದು. ಹಾಗೆಯೇ ಹೃದಯವನ್ನು ಜಾಗರೂಕತೆಯಿಂದ ಕಾಪಾಡಿಕೊಳ್ಳಲು ಗಮನಕೊಡಬೇಕು ಅಂದರೆ ಇತರರನ್ನು ಕ್ಷಮಿಸಬೇಕು, ಇತರರೊಂದಿಗೆ**

ಪ್ರೀತಿ, ಗೌರವದಿಂದ ನಡೆದುಕೊಳ್ಳಬೇಕು, ಪಾಪಗಳಿಗಾಗಿ ಪಶ್ಚಾತ್ತಾಪಪಡುವದು ಮತ್ತು ಒಳ್ಳೆಯ ಮನಸ್ಥಿತಿಯನ್ನು ಕಾಪಾಡಿಕೊಳ್ಳುವದು. ಕಷ್ಟಕರವಾದ ಪಾಪಗಳನ್ನು ಪ್ರಾಯೋಗಿಕವಾಗಿ ಜಯಿಸಬೇಕಾದರೆ ಅದನ್ನು ಸಭಾಪಾಲಕ ಅಥವಾ ಟೀಚರ್ ಗೆ ಅರಿಕೆ ಮಾಡಬೇಕು, ಪ್ರಾರ್ಥನೆ ಮಾಡುವಂತೆ ಹಾಗೂ ಸಹಾಯ ಮಾಡುವಂತೆ ಕೇಳಿಕೊಳ್ಳಬೇಕು. ಉದಾಹರಣೆಗೆ, ವಾರಕ್ಕೊಮ್ಮೆಯಾದರೂ ನೀವು ಪಾಪಕ್ಕೆ ವಿರುದ್ಧ ಮಾಡುತ್ತಿರುವ ಹೋರಾಟದಲ್ಲಿ ಯಾವ ರೀತಿ ಪ್ರಗತಿಯಾಗಿದ್ದೀರಿ ಎಂಬದನ್ನು ಕೇಳುವಂತೆ ಹೇಳಬೇಕು.)

2. ಕ್ರೈಸ್ತನಾಗಿರುವದು ಸಂತೋಷಕರವಾಗಿದೆಯೇ? (ಖಂಡಿತವಾಗಿಯೂ! ಅದೊಂದು ತರಹ ವಿಶೇಷವಾದ ಸಂತೋಷ. ಸುಂದರವಾದ ವ್ಯಕ್ತಿಗಳೊಂದಿಗೆ ಕುಣಿಯುವದರಿಂದ ದೊರೆಯುವಂಥ ಸಂತೋಷ ಇದಲ್ಲ. ಇದು ಭಿನ್ನವಾದದ್ದು, ಇದರಲ್ಲಿ ದೊರೆಯುವ ಸಂತೋಷ, ಸಮಾಧಾನ ಮತ್ತು ಸ್ವಾತಂತ್ರ್ಯ ನಿಜವಾದವುಗಳು ಮತ್ತು ಲೋಕ ಕೊಡೂವಂಥವುಗಳನ್ನು ಮೀರಿದವುಗಳಾಗಿವೆ.)
3. ನನ್ನ ತಂದೆತಾಯಿಗಳು ಯಾವಾಗಲೂ ಯಾಕೆ ನನಗೆ ಬೇಡ ಎಂದು ಹೇಳುತ್ತಾರೆ? (ಯಾಕಂದರೆ ಅವರು ನಿನ್ನನ್ನು ಕಾಪಾಡಲು ಬಯಸುತ್ತಾರೆ.)


## ಆಟ ೧೧

ಬ್ರೋಕನ್ ಫೋನ್



ಎರಡು ತಂಡಗಳನ್ನು ಮಾಡಿರಿ ಮತ್ತು ಅವರನ್ನು ಎರಡೂ ಸಾಲಾಗಿ ನಿಲ್ಲಿಸಿರಿ. ಪ್ರತಿಯೊಂದು ತಂಡದ ಮೊದಲನೆಯ ವ್ಯಕ್ತಿಗೆ ಟೀಚರ್ ಒಂದು ವಾಕ್ಯವನ್ನು ಹೇಳುವರು ಮತ್ತು ಪ್ರತಿಯೊಬ್ಬ ವ್ಯಕ್ತಿ ಸಾಲಿನಲ್ಲಿ ನಿಂತಿರುವ ಮತ್ತೊಬ್ಬನಿಗೆ ವಾಕ್ಯವನ್ನು ಹೇಳಬೇಕು. ಕಡೆಯದಾಗಿ ಯಾವ ತಂಡದವರು ಟೀಚರ್ ಹೇಳಿದ ವಾಕ್ಯವನ್ನು ಸರಿಯಾಗಿ ಹೇಳುತ್ತಾರೋ ಅವರು ಗೆಲ್ಲುತ್ತಾರೆ.

## ಹಾಜರಾತಿ ೧೧




ತರಗತಿಯಲ್ಲಿ ಭಾಗವಹಿಸಿದ್ದಕ್ಕೆ ಮಕ್ಕಳಿಗೆ ಇಂದಿನ ಕಾರ್ಡ್ ಕೊಡಿರಿ. ವೀರರ ಆಟವನ್ನು ಆಡಲು ಮತ್ತೊಂದು ಕಾರ್ಡ್ ಪಡೆಯುವ ಸಲುವಾಗಿ ಮುಂದಿನ ವಾರ ತರಗತಿ ಬರುವಂತೆ ಅವರನ್ನು ಪ್ರೋತ್ಸಾಹಪಡಿಸಿರಿ ಮತ್ತು ಅಭಿನಂದಿಸಿರಿ. ಇಂದಿನ ಕಾರ್ಡ್ ಯಾವುದೆಂದರೆ:

ಸೊಲೊಮೊನನು

## ಹೋಮ್ ವರ್ಕ್ ೧೧

ಈ ವಾರದ ನಿಮ್ಮ ಹೋಮ್ ವರ್ಕ್ ಏನೆಂದರೆ ವಾರದ ಎಲ್ಲಾ ದಿವಸಗಳು ಯಾರನ್ನಾದರೂ, ಅದರಲ್ಲಿಯೂ ವಿಶೇಷವಾಗಿ ನಿಮ್ಮ ಸಭೆ ಅಲ್ಲದೆ ಬೇರೆ ಸಭೆಗೆ ಹೋಗುವವರನ್ನು ಪ್ರೋತ್ಸಾಹಪಡಿಸಬೇಕು. ಒಂದುವೇಳೆ ಯಾರಾದರೂ ಒಳ್ಳೆಯ ಕಾರ್ಯ ಮಾಡುತ್ತಿರುವದನ್ನು ನೋಡಿದರೆ ಅವರನ್ನು ಅಭಿನಂದಿಸಿರಿ. ಯೇಸು ಕ್ರಿಸ್ತನಲ್ಲಿ ನಂಬಿಕೆಯನ್ನಿಟ್ಟಿರುವ ಯಾರಾದರೂ ಮಕ್ಕಳು ತಪ್ಪು ಮಾಡುತ್ತಿರುವದನ್ನು ನೀವು ನೋಡಿದರೆ, ಸರಿಯಾದ ಕಾರ್ಯವನ್ನು ಮಾಡುವಂತೆ ತಾಳ್ಮೆಯಿಂದ ಅವರಿಗೆ ಹೇಳಿರಿ: "ನೀವು ಮಾಡುತ್ತಿರುವದು ತಪ್ಪು" ಎಂದು ಒರಟಾಗಿ ಹೇಳಬೇಡಿರಿ ಬದಲಾಗಿ "ಹೀಗೆ ಮಾಡುವದು ದೇವರಿಗೆ ಇಷ್ಟವಿಲ್ಲ. ಆದ್ದರಿಂದ ದಯವಿಟ್ಟು ಬದಲಾಗಿ" ಎಂದು ಹೇಳಿರಿ ಹಾಗೂ ಅವರಿಗೆ ಒಳ್ಳೆಯ ಬುದ್ದಿಮಾತು ಹೇಳಿರಿ. ಹಾಗೆಯೇ ಮತ್ತಾಯ 5-7 ಅಧ್ಯಾಯಗಳಲ್ಲಿ ಬರೆಯಲ್ಪಟ್ಟಿರುವ ಪರ್ವತ ಪ್ರಸಂಗವನ್ನು ಸಹ ಓದಿರಿ.

ಓದಿರಿ

ದಿನ 1: 1 ಅರಸು 17:1-6

ದಿನ 2: 1 ಅರಸು 17:7-11

ದಿನ 3: 1 ಅರಸು 17:12-16

**ದಿನ 4: 1 ಅರಸು 17:17-19**

**ದಿನ 5: 1 ಅರಸು 17:20-24**

# ೧೨. ದೇವರು ನಮ್ಮನ್ನು ನೋಡುತ್ತಾನೆ



**ಸತ್ಯವೇದ ಕಥೆ: ಎಲೀಯ**

**1 ಅರಸು 17:1-24**

## ಕಂಠಪಾಠ ವಚನ ೧೨

**"ನೀವಾದರೋ ಮೊದಲು ದೇವರ ಸಾಮ್ರಾಜ್ಯಕ್ಕಾಗಿ, ಅವರ ಸತ್ಸಂಬಂಧಕ್ಕಾಗಿ ತವಕಪಡಿ. ಇದರೊಂದಿಗೆ ಅವೆಲ್ಲವೂ ನಿಮಗೆ ನೀಡಲಾಗುವುದು. "ಮತ್ತಾಯ 6:33**

## ಕಥೆಯ ಅವಶ್ಯಕತೆ ೧೨



ಒಂದುದಿನ ಆಶಾ ಬಹಳ ಸಂತೋಷವಾಗಿ ಮುಂಜಾನೆಯೇ ಎದ್ದಳು. ತನ್ನ ಅಮ್ಮನ ಮೇಲೆ ತನಗೆಷ್ಟು ಪ್ರೀತಿ ಇದೆ ಎಂಬದನ್ನು ತೋರಿಸಲು ಆಕೆ ಅಂದು ವಿಶೇಷವಾದ ಕಾರ್ಯವನ್ನು ಮಾಡಬೇಕೆಂದಿದ್ದಳು. ಆಕೆ ತೋಟಕ್ಕೆ ಹೋದಳು, ತಾಯಿಗೆ ಇಷ್ಟವಾಗುವ ಸ್ಥಳದಲ್ಲಿ ಇಡಲು ಸುಂದರವಾದ ಗುಲಾಬಿ ಹೂವುಗಳನ್ನು ಕಿತ್ತು ತಂದಳು, ನಂತರ ತಾಯಿಗೆ ಇಷ್ಟವಾಗುವ ತಿಂಡಿಯನ್ನು ಮಾಡಲು ಅಡುಗೆ ಮನೆಗೆ ಹೋದಳು. ಎಲ್ಲವನ್ನೂ ವಿಶೇಷವಾದ ರೀತಿಯಲ್ಲಿ ಏರ್ಪಡಿಸಿದ ನಂತರ, "ಇದು ಉತ್ತಮವಾಗಿರುತ್ತದೆ" ಎಂದು ಹೇಳಿದಳು.

ಅಂತಿಮವಾಗಿ ಅವಳ ಅಮ್ಮ ನಿದ್ದೆಯಿಂದ ಎದ್ದರು. ಆಶಾ ಎಲ್ಲಾ ಸಿದ್ಧಮಾಡಿ ಅಡುಗೆಮನೆಯಲ್ಲಿ ಕಾಯುತ್ತಿದ್ದಳು. ಆಶಾಳ ತಾಯಿ ಹೊರಗೆ ಬಂದಾಗ . . . ಹೂವುಗಳಿಗೆ ಆದ್ಯತೆಯನ್ನು ಕೊಡಲಿಲ್ಲ, ಆಶಾಳನ್ನು ನೋಡಿ ಗುಡ್ ಮಾರ್ನಿಂಗ್ ಸಹ ಹೇಳಲಿಲ್ಲ. ತಿಂಡಿ ತಿಂದ ನಂತರವೂ ಆಶಾಳಿಗೆ ಧನ್ಯವಾದ ಸಹ ಹೇಳಲಿಲ್ಲ.

ಆಶಾಳಿಗೆ ಬಹಳ ಬೇಸರವಾಯಿತು, ಅಮ್ಮನಿಗೆ ನನ್ನ ಮೇಲೆ ಪ್ರೀತಿಯಿಲ್ಲ ಎಂದು ನೆನೆಸಿ ಅವಳು ಮಲಗುವ ಕೋಣೆಗೆ ಓಡುತ್ತಾ ಹೋದಳು.

## ಮುಖ್ಯ ಪಾಠ ೧೨

ನಂಬಿಕೆಯ ವೀರರಿಗೆ ಪುನಃ ಸ್ವಾಗತ! ಕಳೆದ ವಾರ ನಾವು ಅರಸನಾದ ಸೊಲೊಮೊನನು ಕಟ್ಟಿಸಿದ ಆಲಯದ ಬಗ್ಗೆ ಕಲಿತುಕೊಂಡೆವು. ಅದಾದ ನಂತರ ರಾಜ್ಯವನ್ನು ಇಸ್ರಾಯೇಲ್ ಮತ್ತು ಯೆಹೂದ ಎಂದು ವಿಭಾಗಿಸಲಾಯಿತು. ಕೆಲವು ವರ್ಷಗಳಾದ ನಂತರ ಅರಸನಾದ ಅಹಾಬನು ದುಷ್ಟಳಾಗಿದ್ದ ತನ್ನ ಹೆಂಡತಿ ಇಜಬೇಲಳೊಂದಿಗೆ ಇಸ್ರಾಯೇಲಿನ ಮೇಲೆ ಆಳ್ವಿಕೆ ಮಾಡಿದನು. ಅವರ ದುಷ್ಟತನದ ನಿಮಿತ್ತ, ಕೆಲವು ವರ್ಷಗಳ ಕಾಲ ಮಳೆ ಬರುವದಿಲ್ಲ ಎಂಬದಾಗಿ ಹೇಳಲು ದೇವರು ಎಲೀಯ ಎಂಬ ಪ್ರವಾದಿಯನ್ನು ಅವರ ಬಳಿಗೆ ಕಳುಹಿಸಿದನು. ಆ ಸಮಯದಲ್ಲಿ ಎಲೀಯನು ಒಂದು ಹಳ್ಳದಲ್ಲಿ ಅಡಗಿಕೊಂಡಿದ್ದನು. ಯಾರೇ ನಮ್ಮನ್ನು ನೋಡದಿದ್ದರೂ ನಾವು ಯಾವ ಪರಿಸ್ಥಿತಿಯಲ್ಲಿದ್ದೇವೆ ಎಂಬದನ್ನು ದೇವರು ಯಾವಾಗಲೂ ನೋಡುವವನಾಗಿರುತ್ತಾನೆ, ಇಂದು ನಾವು

ಓದಿದ ಆಶಾಳ ಕಥೆಯಲ್ಲಿಯೂ ಹೀಗೆಯೇ ಆಯಿತು. ನೀವು ಇತರರಿಗಾಗಿ ಮಾಡುವ ಯಾವ ಕಾರ್ಯವೂ ವ್ಯರ್ಥವಾಗುವದಿಲ್ಲ. ದೇವರು ನಮ್ಮ ಅವಶ್ಯಕತೆಗಳನ್ನು ಪೂರೈಸುತ್ತಾನೆ, ಅವುಗಳನ್ನು ಪೂರೈಸಲು ಆತನಿಗೆ ಹಣ ಅಥವಾ ಬೇರೆ ಯಾವುದರ ಅವಶ್ಯಕತೆಯೂ ಇಲ್ಲ. ದೇವರು ಎಲೀಯನಿಗೆ ಬುಗ್ಗೆಯಿಂದ ನೀರು ಮತ್ತು ಕಾಗೆಗಳ ಮೂಲಕ ದಿನಕ್ಕೆ ಎರಡು ಸಲ ರೊಟ್ಟಿ ಹಾಗೂ ಮಾಂಸವನ್ನು ಒದಗಿಸಿದನು. ಕಾಗೆ ನಿಮ್ಮ ಬಳಿಗೆ ಬಂದು ನಿಮಗೆ ತಿನ್ನಲು ರೊಟ್ಟಿ ಕೊಡುವದು ಹೇಗಿರುತ್ತದೆ ಎಂಬದನ್ನು ಊಹಿಸಿಕೊಳ್ಳಿರಿ! ಯೇಸು ಕ್ರಿಸ್ತನು ಹೇಳಿರುವದೇನೆಂದರೆ ಚಿಂತೆಮಾಡಬೇಡಿರಿ ಯಾಕಂದರೆ ಆತನು ಆಕಾಶದ ಹಾರುವ ಪಕ್ಷಿಗಳಿಗೂ ಆಹಾರ ಕೊಡುತ್ತಾನೆ (ಮತ್ತಾಯ 6:26), ಮತ್ತು ಈ ಕಥೆಯಲ್ಲಿ, ಎಲೀಯನಿಗೆ ಆಹಾರ ಕೊಡಲು ದೇವರು ಪಕ್ಷಿಗಳನ್ನು ಉಪಯೋಗಿಸಿಕೊಂಡನು. ಹಳ್ಳದ ನೀರು ಬತ್ತಿಹೋದಾಗ, ದೇವರು ಎಲೀಯನನ್ನು ಬೇರೊಂದು ಸ್ಥಳಕ್ಕೆ ಕಳುಹಿಸಿದನು ಅದು ಐಶ್ವರ್ಯವಂತನ ಮನೆಯಾಗಿರಲಿಲ್ಲ ಬದಲಾಗಿ ಅನ್ಯದೇಶದ ವಿಧವೆಯ ಮನೆಯಾಗಿತ್ತು. ಎಲೀಯನು

ರೊಟ್ಟಿಯನ್ನು ಕೇಳಿದಾಗ, ನಮ್ಮ ಮನೆಯಲ್ಲಿ ಸ್ವಲ್ಪವೇ ಹಿಟ್ಟು ಮತ್ತು ಎಣ್ಣೆಯಿದೆ, ಅದು ತೀರಿದ ಮೇಲೆ ತಾವು ಸಾಯುವದಾಗಿ ಆಕೆ ಅವನಿಗೆ ಹೇಳಿದಳು. ನೀವು ಎಂದಾದರು ಭರವಸೆಯ ಆಟ ಆಡಿದ್ದೀರೋ, ಅದರಲ್ಲಿ ನೀವು ಹಿಂದಕ್ಕೆ ಓಡುತ್ತಾ ಬೀಳುವದಾದರೆ ನಿಮ್ಮ ಸ್ನೇಹಿತನು ನೀವು ನೆಲಕ್ಕೆ ಬೀಳುವ ಮೊದಲೇ ನಿಮ್ಮನ್ನು ಹಿಡಿದುಕೊಳ್ಳಬೇಕು? (ಬೇಕಿದ್ದರೆ ಒಬ್ಬರನ್ನು ಮುಂದೆ ಕರೆದು ಮಾಡಿ ತೋರಿಸಿರಿ). ಕೆಲವೊಮ್ಮೆ ದೇವರು ಕಡೆಯ ಕ್ಷಣದ ತನಕ ಕಾಯುತ್ತಾನೆ, ಯಾಕಂದರೆ ಅದು ಆತನಲ್ಲಿ ನಿಮಗಿರುವ ನಂಬಿಕೆ ಹಾಗೂ ಭರವಸೆಯನ್ನು ಹೆಚ್ಚಿಸುತ್ತದೆ ಎಂಬದು ಆತನಿಗೆ ಗೊತ್ತಿದೆ. ಎಲೀಯ ಆಕೆಗೆ ಚಿಂತೆಮಾಡಬೇಡ ನನಗೆ ರೊಟ್ಟಿ ಮಾಡಿಕೊಂಡು ಬಾ ಎಂದು ಹೇಳಿದನು. ಇದೇ ಪ್ರಕಾರ, ಯೇಸು ಕ್ರಿಸ್ತನು ನಮಗೆ ಮೊದಲು ದೇವರ ರಾಜ್ಯಕ್ಕಾಗಿ ತವಕಪಡಿರಿ, ನಾನು ನಿಮ್ಮ ಎಲ್ಲಾ ಅವಶ್ಯಕತೆಗಳನ್ನು ಪೂರೈಸುವೆನು ಎಂದು ಹೇಳಿದಾನೆ (ಮತ್ತಾಯ 6:33). ಆಕೆಯ ಮನೆಯಲ್ಲಿದ್ದ ಹಿಟ್ಟು ಮತ್ತು ಎಣ್ಣೆ ಅದ್ಭುತರೀತಿಯಾಗಿ ಕೊನೆಯಾಗಲೇ ಇಲ್ಲ ಹಾಗೂ ಅವರ ಮನೆಯಲ್ಲಿ ತಿನ್ನಲು ರೊಟ್ಟಿ ಯಾವಾಗಲೂ ಇತ್ತು. ಒಂದುವೇಳೆ ನೀವೇನಾದರೂ, "ಈ ವಾರ ನನಗೆ ತಿನ್ನಲು ಏನು ಸಿಗುತ್ತದೆ? ಶಾಲೆಯ ಸಮವಸ್ತ್ರ ನನಗೆ ಎಲ್ಲಿ ಸಿಗುತ್ತದೆ?" ಎಂದು ಕೇಳುವದಾದರೆ, ದೇವರು ಹೇಗೆ ಒದಗಿಸುತ್ತಾನೆ ಎಂಬದನ್ನು ಗಮನಿಸಿರಿ. ನಂತರ ಅದರ ಬಗ್ಗೆ ಯಾರಿಗಾದರೂ ಹೇಳಿರಿ ಮತ್ತು ಬರೆದಿಟ್ಟುಕೊಳ್ಳಿರಿ, ಆಗ ನಂತರದಲ್ಲಿ ನೆನಪು ಮಾಡಲು ಸಾಧ್ಯವಾಗುತ್ತದೆ. ದೇವರು ಈಗಾಗಲೇ ನಿಮಗೆ ಒದಗಿಸುವದನ್ನು ನೀವು ನೋಡಿದ್ದೀರೋ? (ಸಂಕ್ಷಿಪ್ತವಾಗಿ ತಮ್ಮ ಸಾಕ್ಷಿ ಹಂಚಿಕೊಳ್ಳಲು ಅವಕಾಶ ಕೊಡಿರಿ.)

ದೇವರು ನಮಗೆ ಆಹಾರ ಮತ್ತು ವಸ್ತ್ರವನ್ನು ಮಾತ್ರವಲ್ಲ ಬದಲಾಗಿ ಜೀವವನ್ನು ಒದಗಿಸುತ್ತಾನೆ. ವಿಧವೆಯ ಮಗ ಅನಾರೋಗ್ಯದಿಂದ ಮೃತಪಟ್ಟನು, ಆಗ ಎಲೀಯನು ಆ ಹುಡುಗನಿಗಾಗಿ ಮೂರು ಸಲ ಪ್ರಾರ್ಥನೆ ಮಾಡಿದನು. ನೀವು ನಂಬಿಕೆಯಿಲ್ಲದಿರುವ ನಿಮ್ಮ ಕುಟುಂಬದವರು ಹಾಗೂ ಸ್ನೇಹಿತರಿಗಾಗಿ ಪ್ರಾರ್ಥನೆ ಮಾಡಿರಿ, ಒಮ್ಮೆ ಮಾತ್ರವಲ್ಲ ಬದಲಾಗಿ ಮತ್ತೆಮತ್ತೆ ಪ್ರಾರ್ಥನೆ ಮಾಡಿರಿ. ಎಲೀಯನು ಮೂರು ಸಲ ಪ್ರಾರ್ಥನೆ ಮಾಡಿದ ನಂತರ, ದೇವರು ಆ ಹುಡುಗನಿಗೆ ಮತ್ತೆ ಜೀವ ಕೊಟ್ಟನು! ಯೇಸು ಕ್ರಿಸ್ತನು ಮೃತಪಟ್ಟನು, ಮೂರನೆಯ ದಿನದಲ್ಲಿ ಎದ್ದು ಬಂದನು ಮತ್ತು ಶಾಶ್ವತವಾಗಿ ಜೀವಿಸುತ್ತಿದ್ದಾನೆ. ನಮ್ಮ ಶಾರೀರಿಕ ದೇಹಗಳು ಮೃತಪಡುತ್ತವೆಯಾದರೂ, ನಮ್ಮೆಲ್ಲರಿಗೂ ಶಾಶ್ವತವಾಗಿ ಜೀವಿಸುವ ಆತ್ಮವಿದೆ. ಯೇಸು ಕ್ರಿಸ್ತನು ಹೇಳಿರುವದೇನೆಂದರೆ ವೈರಿಯಾಗಿರುವ ಸೈತಾನನು ಕದ್ದುಕೊಳ್ಳಲು, ಕೊಲ್ಲಲು ಮತ್ತು ಹಾಳುಮಾಡಲು ಬರುತ್ತಾನೆ ಆದರೆ ಯೇಸು ಕ್ರಿಸ್ತನು ನಮಗೆ ಸಮೃದ್ಧವಾದ ಜೀವವು ಸಿಗಲಿ ಎಂಬದಕ್ಕಾಗಿ ಬಂದನು (ಯೋಹಾನ 10:10). ಯೇಸು ಕ್ರಿಸ್ತನ ಮೂಲಕ ನೀವು ಪರಲೋಕದಲ್ಲಿ ದೇವರೊಂದಿಗೆ ಶಾಶ್ವತವಾಗಿ ಜೀವಿಸಬಹುದು.

ದೇವರು ನನ್ನನ್ನು ನೋಡುತ್ತಾನೆ ಎಂದು ನಾನು ನಂಬುತ್ತೇನೆ. ದೇವರು ನನ್ನನ್ನು ಪ್ರೀತಿಸುತ್ತಾನೆ ಮತ್ತು ಯಾವಾಗಲೂ ನನ್ನ ಅವಶ್ಯಕತೆಯನ್ನ ಪೂರೈಸುತ್ತಾನೆ.

## ವಿಶ್ಲೇಷಣ ೧೨



ಮಾರಣೆಯ ದಿನ ಸಂಡೇ ಸ್ಕೂಲ್ ನಲ್ಲಿ, ದೇವರು ಎಲ್ಲವನ್ನು ನೋಡುತ್ತಾನೆ ಎಂಬದನ್ನು ಅವರು ಕಲಿತುಕೊಂಡರು. ಟೀಚರ್ ತರಗತಿಯಲ್ಲಿರುವ ಎಲ್ಲಾ ಮಕ್ಕಳಿಗೆ ಹೂವನ್ನು ಕೊಟ್ಟರು. ಆಶಾ ತನ್ನ ತಾಯಿಗಾಗಿ ಮಾಡಿದ ಕಾರ್ಯಕ್ಕಾಗಿ ದೇವರು ಆಕೆಗೆ "ಒಳ್ಳೆಯ ಕಾರ್ಯಮಾಡಿರುವೆ" ಎಂಬದಾಗಿ ಹೇಳುತ್ತಿದ್ದಾನೆ ಎಂಬದನ್ನು ಅರಿತುಕೊಂಡಳು.

## ಚಟುವಟಿಕೆ ೧೨

ಗುಡ್ ಮಾರ್ನಿಂಗ್ ಕರ್ತನೇ




ಹಾಳೆಯ ಮೇಲೆ ನೀವು ಅಥವಾ ಮಕ್ಕಳು "ಕರ್ತನೇ ಗುಡ್ ಮಾರ್ನಿಂಗ್" ಎಂದು ಬರೆಯಿರಿ. ಅದನ್ನು ಮಾರ್ಕರ್ಸ್, ಬಣ್ಣದ ಬಳಪ ಇತ್ಯಾದಿಗಳಿಂದ ಅಲಂಕರಿಸಿರಿ. ಮಕ್ಕಳು ಅದನ್ನು ತಮ್ಮ ಬೆಡ್ ರೂಮ್ ನಲ್ಲಿ ಹಾಕಬಹುದು ಅಥವಾ ತಮ್ಮ ಹಾಸಿಗೆಯ ಎದುರು ಹಾಕಿಕೊಳ್ಳಬಹುದು. ಅವರು ಪ್ರತಿದಿನ ಏಳುವಾಗ ಅದನ್ನು ಓದಬೇಕು ಮತ್ತು ದೇವರಿಗೆ, "ಗುಡ್ ಮಾರ್ನಿಂಗ್ ಕರ್ತನೇ" ಎಂದು ಹೇಳಬೇಕು. ದೇವರು ಯಾವಾಗಲೂ ಅವರ ಜೊತೆಯಲ್ಲಿದ್ದಾನೆ ಎಂಬದನ್ನು ಅವರು ನೆನಪಿಸಿಕೊಳ್ಳಲು ಇದರಿಂದ ಸಾಧ್ಯವಾಗುತ್ತದೆ.

## ಟೈಮ್ ಲೈನ್ ೧೨

**ಎಲೀಯ ಮತ್ತು ವಿಧವೆಯ ಕಥೆ ಯಾವ ಇಸವಿಯಲ್ಲಿ ಸಂಭವಿಸಿದವು? ಉ. ಬಹುಶಃ ಕ್ರಿ.ಪೂ 868 ರಲ್ಲಿ ಇರಬಹುದು.**

## ಒಗಟಿನ ಉತ್ತರಗಳು ೧೨

| | | | | | | | | | | | |
|---|---|---|---|---|---|---|---|---|---|---|---|
| ಗ | ಎ | ಕಾ | ತೆ | ದ | ಸು | ತೆ | ನು | ಕ್ಕೆ | ಕಾ | ಲೀ | ಣ್ಣೆ |
| ಹ | ಕ್ಕೆ | ಲೀ | ಸ | ತ್ತು | ಹೋ | ದ | ನು | ಗೆ | ಶ್ಯ | ಷ್ಟು | ಎ |
| ಳ್ಳ | ಅ | ಮ | ಯ | ಶ್ಯ | ಸಿ | ನೆ | ಹಿ | ತ್ತು | ಷ್ಟು | ವ | ಳು |
| ತ್ತು | ವ | ವ | ಣ್ಣೆ | ಕಿ | ಳು | ಗ | ತ್ತಾ | ಟ್ಟಿ | ನ | ಗು | ಮ |
| ದ | ಶ್ಯ | ತೆ | ದು | ಹಿ | ಊ | ವ | ನು | ಸು | ದ | ಕಾ | ದ |
| ತೆ | ಕ | ಬ | ರೊ | ಟ್ಟು | ದು | ಟ | ದ | ವು | ಗಿ | ಸಾ | ಕಾ |
| ರೊ | ತೆ | ಕಾ | ಹಿ | ವು | ಮ | ಊ | ಬಾ | ಕ್ಕೆ | ಸ | ದ | ಸು |
| ಟ್ಟಿ | ಗ | ಮ | ನ | ಕ್ಕೆ | ಬಾ | ರ | ದ | ವು | ಗ | ಳು | ಒ |
| ಸು | ಳು | ಷ್ಟು | ಳು | ಗ | ಹಿ | ವೆ | ಧ | ವಿ | ತೆ | ರೊ | ತೆ |





## ಪ್ರಶ್ನೆಗಳು ಮತ್ತು ಉತ್ತರಗಳು ೧೨

**(ಹಿರಿಯ ವಿದ್ಯಾರ್ಥಿಗಳಿಗೆ)**

1. **ದೇವರು ನಿಮ್ಮ ಅವಶ್ಯಕತೆ ಪೂರೈಸಿರುವ ಸಮಯದಿಂದ ನಿಮ್ಮ ಸಾಕ್ಷಿ ಏನಾದರೂ ಇದೆಯೇ? ಹಂಚಿಕೊಳ್ಳಿರಿ. (ವಿದ್ಯಾರ್ಥಿಗಳಿಗೆ ಹಂಚಿಕೊಳ್ಳಲು ಸಮಯ ಕೊಡಿರಿ.)**
2. **ದೇವರು ನನ್ನನ್ನು ಯಾಕೆ ಉಂಟುಮಾಡಿದನು? (ದೇವರ ಪ್ರೀತಿ, ಆತನನ್ನು ಸೇವೆ ಮಾಡಲು ಇರುವ ಆಯ್ಕೆಗಳ ಮಾತನಾಡಿರಿ ಮತ್ತು ನಿಮ್ಮ ವರಗಳು, ತಲಾಂತುಗಳು, ಆದ್ಯತೆಗಳು ಹಾಗೂ ಮನೋಭಾವನೆಗಳ ಬಗ್ಗೆ ದೇವರಿಗೆ ಗೊತ್ತಿರುವ ಸಂಗತಿಗಳ ಬಗ್ಗೆ ಚರ್ಚಿಸಿರಿ.)**
3. **ಒಂದುವೇಳೆ ದೇವರು ಎಲ್ಲವನ್ನು ನೋಡುತ್ತಾನೆಂದರೆ, ಆತನು ನಮ್ಮ ತಪ್ಪುಗಳನ್ನೂ ನೋಡುತ್ತಾನೆ. ಯಾವುದಾದರು ತಪ್ಪು ಮಾಡಿ ಯಾರಾದರು ಸಿಕ್ಕಿಕೊಂಡರೆ ಅವರ ಮನಸ್ಥಿತಿ ಹೇಗಿರುತ್ತದೆ? ಇಂಥ ಪರಿಸ್ಥಿತಯಲ್ಲಿ, ನೀವು ನಿಮ್ಮ ತಪ್ಪನ್ನು ಒಪ್ಪಿಕೊಳ್ಳುತ್ತೀರೋ? (ತಪ್ಪು ಒಪ್ಪಿಕೊಳ್ಳುವದು ಎಷ್ಟು ಕಷ್ಟ ಎಂಬದರ ಬಗ್ಗೆ ಮಾತನಾಡಿರಿ. ನಾವು ಯಾವ ಕೆಟ್ಟ ಕೆಲಸವನ್ನೂ ಮಾಡಿಲ್ಲ ಮತ್ತು ಯಾರ ಕೈಗೂ ಸಿಕ್ಕಿಲ್ಲ ಎಂಬದಾಗಿ ಹೇಳಲು ಅನುಮತಿಸಬೇಡಿರಿ, ಯಾಕಂದರೆ ಅವರು ಸುಳ್ಳು ಹೇಳುವವರಾಗಿದ್ದಾರೆ!)**

## ಆಟ ೧೨


ಐ ಪಾಪ್ ದ ಬಲೂನ್!

1. ಆಟ ಪ್ರಾರಂಭಿಸಲು, ಪ್ರತಿಯೊಂದು ಮಗುವಿನ ಮೊಣಕಾಲಿಗೆ ಬಲೂನ್ ಕಟ್ಟಿರಿ.
2. ಹಾಡು ಹಾಡಿಸಿರಿ ಮತ್ತು ಮಕ್ಕಳನ್ನು ಹಾಡು ಹಾಡಲು ಆಹ್ವಾನಿಸಿರಿ.
3. ಮಕ್ಕಳೆಲ್ಲರೂ ತಮ್ಮ ಬಲೂನ್ ಉಳಿಸಿಕೊಳ್ಳಬೇಕು ಮತ್ತು ಇತರರ ಬಲೂನ್ ಒಡೆದುಹಾಕಲು ಪ್ರಯತ್ನಿಸಬೇಕು.
4. ಯಾವ ಮಕ್ಕಳ ಬಲೂನ್ ಒಡೆದು ಹೋಗುತ್ತದೋ ಅವರು ಆಟದಿಂದ ಹೊರಗೆ ಹೋಗಬೇಕು.



ಮುಖ್ಯ ಉದ್ದೇಶ: ಇತರರ ಬಲೂನ್ ಒಡೆದು ಹಾಕಬೇಕು, ಆದರೆ ಅವರು ನಮ್ಮ ಬಲೂನ್ ಒಡೆಯಲು ಅವಕಾಶ ಕೊಡಬಾರದು.

## ಹಾಜರಾತಿ ೧೨




ತರಗತಿಯಲ್ಲಿ ಭಾಗವಹಿಸಿದ್ದಕ್ಕೆ ಮಕ್ಕಳಿಗೆ ಇಂದಿನ ಕಾರ್ಡ್ ಕೊಡಿರಿ. ವೀರರ ಆಟವನ್ನು ಆಡಲು ಮತ್ತೊಂದು ಕಾರ್ಡ್ ಪಡೆಯುವ ಸಲುವಾಗಿ ಮುಂದಿನ ವಾರ ತರಗತಿ ಬರುವಂತೆ ಅವರನ್ನು ಪ್ರೋತ್ಸಾಹಪಡಿಸಿರಿ ಮತ್ತು ಅಭಿನಂದಿಸಿರಿ. ಇಂದಿನ ಕಾರ್ಡ್ ಯಾವುದೆಂದರೆ:
ಎಲೀಯ

## ಹೋಮ್ ವರ್ಕ್ ೧೨

ಹಾಳೆಯ ಮೇಲೆ ನೀವು ಅಥವಾ ಮಕ್ಕಳು "ಕರ್ತನೇ ಗುಡ್ ಮಾರ್ನಿಂಗ್" ಎಂದು ಬರೆಯಿರಿ ಮತ್ತು ಅದನ್ನು ನಿಮ್ಮ ಬೆಡ್ ರೂಮ್ ನಲ್ಲಿ ಹಾಕಿದರೆ ಬೆಳಗ್ಗೆ ಎದ್ದಕೂಡಲೇ ಅದನ್ನು ನೋಡಬಹುದು. ದೇವರು ಯಾವಾಗಲೂ ನಿಮ್ಮ ಜೊತೆಯಲ್ಲಿದ್ದಾನೆ ಎಂಬದನ್ನು ನೆನಪಿಸಿಕೊಳ್ಳಲು ಇದರಿಂದ ಸಹಾಯ ಮಾಡುತ್ತದೆ. ಈ ವಾರದಲ್ಲಿ ಒಂದುವೇಳೆ ನಿಮಗೆ ಏನಾದರೂ ತೊಂದರೆಯಾದರೆ, ದೇವರನ್ನು ಬೇಡಿಕೊಳ್ಳಿರಿ. ದೇವರು ಯಾವ ರೀತಿ ಒದಗಿಸುತ್ತಾನೆ ಎಂಬದನ್ನು ನೋಡಿರಿ ಮತ್ತು ಮುಂದಿನ ವಾರ ಅದನ್ನು ನಿಮ್ಮ ಟೀಚರ್ ಗೆ ತಿಳಿಸಿರಿ.

ಓದಿರಿ

ದಿನ 1: 1 ಅರಸು 18:16-21

ದಿನ 2: 1 ಅರಸು 18:22-26

ದಿನ 3: 1 ಅರಸು 18:36-39

ದಿನ 4: 1 ಅರಸು 18:36-39

ದಿನ 5: 1 ಅರಸು 18:40-46

# ೧೩. ಒಬ್ಬನೇ ದೇವರು



**ಸತ್ಯವೇದ ಕಥೆ: ಎಲೀಯ ಮತ್ತು ಪ್ರವಾದಿಗಳು**

**1 ಅರಸು 18:16-46**

## ಕಂಠಪಾಠ ವಚನ ೧೩

"ಸರ್ವೇಶ್ವರಾ, ನೀನೆನ್ನ ದೇವನು, ಏಕೆನೆ ನೀನು ಸತ್ಯಸ್ವರೂಪನು, ನಿಷ್ಠಾವಂತನು, ಆದಿ ಯೋಜನೆಗಳನು ಪೂರೈಸುವವನು, ಅದ್ಭುತಕಾ ರ್ಯಗಳನು ಎಸಗಿದಂತವನು. ಘನಪಡಿಸುವೆ ನಾ ನಿನ್ನನು, ಸ್ತುತಿಸುವೆನು ನಿನ್ನ ನಾಮ ಮಹಿಮೆಯನು." ಪ್ರವಾದಿ ಯೆಶಾಯನ ಗ್ರಂಥ 25:1

## ಕಥೆಯ ಅವಶ್ಯಕತೆ ೧೩



ಒಂದುದಿನ ಪಬ್ಲಿಕ್ ಶಾಲೆಯಲ್ಲಿ, ತನ್ನ ಶಾಲೆಯ ಟೀಚರ್ ಗೆ ಹುಷಾರಿಲ್ಲ ಎಂಬದು ರಾಜುವಿಗೆ ಗೊತ್ತಾಯಿತು. ಗುಣಪಡಿಸಲು ಶಕ್ತನಾರಾಗಿರುವ ಒಬ್ಬರ ಬಗ್ಗೆ ನನಗೆ ಗೊತ್ತಿದೆ ಎಂದು ರಾಜು ಹೇಳಿದನು. ಆಗ ಟೀಚರ್ ಹೇಳಿದ್ದೇನೆಂದರೆ, "ಚಿಂತಿಸಬೇಡ; ನಾನೊಬ್ಬ ಸ್ತ್ರೀಯ ಹತ್ತಿರ ಹೋಗಿದ್ದೆನು, ಇದಕ್ಕೆ ಪರಿಹಾರವನ್ನು ಆಕೆ ನನಗೆ ತಿಳಿಸಿದ್ದಾರೆ. ಈಗಾಗಲೇ ನಾನು ಚೇತರಿಸಿಕೊಂಡಿದ್ದೇನೆ." ರಾಜುವಿನ ಸಹಾಯವನ್ನು ಟೀಚರ್ ಅಂಗೀಕರಿಸಿಕೊಳ್ಳಲಿಲ್ಲ . . .

## ಮುಖ್ಯ ಪಾಠ ೧೩

ಕಳೆದ ಸಲ ನಾವು ಪ್ರವಾದಿಯಾದ ಎಲೀಯನ ಬಗ್ಗೆ ಕಲಿತುಕೊಂಡೆವು. ಆ ಸಮಯದಲ್ಲಿ, ಇಸ್ರಾಯೇಲ್ಯರು ಅನೇಕ ಅನ್ಯದೇವತೆಗಳನ್ನು ಆರಾಧಿಸುತ್ತಿದ್ದರು. ನಾವು ಬೇರೆಯವುಗಳನ್ನು ಆರಾಧಿಸುವದು ದೇವರಿಗೆ ಇಷ್ಟವಿಲ್ಲ ಯಾಕಂದರೆ ಆತನೊಬ್ಬನೇ ದೇವರೇ ಹೊರತು ಬೇರೆ ಯಾರೂ ಇಲ್ಲ. ಯೇಸು ಕ್ರಿಸ್ತನು ಹೇಳಿರುವದೇನೆಂದರೆ ನಾವು ಇಬ್ಬರು ಯಜಮಾನರನ್ನು ಸೇವಿಸಲು ಆಗುವದಿಲ್ಲ, ನಾವು ದ್ವೇಷಿಸಿ ಇನ್ನೊಬ್ಬನನ್ನು ಪ್ರೀತಿಸುತ್ತೇವೆ ಅಥವಾ ಒಬ್ಬನಿಗೆ ಭಕ್ತಿಯುಳ್ಳವರಾಗಿದ್ದು ಇನ್ನೊಬ್ಬನನ್ನು ಕಡೆಗಣಿಸುತ್ತೇವೆ (ಮತ್ತಾಯ 6:24). ಪ್ರವಾದಿಯಾದ ಎಲೀಯನು ಎಲ್ಲಾ ಇಸ್ರಾಯೇಲ್ಯರನ್ನು ಮತ್ತು ಸುಳ್ಳು ದೇವತೆಗಳ ಪ್ರವಾದಿಗಳನ್ನು ಕರ್ಮೆಲ್ ಬೆಟ್ಟಕ್ಕೆ ಕರೆದುಕೊಂಡು ಹೋದನು. ಆತನು ಇಸ್ರಾಯೇಲ್ಯರಿಗೆ ಒಬ್ಬನೇ ನಿಜದೇವರನ್ನು ಆರಿಸಿಕೊಳ್ಳಿರಿ ಮತ್ತು ಆತನ ಸೇವೆ ಮಾಡಿರಿ ಎಂದು ಹೇಳಿದನು. ಅವನು ಬಾಳನ ಪ್ರವಾದಿಗಳಿಗೆ ಯಜ್ಞವೇದಿಯನ್ನು ಮಾಡಿ ಅದರ ಮೇಲೆ ಕಾಣಿಕೆಯನ್ನು ಸಿದ್ಧಮಾಡಿರಿ, ನಂತರ ನಾನೂ ನನ್ನ ದೇವರಿಗೆ ಹಾಗೆಯೇ ಮಾಡುತ್ತೇನೆ ಎಂದು ಹೇಳಿದನು. ಇಬ್ಬರಲ್ಲಿ ಯಾರ ದೇವರು ಬೆಂಕಿಯ ಮೂಲಕ ಉತ್ತರಿಸುತ್ತಾನೋ ಆತನೇ ನಿಜವಾದ ದೇವರು. ರಾಜುವಿನ ಟೀಚರ್ ವಿಷಯದಲ್ಲಿ ಈಗಾಗಲೇ ನಾವು ಇಂತಹ ಉದಾಹರಣೆಯನ್ನು ನೋಡಿದ್ದೇವೆ. ಅವನು ಹೇಳಿದ ಹಾಗೆಯೇ ಬಾಳನ ಪ್ರವಾದಿಗಳು ಮಾಡಿದರು, ಆದರೆ ಅವರಿಗೆ ಯಾವ ಉತ್ತರವೂ ದೊರೆಯಲಿಲ್ಲ. ಕೆಲವು ಸಮಯವಾದ ನಂತರ ಎಲೀಯನು ಅವರಿಗೆ ನಿಮ್ಮ ದೇವರು ನಿದ್ದೆಹೋಗಿರಬಹುದೇನೋ ಅಥವಾ ಪ್ರಯಾಣಿಸುತ್ತಿರಬಹುದೇನೋ ಎಂದು ಕೇಳಿದನು. ನಾವು ಎಂದಿಗೂ ಚಿಂತೆಮಾಡುವ ಅವಶ್ಯಕತಯಿಲ್ಲ ಯಾಕಂದರ ನಮ್ಮ ಒಬ್ಬನೇ ನಿಜದೇವರು ಎಂದಿಗೂ ನಿದ್ದೆಮಾಡುವದಿಲ್ಲ, ಎಂದಿಗೂ ಪ್ರಯಾಣಿಸುವದಲ್ಲ ಯಾಕಂದರ ಒಂದೇ ಸಮಯದಲ್ಲಿ ಆತನು ಎಲ್ಲಾ ಕಡೆಗಳಲ್ಲಿ ಇರುತ್ತಾನೆ, ಆತನು ಅಗಮ್ಯನಾದ ಜ್ಞಾನಿಯಾಗಿದ್ದಾನೆ ಮತ್ತು ಒಂದೇ ಸಮಯದಲ್ಲಿ ಇಡೀ ಲೋಕವನ್ನು ಪಾಲಿಸುತ್ತಾನೆ. ಆದರೆ ಬಾಳ್ ದೇವರು ಉತ್ತರ ಕೊಡಲೂ ಇಲ್ಲ, ಯಜ್ಞದ ಮೇಲೆ ಬೆಂಕಿಯನ್ನೂ ಸುರಿಸಲಿಲ್ಲ. ಮಧ್ಯಾಹ್ನದ ಸಮಯದಲ್ಲಿ ಎಲೀಯನು ತನ್ನ ಯಜ್ಞವನ್ನು ಸಿದ್ಧಮಾಡಿದನು. ಅವನು ಯಜ್ಞವೇದಿಯನ್ನು ಕಟ್ಟಿದನು ಮತ್ತು ಅದರ ಮೇಲೆ ಕಾಣಿಕೆಯನ್ನು ಹಾಕಿದನು, ನಂತರ ಸುಲಭವಾಗಿ ಬೆಂಕಿ ಹತ್ತದಿರಲಿ ಎಂಬ ಕಾರಣಕ್ಕೆ ನೀರನ್ನು

ಸುತ್ತಲೂ ಸುರಿದನು. ಯಜ್ಞವೇದಿಯ ಸುತ್ತಲೂ ಅಗೆಸಲಾಗಿದ್ದ ಹಳ್ಳದಲ್ಲಿ ನೀರು ತುಂಬುವ ಜನರು ನೀರನ್ನು ಹಾಕಿಸಿದನು. ಎಷ್ಟೇ ಕಠಿಣವಾದರೂ ನಮ್ಮ ದೇವರು ಸರ್ವಶಕ್ತನಾಗಿದ್ದಾನೆ, ಆತನಿಗೆ ಅಸಾಧ್ಯವಾದದ್ದು ಯಾವುದೂ ಇಲ್ಲ. ಎಲೀಯನು ಪ್ರಾರ್ಥನೆ ಮಾಡಿದನು ದೇವರು ಕೂಡಲೇ ಉತ್ತರಿಸಿ ಪರಲೋಕದಿಂದ ಬೆಂಕಿಯನ್ನು ಸುರಿಸಿದನು! ಆ ಬೆಂಕಿ ಕಾಣಿಕೆಯನ್ನು ಮಾತ್ರವಲ್ಲ ಬದಲಾಗಿ ಕಲ್ಲುಗಳು, ನೀರು ಮತ್ತು ಅದರ ಸುತ್ತಲಿದ್ದ ಧೂಳನ್ನು ಸಹ ದಹಿಸಿಬಿಟ್ಟಿತು. ಯೇಸು ಕ್ರಿಸ್ತನು ಹೇಳಿರುವದೇನೆಂದರೆ ನಾನೇ ಜೀವವೂ, ಸತ್ಯವೂ ಆಗಿದ್ದೇನೆ, ದೇವರ ಬಳಿಗೆ ನಡೆಸುವ ಪರಲೋಕದ ಬಾಗಿಲು ನಾನೇ ಆಗಿದ್ದೇನೆ **(ಯೋಹಾನ 14:6)**. ಯೇಸು ಕ್ರಿಸ್ತನನ್ನು ಬಿಟ್ಟರೆ ಪರಲೋಕಕ್ಕೆ ಬೇರೆ ಯಾವುದೇ ಮಾರ್ಗವಿಲ್ಲ ಯಾಕಂದರೆ ಒಬ್ಬನೇ ನಿಜವಾದ ದೇವರನ್ನು ಬಿಟ್ಟರೆ ಬೇರೆ ಯಾವ ದೇವರುಗಳೂ ಇಲ್ಲ. ನಮ್ಮ ದೇವರನ್ನು ಮಾತ್ರವೇ ಆರಾಧನೆ ಮಾಡುವದೆಂದರೆ ಬೇರೆ ಯಾವುದೇ ಧರ್ಮವನ್ನು ಅನುಸರಿಸದಿರುವದು ಅಥವಾ ಸೇವಿಸದಿರುವದು ಆಗಿದೆ. ಆದರೆ ನಮ್ಮನ್ನು ಸುಲಭವಾಗಿ ಬಲೆಯೊಳಗೆ ಬೀಳಿಸುವ ಮತ್ತೊಂದು ಕಾರ್ಯವಿದೆ. ನಾವು ಇಬ್ಬರು ಯಜಮಾನರನ್ನು ಸೇವಿಸಲಾರೆವು ಎಂದು ಯೇಸು ಕ್ರಿಸ್ತನು ಹೇಳಿದ ಕೂಡಲೇ, ಜನರು ಸೇವೆ ಮಾಡುವ ಮತ್ತೊಂದು ಕಾರ್ಯದ ಬಗ್ಗೆ ಹೇಳಿದನು. ನಾವು ದೇವರನ್ನು ಮತ್ತು ಧನವನ್ನು ಸೇವಿಸಲಾರೆವು ಎಂದು ಯೇಸು ಕ್ರಿಸ್ತನು ಹೇಳಿದನು **(ಮತ್ತಾಯ 6:24)**. ಉತ್ತಮವಾದ ಬಟ್ಟೆಗಳು, ಸುಂದರವಾದ ಕಾರ್, ಮನೆ, ಆಟದ ವಸ್ತುಗಳು ಮತ್ತು ಸ್ಥಾನಮಾನವನ್ನು ಸುಲಭಾಗಿ ಬಯಸಬಹುದು. ಇವುಗಳನ್ನು ಯಾವಾಗ ಬೇಕಾದರೂ ನೀವು ಪಡೆಯಬಹುದು ಆದರೆ ದೇವರಿಗಿಂತ ಬೇರೆ ಯಾವುದೇ ನಿಮ್ಮ ಜೀವಿತದಲ್ಲಿ ಪ್ರಾಮುಖ್ಯವಾಗಲು ಅವಕಾಶ ಕೊಡಬೇಡಿರಿ. ಬದಲಾಗಿ ದೇವರ ಸೇವೆ ಮಾಡಲು ಮತ್ತು ಆತನ ಜನರನ್ನು ನೋಡಿಕೊಳ್ಳಲು ಅವುಗಳನ್ನು ಉಪಯೋಗಿಸಿರಿ. ಕಳೆದ ವಾರ ನಾವು ದೇವರ ರಾಜ್ಯಕ್ಕಾಗಿ ಮೊದಲು ತವಕಪಡಬೇಕು ಮತ್ತು ದೇವರು ನಮ್ಮನ್ನು ನೋಡಿಕೊಳ್ಳುತ್ತಾನೆಂಬ ಭರವಸೆ ನಮ್ಮಲ್ಲಿರಬೇಕು ಎಂಬದನ್ನು ನಾವು ಕಲಿತುಕೊಂಡೆವು **(ಮತ್ತಾಯ 6:33)**. ಯೇಸು ಕ್ರಿಸ್ತನು ಹೇಳಿರುವದೇನಂದರೆ ದೇವರನ್ನು ಆರಾಧಸಿರಿ ಮತ್ತು ಆತನನ್ನು ಮಾತ್ರವೇ ಸೇವಿಸಿರಿ **(ಲೂಕ 4:8)**.

ನಾನು ಒಬ್ಬನೇ ದೇವರನ್ನು ಆರಾಧಸುವ ಮತ್ತು ನನ್ನ ಜೀವಿತದಲ್ಲಿ ಆತನಿಗೆ ಆದ್ಯತೆ ಕೊಡುವ ಆಯ್ಕೆ ಮಾಡಿಕೊಳ್ಳುತ್ತೇನೆ.

## ವಿಶ್ಲೇಷಣ ೧೩


ಕೆಲವು ದಿವಸಗಳಾಯಿತು, ಟೀಚರ್ ಕೆಲಸಕ್ಕೆ ಬರುತ್ತಿದ್ದರು ಆದರೆ ಆರೋಗ್ಯವಾಗಿರಲಿಲ್ಲ. ಆದರೆ ಒಂದು ದಿನ ಅವರಿಗೆ ಬಹಳ ಬೇಸರವಾಯಿತು ಆಗ ರಾಜುವನ್ನು ನೆನಪಿಸಿಕೊಂಡರು ಮತ್ತು ಅವನೊಂದಿಗೆ ಮಾತನಾಡಿದರು. ರಾಜು ತನ್ನ ಸಭಾಪಾಲಕರನ್ನು ಟೀಚರ್ ಬಳಿಗೆ ಕರೆದುಕೊಂಡು ಬಂದನು. ಅವರಿಬ್ಬರೂ ಆತನಿಗಾಗಿ ಪ್ರಾರ್ಥನ ಮಾಡಿದರು, ಕೂಡಲೇ ಆತನಿಗೆ ಗುಣವಾಯಿತು. ಟೀಚರ್ ಯೇಸು ಕ್ರಿಸ್ತನನ್ನು ತಮ್ಮ ಹೃದಯದಲ್ಲಿ ಅಂಗೀಕರಿಸಿಕೊಂಡರು ಮತ್ತು ಎಲ್ಲಾ ಪ್ರಭಾವಗಳು ದೇವರಿಗೆ ಸೇರಿದವುಗಳು ಎಂಬದನ್ನು ಒಪ್ಪಿಕೊಂಡರು.



## ಚಟುವಟಿಕೆ ೧೩

ಗುರುತು ಸೂಚಕ

ಚಿತ್ರದಲ್ಲಿ ತೋರಿಸಿರುವ ಪ್ರಕಾರ ಪ್ರತಿಯೊಂದು ಮಗುವಿಗಾಗಿ ಹಾಳೆಯನ್ನು ಕತ್ತರಿಸಿರಿ. ಪ್ರತಿಯೊಂದು ಮಗು ಚಿತ್ರದಲ್ಲಿ ತಿಳಿಸಲಾಗಿರುವ ವಿಷಯವನ್ನು ಬರೆಯಬೇಕು ನಂತರ ಹೆಚ್ಚು ಕಾಲ ಬಾಳಿಕೆಗೆ ಬರುವ ಸಲುವಾಗಿ ಅದನ್ನು ಲ್ಯಾಮಿನೇಟ್ ಮಾಡಿಸಬೇಕು. ಕುತ್ತಿಗೆಗೆ ಹಾಕಿಕೊಳ್ಳುವ ಸಲುವಾಗಿ ಚೈನ್, ರಿಬ್ಬನ್ ಅಥವಾ ದಾರವನ್ನು ಅದಕ್ಕೆ ಸೇರಿಸಿರಿ. ಅವರು ಕರ್ತನಾದ ಯೇಸು ಕ್ರಿಸ್ತನಿಗೆ ಮಾತ್ರವೇ ಸಂಬಂಧಪಟ್ಟವರು ಎಂಬದನ್ನು ನೆನಪಿಸಿಕೊಳ್ಳಲು ಅದು ಸಹಾಯಮಾಡುತ್ತದೆ.







## ಟೈಮ್ ಲೈನ್ ೧೩

ಎಲೀಯ ಮತ್ತು ಪ್ರವಾದಿಗಳ ಘಟನೆಯು ಯಾವ ಇಸವಿಯಲ್ಲಿ ಸಂಭವಿಸಿತು? ಉ. ಬಹುಶಃ ಕ್ರಿ.ಪೂ **866** ರಲ್ಲಿ ಸಂಭವಿಸಿರಬಹುದು.

## ಒಗಟಿನ ಉತ್ತರಗಳು ೧೩

| | | | | | | | | | | |
|---|---|---|---|---|---|---|---|---|---|---|
| ಟ್ಟ | ರಾ | ಪ್ರ | ನೀ | ಕಾ | ನೀ | ಲ್ | ಕಿ | ಬೆಂ | ಪ್ರ | ಕಿ |
| ದಿ | ದೇ | ವ | ರು | ಳ್ | ಯ | ರು | ಶ | ಲ್ | ಕಾ | ಸ |
| ಲ್ | ಕಿ | ಟ್ಟ | ಶ | ಲೀ | ನೆ | ಜ್ಞ | ಯ | ಪ್ರ | ಳ್ | ರ್ವ |
| ಆ | ಸೇ | ಶ | ಎ | ಬೆಂ | ಕಿ | ದಿ | ವೇ | ವಾ | ಬೆಂ | ಶ |
| ರಾ | ರು | ವೆ | ಪ್ರ | ಪ್ರೀ | ರಾ | ಜ್ಞ | ಳ್ಯ | ದಿ | ಟ್ಟ | ಕ್ತ |
| ಧ | ಟ್ಟ | ಲ್ | ನೀ | ತಿ | ಬಾ | ಹ | ಳು | ಗ | ರಾ | ನು |
| ನೆ | ಕಾ | ಕಾ | ರ್ಮೆ | ಲ್ | ಬೆ | ಟ್ಟ | ಕಾ | ಳು | ಶ | ದಿ |
| ಕಿ | ಳ್ | ಣಿ | ಬೆಂ | ಟ್ಟ | ಲ್ | ನೆ | ಪ್ರ | ಕಿ | ಬಾ | ರು |
| ಕಾ | ದಿ | ಶ | ಕೆ | ಸೆ | ವ | ರ | ಭ | ಯ | ನೀ | ಳ್ |






## ಪ್ರಶ್ನೆಗಳು ಮತ್ತು ಉತ್ತರಗಳು ೧೩


**(ಹಿರಿಯ ವಿದ್ಯಾರ್ಥಿಗಳಿಗೆ)**

1. ದೇವರನ್ನು ಬಿಟ್ಟು ಬೇರೆ ಯಾವ ಕಾರ್ಯಗಳನ್ನು ಸೇವಿಸುವ ಅಥವಾ ಆರಾಧಿಸುವ ಶೋಧನೆ ನಮಗೆ ಎದುರಾಗುತ್ತದೆ? (ಹಲವು ಸ್ಥಳಗಳಲ್ಲಿ, ಬೇರೆ ದೇವರುಗಳನ್ನು ಸೇವಿಸುವ ಶೋಧನೆ ಎದುರಾಗುತ್ತದೆ, ಉದಾಹರಣೆಗೆ, ಕ್ರೈಸ್ತನಾಗಿರುವದು ಮೆಚ್ಚಿಕೆಯ ಕಾರ್ಯವಾಗಿರದೆ ಇದ್ದರೆ ಅಥವಾ ಕುಟುಂಬದರ ಒತ್ತಡ ನಿಮ್ಮ ಮೇಲಿರುವಾಗ ಅಥವಾ ಶಾಲೆಯಲ್ಲಿ ಏನಾದರೂ ಕಾರ್ಯಕ್ರಮ ಇರುವಾಗ ಹೀಗಾಗುತ್ತದೆ. ಇತರೆ ಕಾರ್ಯಗಳನ್ನು ಸೇವಿಸುವ ಶೋಧನೆಗಳೂ ಎದುರಾಗುತ್ತವೆ, ಉದಾಹರಣೆಗೆ, ಹಣ, ಹೆಸರು, ಪ್ರಖ್ಯಾತಿ, ಸೌಂದರ್ಯ, ಆಹಾರ, ಸ್ಥಾನ, ಗರ್ವ ಮತ್ತು ಸ್ವಾರ್ಥ ಇತ್ಯಾದಿ. ಉದಾಹರಣೆಗಳ ಬಗ್ಗೆ ಚರ್ಚಿಸಿರಿ.)
2. ಇತರೆ ಧರ್ಮಗಳ ಇತರೆ ದೇವರುಗಳು ನಿಜವಾಗಿಯೂ ಯಾರು? (ವಾಸ್ತವದಲ್ಲಿ ಅವರು ದೇವರುಗಳೇ ಅಲ್ಲ, ಬದಲಾಗಿ ದುರಾತ್ಮಗಳಾಗಿದ್ದು ಜನರನ್ನು ವಂಚಿಸಲು ಮತ್ತು ನಮ್ಮನ್ನು ದೇವರಿಂದ ದೂರ ಮಾಡಲು ಪ್ರಯತ್ನಿಸುವಂಥವುಗಳಾಗಿವೆ ಎಂದು ಸತ್ಯವೇದವು ಹೇಳುತ್ತದೆ. ಸತ್ಯವೇದವು ಇನ್ನೂ ಹೇಳುವದೇನೆಂದರೆ, ದುರಾತ್ಮಗಳಾಗಿರುವ ಇತರೆ ದೇವರುಗಳಿಗೆ ನ್ಯಾಯವಿಚಾರಿಸುತ್ತಾನೆ ಮತ್ತು ಅವರನ್ನು ಶಾಶ್ವತವಾದ ಬೆಂಕಿಯ ಕೆರೆಗೆ ಹಾಕಲಾಗುವದು ಆದರೆ ಕರ್ತನಾದ ಯೇಸು ಕ್ರಿಸ್ತನಲ್ಲಿ ನಂಬಿಕೆ ಹಾಗೂ ಭರವಸೆಯನ್ನಿಡುವವರು ಶಾಶ್ವತವಾಗಿ ದೇವರೊಂದಿಗೆ ಪರಲೋಕದಲ್ಲಿ ಜೀವಿಸುವರು. ದೇವರು ಸತ್ಯವೇದದಲ್ಲಿ ಅನೇಕ ಸಲ ಹೆದರಬೇಡಿರಿ ಎಂದು ಹೇಳಿದ್ದಾನೆ: ಯಾಕಂದರೆ ಇಡೀ ಲೋಕದಲ್ಲಿ ನಾವು ಹೆದರಬೇಕಾಗಿರುವದು ಆತನಿಗೆ ಮಾತ್ರವೇ

ಆಗಿದೆ ಆದರೆ ಆತನು ನಮ್ಮ ಪಕ್ಷದಲ್ಲಿದ್ದು ನಮ್ಮನ್ನು ಪ್ರೀತಿಸುವವನಾಗಿದ್ದಾನೆ. (1 ಕೊರಿಂಥ 10:20; ಮತ್ತಾಯ 10:28-31; ಕೀರ್ತನೆ 103:13; ರೋಮಾ 8:31)

3. ನಾನು ದೇವರಿಂದ ದೂರ ಹೋಗಬಹುದೇ? (ದೇವರಲ್ಲಿ ನಂಬಿಕೆಯನ್ನಿಟ್ಟು ಆತನ ಸೇವೆ ಮಾಡುವದು ಇಂದು ಮಾಡಿ ನಾಳೆ ಸುಮ್ಮನಾಗುವ ಕಾರ್ಯವಲ್ಲ. ದೇವರನ್ನು ಬಿಟ್ಟು ದೂರ ಹೋಗಿರುವವರ (ಹೆಸರು ಹೇಳದೆ) ಅವರ ಬಗ್ಗೆ ಮಾತನಾಡಿರಿ.

## ಆಟ ೧೩



ರಿಲೇ ಓಟ

ಮಕ್ಕಳನ್ನು ಎರಡು ತಂಡವಾಗಿ ವಿಭಜಿಸಿರಿ ಮತ್ತು ಅವರನ್ನು ಕೋಣೆಯಲ್ಲಿ ಅಥವಾ ಆಟವಾಡುವ ಸ್ಥಳದಲ್ಲಿ ಎರಡು ಸಾಲಾಗಿ ನಿಲ್ಲಿಸಿರಿ. ಒಬ್ಬೊಬ್ಬರಾಗಿ ಆಟಗಾರರು ಒಂದು ಕಾಲಿನಲ್ಲಿ ಕುಂಟುತ್ತಾ ಮತ್ತೊಂದು ಕಡೆಗೆ ಜಿಗಿಯಬೇಕು ಮತ್ತು "ನಾವು ದೇವರನ್ನು ಸೇವಿಸುತ್ತೇವೆ" ವಾಕ್ಯದ ಒಂದೊಂದೇ ಪದಗಳನ್ನು ಜೋಡಿಸಬೇಕು. ಯಾವ ತಂಡ ಮೊದಲು ವಾಕ್ಯವನ್ನು ಪೂರ್ತಿಗೊಳಿಸುತ್ತದೆಯೋ ಅವರು ಗೆಲ್ಲುತ್ತಾರೆ.

## ಹಾಜರಾತಿ ೧೩




ತರಗತಿಯಲ್ಲಿ ಭಾಗವಹಿಸಿದ್ದಕ್ಕೆ ಮಕ್ಕಳಿಗೆ ಇಂದಿನ ಕಾರ್ಡ್ ಕೊಡಿರಿ. ವೀರರ ಆಟವನ್ನು ಆಡಲು ಮತ್ತೊಂದು ಕಾರ್ಡ್ ಪಡೆಯುವ ಸಲುವಾಗಿ ಮುಂದಿನ ವಾರ ತರಗತಿ ಬರುವಂತೆ ಅವರನ್ನು ಪ್ರೋತ್ಸಾಹಪಡಿಸಿರಿ ಮತ್ತು ಅಭಿನಂದಿಸಿರಿ.

ಇಂದಿನ ಕಾರ್ಡ್ ಯಾವುದೆಂದರೆ:

ದೇವರ ಬೆಂಕಿ

## ಹೋಮ್ ವರ್ಕ್ ೧೩

ನಿಮಗೆ ಬಹಳ ಪ್ರಿಯವಾದ ವಸ್ತುವಿನ ಬಗ್ಗೆ ಯೋಚಿಸಿರಿ ಅಂದರೆ ಆಟದ ಗೊಂಬೆಗಳು, ಬಟ್ಟೆಗಳು, ಬ್ಯಾಗ್, ಹಣ ಇತ್ಯಾದಿ. ಅದರ ಮೂಲಕ ದೇವರ ಸೇವೆ ಹೇಗೆ ಮಾಡಬಹುದು ಅಥವಾ ಇತರರಿಗೆ ಸಹಾಯ ಮಾಡಬಹುದು ಎಂದು ಯೋಚಿಸಿರಿ. ಒಂದುವೇಳೆ ಅದು ಆಟದ ಗೊಂಬೆಯಾಗಿದ್ದರೆ ಇತರರಿಗೆ ಕೊಡಬಹುದು ಮತ್ತು ಅವರು ಅದರಿಂದ ಆಡಬಹುದು. ಒಂದುವೇಳೆ ಬಟ್ಟೆಯಾಗಿದ್ದರೆ, ಅದನ್ನು ಇತರರಿಗೆ ಕೊಡಬಹುದು. ಒಂದುವೇಳೆ ಹಣವಾಗಿದ್ದರೆ ಅದನ್ನು ಸಭೆಗೆ ಅಥವಾ ಅವಶ್ಯಕತೆಯಲ್ಲಿರುವವರಿಗೆ ಕೊಡಿರಿ. ಒಂದುವೇಳೆ ಅದು ಬೌತಿಕವಲ್ಲದ್ದಾಗಿದ್ದರೆ, ಉದಾಹರಣೆಗೆ ತಲಾಂತು ಅಥವಾ ವಿದ್ಯಾಭ್ಯಾಸ ಮಾಡುವ ಯೋಚನೆಯಾಗಿದ್ದರೆ, ಪ್ರಾರ್ಥನೆ ಮಾಡಿರಿ ಮತ್ತು ದೇವರಿಗೆ ಹೀಗೆ ಹೇಳಿರಿ, "ದೇವರೇ ಈ ತಲಾಂತು, ವಿದ್ಯಾಭ್ಯಾಸ, ಸಾಮರ್ಥ್ಯ, ಕನಸು, ಇತ್ಯಾದಿ. ನಿನ್ನದ್ದಾಗಿದೆ. ಇದರ ಮೂಲಕ ನಾನು ಹೇಗೆ ನಿನ್ನ ಸೇವೆ ಮಾಡಬೇಕು ಮತ್ತು ಇತರರಿಗೆ ಸಹಾಯ ಮಾಡಬೇಕು ಎಂಬದನ್ನು ದಯವಿಟ್ಟು ನನಗೆ ತಿಳಿಸು. ಆಯ್ಕೆ: ಒಂದುವೇಳೆ ನಿಮ್ಮ ಕುಟುಂಬದವರು ಅಥವಾ ಸಮುದಾಯದವರು ಬೇರೆ ದೇವರುಗಳನ್ನು ಆರಾಧಿಸುತ್ತಿರುವಂಥ ಪರಿಸ್ಥಿತಿಯಲ್ಲಿ ನೀವು ಜೀವಿಸುತ್ತಿರುವದಾದರೆ, ಅದರಲ್ಲಿ ಭಾಗವಹಿಸದಿರಲು ಪ್ರಯತ್ನಿಸಿರಿ. ಒಂದುವೇಳೆ ಭಾಗವಹಿಸಲೇಬೇಕಾದ ಪರಿಸ್ಥಿತಿ ಇದ್ದರೆ, ನಿಮ್ಮ ಪೂರ್ಣಹೃದಯವನ್ನು ದೇವರಿಗೆ ಒಪ್ಪಿಸಿ ಪ್ರಾರ್ಥನೆ ಮಾಡಿರಿ ಮತ್ತು ನಿಮಗೆ ರಕ್ಷಣೆ ಹಾಗೂ ಆ ಪರಿಸ್ಥಿತಿಯಿಂದ ಹೊರಬರಲು ಸಹಾಯ ಮಾಡುವಂತೆ ಬೇಡಿಕೊಳ್ಳಿರಿ. ಎಲ್ಲರಿಗಿಂತ ಮತ್ತು ಎಲ್ಲವುಗಳಿಗಿಂತ ದೊಡ್ಡವನು ಹಾಗೂ ಬಲಿಷ್ಠನೂ ಆಗಿರುವ ದೇವರು ನಿಮ್ಮ ಹೃದಯವನ್ನು ನೋಡುತ್ತಾನೆ.

ಓದಿರಿ

ಓದುವ ಅಸೈನ್ ಮೆಂಟ್ ಇಲ್ಲ.